Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–44 | ಅಕ್ಟೋಬರ್ 30–ನವೆಂಬರ್ 5, 2023 | ಪುಟ 16 | ರೂ. 10/–
Volume-17 | Issue-44 | October 30-November 5, 2023 | Pages:16 | Price: 10/-

68ನೆಯ ಕರ್ನಾಟಕ ರಾಜ್ಯೋತ್ಸವ




ಕನ್ನಡ: ಅಳಿವು ಉಳಿವಿನ ಪ್ರಶ್ನೆ







ಗಾಝಾದಲ್ಲಿ ನಡೆಯುತ್ತಿರುವುದು ಏನು?



ಕಾಮ್ರೇಡ್
ವಿ.ಎಸ್.ಅಚ್ಯುತಾನಂದನ್ ನೂರು

ಮಹಾನ್ ಅಕ್ಟೋಬರ್ ಕ್ರಾಂತಿ: ಮನುಕುಲದ ಇತಿಹಾಸದ ದೊಡ್ಡ ಅಧ್ಯಾಯ

ಮನುಕುಲದ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ

ಮಹಾನ್ 'ಅಕ್ಟೋಬರ್ ಕ್ರಾಂತಿ'

ಮೂಲ ಲೇಖಕರು: ಆರ್. ಕರುಮಲೈಯನ್
ಭಾವಾನುವಾದ: **ಮುರಳಿ ಕೃಷ್ಣ**

ಬೊಲ್ಶೆವಿಕ್‌ರು ರಷ್ಯಾದ ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದಾರೆ ಎಂದು ಕಾಮ್ರೆಡ್ ಲೆನಿನ್ ನವೆಂಬರ್ 7, 1917 ರಂದು ಘೋಷಿಸಿದರು. (ಹಳೆಯ ಜ್ಯೂಲಿಯನ್ ಕ್ಯಾಲೆಂಡರ್ ಅನುಸಾರ ಈ ದಿನಾಂಕ ಅಕ್ಟೋಬರ್ 25, ಹೀಗಾಗಿ ಇದನ್ನು 'ಅಕ್ಟೋಬರ್ ಕ್ರಾಂತಿ' ಎಂದು ಕರೆಯಲಾಗುವುದು)

ಮಾನವನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಡವರು ಮತ್ತು ಶೋಷಿತರು ದೇಶವೊಂದರ ಪ್ರಭುತ್ವದ ಚುಕ್ಕಾಣಿ ಹಿಡಿದಿದ್ದರು. ದುಡಿಯುವ ವರ್ಗದ ನಾಯಕತ್ವದಲ್ಲಿ ಕಾರ್ಮಿಕರು, ರೈತರು ಮತ್ತು ಸೇನಾ ಯೋಧರ ಮೈತ್ರಿ ಅಧಿಕಾರವನ್ನು ಹಿಡಿದಿತ್ತು. ಮನುಕುಲದ ಇತಿಹಾಸದಲ್ಲೇ ಹಿಂದೆಂದೂ ಇಂತಹ ಘಟನೆ ನಡೆದಿರಲಿಲ್ಲ. ಇದು ಕೇವಲ ಕೆಲವು ಘಟನೆಗಳ ಫಲಿತಾಂಶ ಅಲ್ಲ. ಇಲ್ಲವೇ ಕೆಲವು ಸಂದರ್ಭಗಳ ಕಾಕತಾಳೀಯವಲ್ಲ. ಇದು ಕೇವಲ ಒಬ್ಬ ಆಡಳಿತಗಾರನಿಂದ ಮತ್ತೊಬ್ಬ ಆಡಳಿತಗಾರನಿಗೆ ಅಧಿಕಾರ ಹಸ್ತಾಂತರದ ಘಟನೆಯಲ್ಲ. ಒಂದು ಶೋಷಕ ವರ್ಗದಿಂದ ಮತ್ತೊಂದು ಶೋಷಕ ವರ್ಗಕ್ಕೆ ಅಧಿಕಾರ ಬದಲಾದದ್ದೂ ಅಲ್ಲ. ಲೆನಿನ್ ಅವರ ಮಾತಿನಲ್ಲಿ ಹೇಳವುದಾದರೆ "ಜಗತ್ತಿನ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಇದು ಬರೆಯಲಿದೆ. ಹೊಸ ವರ್ಗದ ಯುಗ ಆರಂಭವಾಗಿದೆ. ಈ ವರ್ಗ ಪ್ರತಿಯೊಂದು ಬಂಡವಾಳಶಾಹಿ ದೇಶಗಳಲ್ಲಿ ಶೋಷಣೆಗೆ ಒಳಗಾಗಿದೆ. ಅದೇ ಸಂದರ್ಭದಲ್ಲಿ ಹೊಸ ಜೀವನದತ್ತ ಮುನ್ನಡೆ ಇಟ್ಟಿದೆ. ಮನುಕುಲವು ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಯತ್ತ ಹೆಜ್ಜೆ ಹಾಕುತ್ತಿದೆ."

ಪ್ರೊ ಪ್ರಭಾತ್ ಪಟ್ನಾಯಕ್ ಈ ಕುರಿತು ಹೀಗೆ ಹೇಳಿದ್ದಾರೆ. "ಮನುಕುಲದ ಇತಿಹಾಸದಲ್ಲಿ ಇಂತಹದ್ದು ಮೊತ್ತ ಮೊದಲ ಕ್ರಾಂತಿಯಾಗಿದೆ. ಈ ಕ್ರಾಂತಿಯು ಸೈದ್ಧಾಂತಿಕವಾಗಿ ರೂಪುಗೊಂಡಿದ್ದು, ಅದನ್ನು ಯೋಜಿತ ರೀತಿಯಲ್ಲಿ ಅನುಷ್ಠಾನಕ್ಕೆ ತರಲಾಯಿತು. ಆಗಿನ ನಿರ್ದಿಷ್ಟ ಪರಿಸ್ಥಿತಿಗೆ ತಕ್ಕಂತೆ ಯೋಜನೆ ರೂಪಿಸಲಾಗಿತ್ತು."

ಕಾರ್ಮಿಕ ಚಳುವಳಿಯ ಮಹಾನ್ ನಾಯಕ ಕಾಮ್ರೆಡ್ ಬಿ.ಟಿ.ರಣದಿವೆ 1967ರಲ್ಲಿ ತಮ್ಮ ಬರವಣಿಗೆಗಳಲ್ಲಿ ಈ ಕ್ರಾಂತಿ ಕುರಿತು ಹೀಗೆ ಹೇಳಿದ್ದಾರೆ; ರಷ್ಯಾದಲ್ಲಿ 1905ರಲ್ಲಿ ನಡೆದ ಕ್ರಾಂತಿ, ಇದರ ನಂತರ ನಡೆದ ಅಕ್ಟೋಬರ್ ಕ್ರಾಂತಿಗಳಿಗೆ ಮಹಾನ್ ವ್ಯಕ್ತಿ ಲೆನಿನ್ ನಾಯಕತ್ವ ನೀಡಿದ್ದು, ಮಾರ್ಕ್ಸ್ ಅವರ ಮೇರು ಕೃತಿ 'ಕ್ಯಾಪಿಟಲ್'ನ ಕ್ರಾಂತಿಕಾರಿ ಸೈದ್ಧಾಂತಿಕತೆಯ ಮಾರ್ಗದರ್ಶನದಲ್ಲಿ ಇದು ನಡೆದಿದೆ.

1917ರಲ್ಲಿ ರಷ್ಯಾದಲ್ಲಿ ಫೆಬ್ರವರಿ ಕ್ರಾಂತಿಯ ಮೂಲಕ ಜಾರ್‌ನ ಶೋಷಕ ಆಡಳಿತವನ್ನು ಕಿತ್ತೆಸೆದ ನಂತರ ಸೃಷ್ಟಿಯಾಗಿದ್ದ ಪರಿಸ್ಥಿತಿಯಲ್ಲಿ ಅಕ್ಟೋಬರ್ ಕ್ರಾಂತಿಯ ಮೂಲಕ ಜಗತ್ತನ್ನೇ ನಡುಗಿಸಿದ ಈ ಸಮಾಜವಾದಿ ಕ್ರಾಂತಿಗೆ ನಾಯಕತ್ವ ನೀಡಿದವರು ವಿ.ಐ.ಲೆನಿನ್.

ಆಗ ವಿಶ್ವದಲ್ಲಿ ಮೊದಲ ಮಹಾಯುದ್ಧ ನಡೆದಿತ್ತು. ಇದು ರಷ್ಯನ್ನರನ್ನು ಹೊರತಾಗಿಸಿರಲಿಲ್ಲ. ಬಂಡವಾಳಶಾಹಿಯ ಭಯಾನಕ ಕ್ರೌರ್ಯದ ನರ್ತನ ತಡೆಯಿಲ್ಲದೇ ಸಾಗಿತ್ತು. 1917ರಲ್ಲಿ ಸಾಮಾನ್ಯ ಜನ ಶಾಂತಿ, ಆಹಾರ ಮತ್ತು ಭೂಮಿಗಾಗಿ ತಹತಹಿಸುತ್ತಿದ್ದರು. ಫೆಬ್ರವರಿಯ 'ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿ' ಕೇವಲ ಝಾರ್‌ಗಳ ಸರ್ವಾಧಿಕಾರಿ ಆಡಳಿತವನ್ನು ಕಿತ್ತೆಸೆಯಿತು. ಆದರೆ ಜನರ ನಿಜವಾದ ಬೇಡಿಕೆಗಳನ್ನು ಈಡೇರಿಸಿರಲಿಲ್ಲ. ಆದರೆ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಪರಿಣಾಮ, ಚಳಿಗಾಲದ ರಾಜಧಾನಿಗೆ ನುಗ್ಗಿ ಕೆರೆನ್‌ಸ್ಕಿ ಅವರ ಪ್ರಾಂತೀಯ ಸರ್ಕಾರವನ್ನು ಕಿತ್ತೆಸೆಯಿತು. ಎಲ್ಲ ಅಧಿಕಾರ ಕಾರ್ಮಿಕ ವರ್ಗ, ರೈತರು ಮತ್ತು ಯೋಧರನ್ನು ಒಳಗೊಂಡ ಸೋವಿಯತ್‌ಗಳ ಕೈಗೆ ಬಂದಿತು.

ಚಳಿಗಾಲದ ರಾಜಧಾನಿಯನ್ನು ವಶಪಡಿಸಿಕೊಂಡು ಹೊಸ ಸರ್ಕಾರ ಸ್ಥಾಪಿಸಿದ ನಂತರ ನವೆಂಬರ್ 8 (26, ಅಕ್ಟೋಬರ್) ರಂದು ಶಾಂತಿಯನ್ನು ಸ್ಥಾಪಿಸುವ ಕುರಿತು ನಿರ್ಣಯ ಅಂಗೀಕರಿಸಿದ್ದೇ ಮೊತ್ತ ಮೊದಲ ಶಾಸನಾತ್ಮಕ ಕ್ರಮವಾಗಿತ್ತು. ನಿರ್ಣಯವು ರಷ್ಯಾದ ಸೈನಿಕರನ್ನು ಯುದ್ದದಿಂದ ವಾಪಸ್ ಬರುವಂತೆ ತೀರ್ಮಾನಿಸಿತು. ಯುದ್ಧದಲ್ಲಿ ತೊಡಗಿರುವ ಎಲ್ಲರೂ ಕದನ ವಿರಾಮ ಘೋಷಿಸಬೇಕೆಂದು ಕರೆ ನೀಡಿತು.

ಕ್ರಾಂತಿ ನಡೆದ ಕೇವಲ 18 ಗಂಟೆಗಳೊಳಗೆ ಲೆನಿನ್ ಭೂ ಹಂಚಿಕೆಗೆ ಸಂಬಂಧಿಸಿದ ಎರಡನೇ ನಿರ್ಣಯವನ್ನು ಪ್ರಕಟಿಸಿದರು. ಇದು ಭೂಮಿಯನ್ನು ಬಡವರು ಮತ್ತು ಭೂ ರಹಿತ ಕೃಷಿಕರಿಗೆ ನೀಡುವುದಾಗಿತ್ತು. ಭೂಮಿ ಸಮಾಜದ ಆಸ್ತಿಯಾಗಿದ್ದು, ಖಾಸಗಿ ಮಾಲೀಕತ್ವದ್ದಲ್ಲ ಎಂಬುದಾಗಿ ನಿರ್ಣಯ ಘೋಷಿಸಿತು. ಈ ನಿರ್ಣಯ ಇಡೀ ಬಂಡವಾಶಾಹಿ ಜಗತ್ತಿನಲ್ಲಿ ನಡುಕ ಹುಟ್ಟಿಸಿತು.

ಈ ಕ್ರಾಂತಿ ಮನುಷ್ಯನಿಂದ ಮನುಷ್ಯನ ಶೋಷಣೆ ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ಮೆಟ್ಟಿ ನಿಲ್ಲಲು ಸಾಧ್ಯತೆಗಳಿವೆ ಎಂಬುದನ್ನು ತೋರಿಸಿತು. ಈ ಕ್ರಾಂತಿ ದೇಶಗಳನ್ನೂ ಸೇರಿದಂತೆ ತುಳಿತಕ್ಕೆ ಒಳಗಾಗಿರುವವರನ್ನು, ವಸಾಹತುಗಳಿಗೆ ಮತ್ತು ಕೆಳಮಟ್ಟದಲ್ಲಿರುವವರಿಗೆ ಹೊಸ ಅವಕಾಶಗಳನ್ನು ಮುಕ್ತಗೊಳಿಸಿತು. ಈ ಕ್ರಾಂತಿ ವಸಾಹತುಶಾಹಿ ದೇಶಗಳು ಪರಕೀಯರಿಂದ ತಮ್ಮನ್ನು ಬಿಡುಗಡೆಗೊಳಿಸಿಕೊಳ್ಳುವ ದಾರಿ ತೋರಿತು. ವಸಾಹತುಶಾಹಿಯು ದಯೆ ಇಲ್ಲದ ಸಾಮ್ರಾಜ್ಯಶಾಹಿ ವ್ಯವಸ್ಥೆಯಾಗಿದೆ. ಭಾರತವೂ ಸೇರಿದಂತೆ ಮೂರನೆ ಜಗತ್ತಿನ ದೇಶಗಳು ವಸಾಹತುಶಾಹಿಯಿಂದ ತಮ್ಮನ್ನು ತಾವು ಬಿಡಿಸಿಕೊಳ್ಳಲು ಪ್ರೇರಣೆಯಾಯಿತು.

ಅಕ್ಟೋಬರ್ ಕ್ರಾಂತಿ ಹೊಸ ಚರಿತ್ರೆ ಸೃಷ್ಟಿಸಿದ ಘಟನೆಯಾಗಿದ್ದು ಮಾನವನಿಂದ ಮಾನವನ ಶೋಷಣೆ ಮಾಡುವ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯಲು ಮನುಷ್ಯನಿಗೆ ಸಾಧ್ಯವಿದೆ ಎಂಬುದನ್ನು ತೋರಿಸಿತು. ಹಾಗೆಯೇ ಇದು ಮಾರ್ಕ್ಸ್‌ವಾದದ ಸಿಂಧುತ್ವವನ್ನು ಎತ್ತಿಹಿಡಿಯಿತು. ಅಂದರೆ ಕಾರ್ಮಿಕರು ತಮ್ಮನ್ನು ತಾವು ಬಿಡಿಸಿಕೊಳ್ಳಲು ಅಗತ್ಯವಾದ ಸಿದ್ಧಾಂತವನ್ನು ಬಂಡವಾಳಶಾಹಿ ವ್ಯವಸ್ಥೆಯಿಂದಲೇ ಪಡೆದಿದ್ದಾರೆ. ಇಲ್ಲಿ ಅಕ್ಟೋಬರ್ ಕ್ರಾಂತಿ ಮಾತ್ರವಲ್ಲ, ಎಂದೆಂದಿಗೂ ಅಗತ್ಯವಾಗಿರುವ ಮಾರ್ಕ್ಸ್‌ವಾದದ ಪ್ರಸ್ತುತತೆಯನ್ನೂ ಎತ್ತಿಹಿಡಿಯಿತು.

ಅದೇ ಪ್ರಕಾರ ಜನರ ಹಿತವನ್ನು ಕಾಪಾಡುವ ಕಾರ್ಮಿಕ ವರ್ಗದ ನೇತೃತ್ವದ ಸರ್ಕಾರವೊಂದು ಸೃಷ್ಟಿಯಾಯಿತು. ಉತ್ಪಾದನೆಯ ಎಲ್ಲ ಮೂಲಗಳನ್ನು– ಭೂಮಿ, ಕಾರ್ಮಿಕರು, ಬಂಡವಾಳ ಮುಂತಾದವನ್ನು ನಂತರದಲ್ಲಿ ಅದನ್ನು ಸಮಾಜವಾದಿ ಘಟ್ಟಕ್ಕೆ ತರುವುದಕ್ಕಾಗಿ ರಾಜ್ಯದ ಆಡಳಿತದ ಸುಪರ್ದಿಗೆ ತರಲು ಸಾಧ್ಯವಾಯಿತು. ಬಂಡವಾಳಶಾಹಿಯ ವ್ಯಕ್ತಿಗತ ಲಾಭಕ್ಕಾಗಿ ಅಲ್ಲದೇ, ದೇಶದ ಇಡೀ ಸಮುದಾಯಕ್ಕೆ ಅಗತ್ಯವಾದ ಉತ್ಪನ್ನಗಳನ್ನು ಸರ್ಕಾರದ ಯೋಜನೆಯಂತೆ ಉತ್ಪಾದಿಸುವುದು ಸಾಧ್ಯವಾಯಿತು. ಶೋಷಣೆ ಮುಕ್ತ ಸಾಮಾಜವಾದಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು, ಸಮಾಜವಾದಿ ವ್ಯವಸ್ಥೆಯ ಕನಸು ನನಸಾಯಿತು.

ರಷ್ಯಾದಲ್ಲಿ ಎಲ್ಲ ರಂಗಗಳಲ್ಲಿಯೂ ಕಂಡ ವೇಗದ ಬೆಳವಣಿಗೆ ಮತ್ತು ನಿರೀಕ್ಷೆಗೂ ಮೀರಿದ ಸಾಧನೆಗಳು ಸಮಾಜವಾದಿ ವ್ಯವಸ್ಥೆಯ ಶ್ರೇಷ್ಠತೆಯನ್ನು ಸಾಧಿಸಿ ತೋರಿಸಿತು. ಒಂದು ಕಾಲದಲ್ಲಿ ಹಿಂದುಳಿದಿದ್ದ ರಷ್ಯಾ ಬೃಹತ್ ಆರ್ಥಿಕ ಶಕ್ತಿಯಾಗಿ ಬೆಳೆಯಿತು. ಅಕ್ಟೋಬರ್ ಕ್ರಾಂತಿಯ ನಂತರ ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಬಂದಿತು. ಮನುಷ್ಯನ ಜೀವನದ ಎಲ್ಲ ಹಂತಗಳಲ್ಲೂ ಸಮಾಜವಾದ ನಿರ್ಣಾಯಕ ಅಂಶವಾಯಿತು. ಕಾರ್ಮಿಕರಿಗೆ ನಿಗದಿತ ಕೆಲಸದ ಅವಧಿ, ರಜೆ, ಆರೋಗ್ಯ ಸೌಕರ್ಯ, ನಿವೃತ್ತಿ ವೇತನದಂತಹ ಸವಲತ್ತುಗಳನ್ನು ನೀಡುವ 'ಸಮಾಜ ಕಲ್ಯಾಣ ರಾಜ್ಯಗಳು/ವೆಲ್‌ಫೇರ್ ಸ್ಟೇಟ್ಸ್' ಎಂಬ ಪರಿಕಲ್ಪನೆ ಬಂಡವಾಳಶಾಹಿ ದೇಶಗಳಲ್ಲೂ ಮೌಲ್ಯ ಪಡೆಯಿತು.

ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟ(ಯು.ಎಸ್.ಎಸ್.ಆರ್.) ವಹಿಸಿದ ಪಾತ್ರ, ಇದರ ಬೆನ್ನಲ್ಲೇ ಬೆಳೆದ ಪೂರ್ವ ಯೋರೋಪಿನ ಸಮಾಜವಾದಿ ದೇಶಗಳು ವಿಶ್ವದ ಬೆಳವಣಿಗೆಗಳ ಮೇಲೆ ತಮ್ಮದೇ ಆದ ಪ್ರಭಾವ ಬೀರಿದವು. ಎರಡನೇ ಜಾಗತಿಕ ಯುದ್ಧದಲ್ಲಿ ಫ್ಯಾಸಿಸಂ/ನಾಜಿಯಿಸಂ ವಿರುದ್ಧದ ಗೆಲವು, ಇದರಲ್ಲಿ ಸೋವಿಯತ್‌ನ ಕೆಂಪು ಸೇನೆ ವಹಿಸಿದ ನಿರ್ಣಾಯಕ ಪಾತ್ರ, ಸಾಮ್ರಾಜ್ಯಶಾಹಿ ದೇಶಗಳಿಂದ ವಸಾಹತುಶಾಹಿ ದೇಶಗಳು ಸ್ವಾತಂತ್ರ್ಯ ಗಳಿಸುವ ವೇಗವನ್ನು ಹೆಚ್ಚಿಸಿತು. ಐತಿಹಾಸಿಕ ಚೀನಾ ಕ್ರಾಂತಿ, ವಿಯಟ್ನಾಂನ ಜನರು ನಡೆಸಿದ ಹೋರಾಟ, ಕೊರಿಯಾ ಜನರ ಹೋರಾಟ ಮತ್ತು ಕ್ಯೂಬಾ ಕ್ರಾಂತಿಗಳು ಜಾಗತಿಕ ಬೆಳವಣಿಗೆ ಮೇಲೆ ತಮ್ಮದೇ ಆದ ಪ್ರಭಾವ ಬೀರಿದವು.

ಸಮಾಜವಾದಿ ದೇಶಗಳ ಸಾಧನೆಗಳು– ಬಡತನ, ಅನಕ್ಷರತೆಗಳ ನಿರ್ಮೂಲನೆ, ನಿರುದ್ಯೋಗ ನಿವಾರಣೆ, ಶಿಕ್ಷಣ, ಆರೋಗ್ಯ, ಮನೆ, ಪಿಂಚಣಿ ಮತ್ತಿತರ ಕ್ಷೇತ್ರಗಳಲ್ಲಿ ಸಾಧಿಸಿದ ಅಪಾರ ಮುನ್ನಡೆ ಇವುಗಳು ಜಗತ್ತಿನಾದ್ಯಂತ ಕಾರ್ಮಿಕರ ಹೋರಾಟಕ್ಕೆ ಆತ್ಮವಿಶ್ವಾಸದ ಮೂಲವನ್ನು ಒದಗಿಸಿದವು. ಸ್ಫೂರ್ತಿ ತುಂಬಿದವು.

ಫ್ಯಾಸಿಸ್ಟ್ ಶಕ್ತಿಗಳ ಸೋಲು ಮತ್ತು ಮೇಲೆ ತಿಳಿಸಿದ ದೇಶಗಳಲ್ಲಿನ ಸಮಾಜವಾದಿ ಕ್ರಾಂತಿಗಳು ನಡೆದಿದ್ದರೂ ಇಲ್ಲೊಂದು ತಪ್ಪಾದ ಪ್ರವೃತ್ತಿ ಕಂಡು ಬಂದಿದೆ. ಅದೆಂದರೆ ಸಮಾಜವಾದದ ಸಾಮರ್ಥ್ಯವನ್ನು ವಿಪರೀತವಾಗಿ ಹಿಗ್ಗಿಸಿ ಅಂದಾಜಿಸುವುದು ಮತ್ತು ಬಂಡವಾಳಶಾಹಿ ಶಕ್ತಿಯನ್ನು ಕೀಳಂದಾಜು ಮಾಡುವುದು. ಬಂಡವಾಳಶಾಹಿ ವ್ಯವಸ್ಥೆ ತುಂಬಾ ಮುಂದುವರೆದ ಶ್ರೀಮಂತ ದೇಶಗಳಲ್ಲಿ ಇನ್ನೂ ಇದೆ. ಮತ್ತು ಜಗತ್ತಿನ ಮೂರನೆ ಎರಡು ಭಾಗದಷ್ಟು ಉತ್ಪಾದನೆ ಅವರ ಹಿಡಿತದಲ್ಲಿದ್ದು ಅಭಾದಿತವಾಗಿದೆ. ಬಂಡವಾಳಶಾಹಿಯು ಬದಲಾದ ಜಾಗತಿಕ ಪರಿಸ್ಥಿತಿಗೆ ಅನುಗುಣವಾಗಿ ತಾನೂ ಬದಲಾಗುತ್ತದೆ. ಜೊತೆಗೆ ಬಂಡವಾಳಶಾಹಿ ಕ್ರೋಢೀಕರಣವನ್ನು ಮುಂದುವರೆಸುತ್ತದೆ ಮತ್ತು ಸಮಾಜವಾದದ ವಿರುದ್ಧದ ಪ್ರಚಾರದಲ್ಲಿ ಹಾಗೂ ಸೈನಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸೈದ್ಧಾಂತಿಕವಾಗಿ ಸಮಾಜವಾದದ ವಿರುದ್ಧ ನಿರ್ದಯವಾಗಿರುತ್ತದೆ.

ಯು.ಎಸ್.ಎಸ್.ಆರ್. ಮತ್ತು ವಿಶ್ವ ಸಮಾಜವಾದ ಸಾಮ್ರಾಜ್ಯಶಾಹಿಯ ಸವಾಲನ್ನು ಎದುರಿಸಬೇಕಾಯಿತು. ಸೋವಿಯತ್ ಒಕ್ಕೂಟವು ಸಮಾಜವಾದವನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ನಾಲ್ಕು ತಪ್ಪುಗಳನ್ನು ಎಸಗಿತು. ಅವುಗಳನ್ನು ಪುನರಾವಲೋಕ ಮಾಡಿಕೊಳ್ಳುವ ಅಗತ್ಯವಿದೆ 1) ಸಮಾಜವಾದದ ಅಡಿಯಲ್ಲಿ ಪ್ರಭುತ್ವದ ವರ್ಗ ಗುಣ 2) ಸಮಾಜವಾದಿ ಪ್ರಜಾಪ್ರಭುತ್ವ 3) ಸಮಾಜವಾದಿ ಆರ್ಥಿಕತೆ ನಿರ್ಮಾಣ ಮತ್ತು 4) ಸೈದ್ಧಾಂತಿಕ ಅರಿವನ್ನು ನಿರ್ಲಕ್ಷಿಸುವುದು.

ಈ ಅಂಶಗಳನ್ನು ಪ್ರಮುಖವಾಗಿ ಗಮನಿಸಬೇಕಾಗಿದೆ. ಇಲ್ಲಿ ಗಮನಿಸಲೇಬೇಕಾದ ಮತ್ತೂ ಪ್ರಮುಖ ಅಂಶವೆಂದರೆ ಸಮಾಜವಾದವು ಮನುಕುಲ ಈ ಹಿಂದೆ ಎಂದೂ ಸಾಗಿಲ್ಲದ ಬೆಳವಣಿಗೆಯ ಹೊಸ ಹಾದಿಯಲ್ಲಿ ಸಾಗಿ ಬರಬೇಕಿತ್ತು. ಸಮಾಜವಾದ ನಿರ್ಮಾಣದಲ್ಲಿ ಯಾವುದೇ ಸಿದ್ಧ ನೀಲನಕ್ಷೆ ಅಥವಾ ಕಾರ್ಯಕ್ರಮ

ಪುಟ 04 ಕ್ಕೆ



ಸಂಪಾದಕೀಯ

ಭಾಷೆ ಮತ್ತು ಬದುಕಿನ ಉಳಿವಿಗಾಗಿ

ಪತ್ರಿಕೆಯ ಎಲ್ಲಾ ಓದುಗರಿಗೂ, ನಾಡಿನ ಸಮಸ್ತ ಜನತೆಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಇಂದಿಗೆ ಕನ್ನಡ ಭಾಷೆಯನ್ನಾಡುವ ಭಾಷಿಕ ಪ್ರದೇಶಗಳು ಒಗ್ಗೂಡಿದ ಹೊಸ ಆಡಳಿತ ವ್ಯವಸ್ಥೆ ಜಾರಿಗೆ ಬಂದು ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ 67 ವರ್ಷಗಳು ಸಂದಿವೆ. ಬ್ರಿಟಿಷ್ ವಸಾಹತುಶಾಹಿಯಿಂದ ವಿಮೋಚನೆಗೊಂಡ ಭಾರತ ರಾಜಕೀಯ, ಆಡಳಿತಾತ್ಮಕ ವಾಗಿ ತನ್ನದೇ ಹಾದಿಯನ್ನು ಕಂಡುಕೊಳ್ಳುವ ಹೊಸ ಸವಾಲುಗಳನ್ನು ಎದುರಿಸಬೇಕಿತ್ತು. ವಸಾಹತುಶಾಹಿ ತನ್ನ ಹಿತಾಸಕ್ತಿಗೆ ಅನುಗುಣವಾಗಿ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿತ್ತು. ಅದಕ್ಕೆ ವ್ಯಾಪಾರ, ವಾಣಿಜ್ಯ, ಕಚ್ಚಾ ವಸ್ತುಗಳ ಸಾಗಣೆ, ಶ್ರಮಶೋಷಣೆ ಹಾಗೂ ಭಾರತವನ್ನು ಒಂದು ಮಾರುಕಟ್ಟೆಯನ್ನಾಗಿಯೇ ಕಂಡದ್ದು ಆಧಾರವಾಗಿತ್ತು. ಸ್ಥಳೀಯ ಭಾಷಾ, ಸಾಂಸ್ಕೃತಿಕ ವೈಶಿಷ್ಟ್ಯ, ವೈವಿಧ್ಯತೆಗಳ ಅರಿವು, ಅಧ್ಯಯನಗಳು ಕೇವಲ ನಿರ್ವಹಣೆ, ನಿಯಂತ್ರಣಕ್ಕೆ ಪೂರಕವಾಗಿದ್ದವು. ಮಾತ್ರವಲ್ಲ ಒಂದು ಭಾಷಿಕ, ಸಾಂಸ್ಕೃತಿಕ ಜನ ಸಮುದಾಯಗಳು ಹರಿದು ಹಂಚಿ ಹೋಗಿದ್ದು ಅದರ ವಿಭಜಕ ಆಡಳಿತ ವ್ಯವಸ್ಥೆಗೆ ಅನುಗುಣವಾಗಿಯೇ ಇದ್ದವು, ಬಲಗೊಳಿಸಿದ್ದವು.

ಸ್ವಾತಂತ್ರ್ಯ ನಂತರದಲ್ಲಿ ಸ್ವತಂತ್ರ ಭಾರತ ರೂಪುಗೊಳ್ಳುವುದು ಅನಿವಾರ್ಯವಾಗಿ ಯಾದರೂ ಒಂದು ಮಟ್ಟಿನ ಪ್ರಜಾಪ್ರಭುತ್ವವನ್ನು ಆಧರಿಸಬೇಕಿತ್ತು. ಆರಂಭದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ವಿರೋಧವಾಗಿದ್ದ ಕಾಂಗ್ರೆಸ್ ಪಕ್ಷದ ಆಡಳಿತ ಅನಿವಾರ್ಯವಾಗಿ ಜನಾಗ್ರಹಕ್ಕೆ ಮಣಿಯಬೇಕಾಗಿ ಬಂತು. 1949 ರಲ್ಲಿ "ಏಕೀಕರಣದಿಂದಲ್ಲದೆ ಕರ್ನಾಟಕದ, ಏಕೆ ಇಡೀ ಭಾರತದ ಕಲ್ಯಾಣ, ಸಾಧನೆ, ಕ್ಷೇಮ ಸಂರಕ್ಷಣೆ ಖಂಡಿತ ಸಾಧ್ಯವಿಲ್ಲ" ಎಂದು ಮೈಸೂರು ಮಹಾರಾಜಾ ಕಾಲೇಜಿನ ಒಂದು ಕಾರ್ಯಕ್ರಮದಲ್ಲಿ ಘೋಷಿಸಿದ ಮೈಸೂರು ವಿಶ್ವವಿದ್ಯಾಲಯದ ನೌಕರರಾಗಿದ್ದ ಕುವೆಂಪು ರವರಿಗೆ ಸರ್ಕಾರ ನೋಟಿಸ್ ನೀಡಿ ಬಾಯಿ ಮುಚ್ಚಿಸಲು ಮುಂದಾಗಿದ್ದನ್ನು ನೆನೆಯಬಹುದು. ಅಲ್ಲಿ ಸರಕಾರದ ನೌಕರವರ್ಗ ದನಿಯೆತ್ತದಂತೆ ತಡೆಯುವ ಉದ್ದೇಶವಿತ್ತು. 'ಕೆಲವು ರಾಜಕಾರಣಿಗಳ ಕುತಂತ್ರದಿಂದಾಗಿ ಕರ್ನಾಟಕ ಏಕೀಕರಣ ಹೋರಾಟದ ಮುಂಚೂಣಿಯಲ್ಲಿದ್ದ ಶ್ರೀರಂಗರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಬೇಕಾಗಿ ಬಂದ ಪ್ರಸಂಗವನ್ನು' ಗಮನಿಸಬಹುದು. 'ಜವಾಬ್ದಾರಿ ಸರ್ಕಾರ'ಕ್ಕಾಗಿ ಮೈಸೂರ್ ಚಲೋ, ಆರ್ಕಾಟ್ ಬಾಯ್ಕಾಟ್ ನಂತಹ ಚಳುವಳಿಗಳು ನಡೆದದ್ದು ಕೂಡ ಉಲ್ಲೇಖನೀಯ. ಭಾಷಾವಾರು ಪ್ರಾಂತ ರಚನೆಯ ಹಿನ್ನೆಲೆಯಲ್ಲಿ ತ್ಯಾಗ ಬಲಿದಾನಗಳ ಚರಿತ್ರೆ ಇದೆ. ಭಾಷಾವಾರು ಪ್ರಾಂತ್ಯ ರಾಜ್ಯ ರಚನೆಯಾದರೂ, ಕರ್ನಾಟಕ ಹೆಸರು ಪಡೆಯಲು ಸಾಧ್ಯವಾದದ್ದು 1973 ನವೆಂಬರ್ 1 ರಲ್ಲಿ ಎನ್ನುವುದು ಕೂಡ ಮರೆಯಲು ಸಾಧ್ಯವಿಲ್ಲ.

ಭಾರತ ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡ ನಂತರ ಆಧುನಿಕ ಆಡಳಿತ ವ್ಯವಸ್ಥೆ ರೂಪಿಸುವ ಸಂಧರ್ಭದಲ್ಲೇ ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯವನ್ನು, ಮಹತ್ವವನ್ನು ಪ್ರತಿಪಾದಿಸಿ ಜನಾಂದೋಲನಕ್ಕೆ ಧುಮುಕಿದ ಕಮ್ಯೂನಿಸ್ಟ್ ಪಕ್ಷದ ದೃಷ್ಟಿಕೋನ ಅತ್ಯಂತ ವೈಜ್ಞಾನಿಕ ಮತ್ತು ಜನತೆಯ ಪ್ರಜಾಸತ್ತಾತ್ಮಕ ಹಕ್ಕಿನ ಪ್ರತಿಪಾದನೆ ಎನ್ನುವುದನ್ನು ಗುರುತಿಸ ಬೇಕು. ಇಂತಹ ಒಂದು ಆಂದೋಲನದಲ್ಲಿ ವಿಶಾಲವಾಗಿ ಬಹು ದೊಡ್ಡ ಸಂಖ್ಯೆಯಲ್ಲಿ ಜನಸಮೂಹ ತೊಡಗಿದ್ದು ವಿಶೇಷ. ತ್ಯಾಗ ಬಲಿದಾನಗಳ ಸರಣಿ.

ಸ್ವಾತಂತ್ರ್ಯ ಗಳಿಸಿದ ಹೊಸ್ತಿಲಿನಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧವೂ ಸಮಾನ ಸ್ಥಾನದ ನೆಲೆಯಲ್ಲಿರಬೇಕೆಂದು ಒಕ್ಕೂಟದ ಸ್ವರೂಪವನ್ನು ಪ್ರತಿಪಾದಿಸಲಾಯಿತು. ಇದನ್ನು ನಮ್ಮ ಸಂವಿಧಾನ ಒಳಗೊಂಡಿದೆ ನಿಜ. ಆದರೆ, ಪ್ರಾಯೋಗಿಕತೆಯಲ್ಲಿ ಅದರ ಉಲ್ಲಂಘನೆ ಆಗುತ್ತಲೇ ಇರುತ್ತದೆ. ಭಾರತದ ಒಕ್ಕೂಟದ ಸರಕಾರ ರಾಜ್ಯಗಳ ಹಕ್ಕು ಸ್ಥಾನಮಾನವನ್ನು ಸತತವಾಗಿ ಕುಗ್ಗಿಸುತ್ತದೆ ಅನೇಕ ರಾಜ್ಯಗಳಲ್ಲಿ ಈಗಲೂ ರಾಜ್ಯಪಾಲರುಗಳನ್ನು ಕೇಂದ್ರದ ಏಜೆಂಟರಂತೆ ಬಳಸಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡ ಸರಕಾರಗಳು ತನ್ನ ಹಕ್ಕು, ಬಾಧ್ಯತೆಗಳನ್ನು ನಿರ್ವಹಿಸದಂತೆ ತಡೆಯುವ ಕುಕೃತ್ಯಗಳು ಸತತವಾಗಿ ನಡೆಯುತ್ತಿವೆ.

ನವ ಉದಾರಿಕರಣದ ನೀತಿಗಳ ಜಾರಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಹೀಗೆ ಎಲ್ಲ ರಂಗಗಳಲ್ಲಿಯೂ ವ್ಯಾಪಿಸುತ್ತಿರುವಾಗ ಇಂದು ಪ್ರಾದೇಶಿಕ ಭಾಷೆ ಮತ್ತು ಬದುಕಿಗೆ ಕುತ್ತು ಬರುತ್ತಿದೆ. ಸ್ವಾವಲಂಬಿ ಆರ್ಥಿಕತೆಯ ಜಾಗದಲ್ಲಿ ಪರಾವಲಂಬಿ ಮತ್ತು ಏಕಸ್ವಾಮ್ಯ ಸ್ವರೂಪವನ್ನು ಪಡೆಯುತ್ತಿದೆ. ಏಕಸ್ವಾಮ್ಯ ಮಾರುಕಟ್ಟೆಯ ಸಿದ್ಧಾಂತ ಮತ್ತು ಪ್ರಾಯೋಗಿಕತೆಯಲ್ಲಿ ಪ್ರಜಾಸತ್ತಾತ್ಮಕ ತಿರುಳು ಅತ್ಯಂತ ದುರ್ಬಲವಾಗುತ್ತಿದೆ. ಒಕ್ಕೂಟದ ಪ್ರಜಾಸತ್ತಾತ್ಮಕ ವ್ಯವಸ್ಥೆ, ನಿರ್ಲಕ್ಷಕ್ಕೆ ಮತ್ತು ನಿತ್ಯ ಉಲ್ಲಂಘನೆಗೆ ಈಡಾಗಿದೆ. ಕೇಂದ್ರದ ಸರ್ವಾಧಿಕಾರತ್ವ ಎಲ್ಲ ರಂಗಗಳಲ್ಲಿಯೂ ಬಿಗಿಗೊಳ್ಳುತ್ತಿದೆ. ರಾಜ್ಯಗಳಿಗೆ ಸಿಗಬೇಕಾದ ಸಂಪನ್ಮೂಲದ ಪಾಲು ಸಿಗುತ್ತಿಲ್ಲ. ಒಕ್ಕೂಟದ ಸರ್ಕಾರಕ್ಕೆ ಅತಿ ಹೆಚ್ಚು ತೆರಿಗೆಯ ಭಾಗವನ್ನು ನೀಡುತ್ತಿರುವ ರಾಜ್ಯಗಳು ತನ್ನ ಅಭಿವೃದ್ಧಿಗೆ ಒಕ್ಕೂಟ ಸರ್ಕಾರದಿಂದ ಸಹಾಯ ಸಹಕಾರಗಳು ಸಿಕ್ಕದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಕಾಡುತ್ತಿರುವ ಸಂಪನ್ಮೂಲಗಳ ಕೊರತೆ ಮತ್ತು ಅಭಿವೃದ್ಧಿಗೆ ಅಗತ್ಯವೆಂದು ಸಾಲದ ಕುಣಿಕೆಯಲ್ಲಿ ರಾಜ್ಯಗಳು ಬಿದ್ದಿವೆ. ಶಿಕ್ಷಣ ದುಬಾರಿ ಸರಕಾಗಿದೆ. ಮಾತ್ರವಲ್ಲ, ಮಾತೃಭಾಷೆಯ ಕಲಿಕೆ ಮರೆಯಾಗಿ ಹೋಗುತ್ತಿದೆ ಮತ್ತು ಮೂಲೆಗೆ ಒತ್ತಲ್ಪಡುತ್ತಿದೆ. ಆ ಜಾಗದಲ್ಲಿ ಮಾರುಕಟ್ಟೆಯ ಭಾಷೆ ಆಕ್ರಮಿಸಿಕೊಳ್ಳುತ್ತಿದೆ. ಮಾರುಕಟ್ಟೆಯ ಗ್ರಾಹಕ ಸಂಸ್ಕೃತಿ ಬಹು ವ್ಯಾಪಿಯಾಗುತ್ತಿದೆ.

ರಾಷ್ಟ್ರೀಯ ಭಾಷೆಗಳಾಗಿ ಗುರುತಿಸಲಾದ ಭಾಷಾವಾರು ಪ್ರಾಂತರಚನೆಯ ಭಾಷೆಗಳಾದ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳನ್ನು ಒಕ್ಕೂಟ ಸರಕಾರ ಪರಿಗಣಿಸದೇ ಹಿಂದಿಯನ್ನು ಮಾತ್ರ ರಾಷ್ಟ್ರ ಭಾಷೆಯಾಗಿ ಹೇರುವ ಪ್ರವೃತ್ತಿ ತೋರುತ್ತಿರುವುದು ಖಂಡನೀಯವಾಗಿದೆ.

ವೈವಿಧ್ಯಮಯ ಮತ್ತು ಬಹುಮುಖಿ ಸಂಸ್ಕೃತಿಗೆ ಮಾರಕವಾಗಿ ಮತೀಯವಾದ ಮತ್ತು ಜಾತೀಯವಾದಗಳು, ವಿಜೃಂಭಿಸುತ್ತಿವೆ. ಸಾಮರಸ್ಯದ ಬದುಕು ಬೆದರಿಕೆಗೆ ಒಳಗಾಗಿದೆ. ಇವನ್ನು ಸಮರ್ಥವಾಗಿ ಎದುರಿಸದೇ ನಮ್ಮ ಸೌಹಾರ್ದ ಪರಂಪರೆಯ ಉಳಿವು ಅಸಾಧ್ಯ. ಜನತೆಯಲ್ಲಿ ಒಗ್ಗಟ್ಟು ಶಾಂತಿ ಸಾಮರಸ್ಯ ಇಲ್ಲದಿದ್ದಲ್ಲಿ ಪ್ರಗತಿ ಶೂನ್ಯವಾಗಿ ಉತ್ತಮ ಬದುಕು ದಕ್ಕವುದೂ ದುರ್ಲಭ.

ರಾಷ್ಟ್ರಕವಿ ಕುವೆಂಪುರವರು ಹೇಳಿದಂತೆ ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎನ್ನುವ ಭಾವ ನಮ್ಮಲ್ಲಿರಬೇಕು. ಇಂತಹ ಒಂದು ನೈಜ ಒಕ್ಕೂಟದ ದೇಶವೆಂಬ ವೈಜ್ಞಾನಿಕ ತಿಳುವಳಿಕೆಯ ಆಧಾರದಲ್ಲಿ ಸರ್ವ ಜನಾಂಗದ ಶಾಂತಿಯ ತೋಟ ಸಾಮರಸ್ಯದ ಬಿಡು ಕರ್ನಾಟಕವನ್ನು ಉಳಿಸಿಕೊಳ್ಳಬೇಕಿದೆ. ನೈಜ ಪ್ರಜಾಪ್ರಭುತ್ವ ನೀತಿಗಳನ್ನು ಕಾಪಾಡಿಕೊಳ್ಳುತ್ತಾ ಎಲ್ಲರ ಬೆಳವಣಿಗೆಗೆ ಬದುಕು ಅರಳಿಸುವ ಸಾಮರಸ್ಯದ ದಾರಿಯಲ್ಲಿ ನಡೆಯಬೇಕಿದೆ. ಅದಕ್ಕಾಗಿ ಸಂಕಲ್ಪಿಸಬೇಕಿದೆ.

ದಸರಾ ಮುಗಿದಿದೆ, ರಾಜಕಾರಣ ಇನ್ನೂ ಬಾಕಿ ಇದೆ!

ಈ ವಾರ

ಎಸ್.ವೈ.ಗುರುಶಾಂತ್

ದಸರಾ ಹಬ್ಬ ಮುಗಿದಿದೆ. ಬರಗಾಲದ ನಡುವಿನಲ್ಲೂ ಅತ್ಯಂತ ಸಂಭ್ರಮದಿಂದ ಮೈಸೂರು ದಸರಾ ಸಮಾರೋಪಗೊಂಡಿದೆ!

ದಸರಾದ ಪ್ರಯುಕ್ತ ಹಲವು ಕಾರ್ಯಕ್ರಮಗಳು ಎಂದಿನಂತೆ ನಡೆದವು. ಆದರೆ, ವಿಶೇಷವಾಗಿ ಗಮನ ಸೆಳೆದದ್ದು ಮಹಿಷ ದಸರಾ, ಚಾಮುಂಡಿ ದಸರಾ ಗಳ ಆಚರಣೆ. ದಲಿತರ, ದಮನಿತರ ಪ್ರತಿನಿಧಿಯಾಗಿ ಮಹಿಷಾಸುರ ನನ್ನು ಸಾಂಕೇತೀಕರಿಸಿ ಹಲವಾರು ದಲಿತ ಸಂಘಟನೆಗಳು ಮತ್ತು ಪ್ರಗತಿಪರರು, ಚಿಂತಕರು ಮಹಿಷ ದಸರಾವನ್ನು ಆಚಸಿದರು. ಇದಕ್ಕೆ ವಿರುದ್ಧವಾಗಿ ಚಾಮುಂಡಿ ದಸರಾ ವನ್ನು ಸಂಘ ಪರಿವಾರ ನಡೆಸಿತು. ಚಾಮುಂಡಿಯ ಬಗೆಗೆ ಮತ್ತು ಮಹಿಷಾಸುರನ ಬಗೆಗೆ ಹಲವಾರು ಕಥೆಗಳು, ವಿಭಿನ್ನ ವಿಚಾರಗಳು ಇವೆ, ಇರುವುದು ಸಹಜ. ಯಾರಾದರೂ ತಮ್ಮದೇ ಅಭಿಪ್ರಾಯವನ್ನು ಇರಿಸಿಕೊಳ್ಳಲು, ವ್ಯಕ್ತಪಡಿಸಲು ಪೂರ್ಣ ಅವಕಾಶ ಮತ್ತು ಹಕ್ಕು ಇದೆ. ಮಹಿಷಾಸುರನು ಮಹಿಷ ಮಂಡಲವನ್ನು ಆಳಿದನು, ಮಹಿಷೂರು ನಿಂದ ಮೈಸೂರು ಹೆಸರು ಬಂದಿದೆ ಇತ್ಯಾದಿ ಅಭಿಪ್ರಾಯಗಳಿವೆ, ಅನೇಕ ವ್ಯಾಖ್ಯಾನಗಳಿವೆ. ಮತ್ತು ಇದನ್ನು ಒಪ್ಪದ, ಅಲ್ಲೆಗಳೆಯುವ, ವಿಭಿನ್ನ ವಿಷಯ, ಮೂಲ ಚೂಲಗಳನ್ನು ಪ್ರತಿಪಾದಿಸುವ ಹಲವು ಪ್ರಗತಿಪರ ಸಂಶೋದಕರೂ ಇದ್ದಾರೆ.


ಮಹಿಷಾಸುರ ಮತ್ತು ಚಾಮುಂಡಿ ಕುರಿತಾದಂತೆ ಪೌರಾಣಿಕ ಕಥೆಗಳು, ನಂಬಿಕೆ ಗಳು ಇರುವಂತೆ ಹಲವಾರು ಸಂಶೋಧನಾತ್ಮಕವಾದ ವಿಶ್ಲೇಷಣೆಗಳು ಸಹ ಇವೆ. ಇದ್ಯಾವವು ಅಂತಿಮ ಎಂದೇನಲ್ಲ. ಯಾವುದೇ ಐತಿಹಾಸಿಕ ಸಂಗತಿಗಳ ಬಗ್ಗೆ ಅಥವಾ ಸಾಂಸ್ಕೃತಿಕ ಧಾರ್ಮಿಕ ಆಚರಣೆಗಳ ಬಗೆಗೆ ಅದರ ಸತ್ಯಾಸತ್ಯಗಳನ್ನು ಅರಿಯಲು ನಿರಂತರ ಸಂಶೋಧನೆ, ಸಂವಾದಗಳು ಅಗತ್ಯ. ಆ ಕಾರಣಕ್ಕಾಗಿ ಸತತವಾದ ಮುಕ್ತವಾದ ಚರ್ಚೆ ಜೀವಂತ ಇರಲೇಬೇಕಾಗುತ್ತದೆ. ಅಂತಹ ಪರ–ವಿರೋಧವಾದ ಚರ್ಚೆಗಳು ಅನಗತ್ಯವಲ್ಲ, ಅಗತ್ಯವಾಗಿವೆ. ಆದರೆ ಅಂತಹ ಚರ್ಚೆಗಳೇ ಕೂಡದು ಎನ್ನುವುದು ಖಂಡಿತಕ್ಕೂ ಸರ್ವಾಧಿಕಾರತ್ವವಾಗಿದೆ.

ಮಹಿಷಾಸುರ ಮತ್ತು ಮಹಿಷ ದಸರಾ ಕುರಿತಾದಂತೆ ಭಿನ್ನಾಭಿಪ್ರಾಯಗಳೇನೇ ಇದ್ದರೂ ಶಾಂತಿಯುತವಾದ ಆಚರಣೆಯನ್ನು ನಡೆಸಲು ಖಂಡಿತಕ್ಕೂ ಹಕ್ಕಿದೆ. ಆದರೆ ಸಂಘ ಪರಿವಾರ ಇದನ್ನು ನಡೆಸಲೇ ಕೂಡದು, ಅದನ್ನು ನಿರ್ಬಂಧಿಸಬೇಕು ಎನ್ನುವ ಆಕ್ರಮಣಕಾರಿ ವರ್ತನೆ ತೋರಿಸಿದ್ದು ಖಂಡನೀಯ. ಬೇಕಿದ್ದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಒಂದು ಶಾಂತಿಯುತ ಕಾರ್ಯಕ್ರಮವನ್ನು ನಡೆಸಿ ಪ್ರತಿಕ್ರಿಸಬಹುದಾಗಿತ್ತು.

ಆದರೆ ಫ್ಯಾಶಿಸ್ಟರಿಗೆ ಚಿಂತನೆ ಸಂಶೋಧನೆ ವಾಸ್ತವಗಳ ಅಗತ್ಯವೇ ಕಾಣುವುದಿಲ್ಲ. ಇಡೀ ಹಬ್ಬವನ್ನು ತನ್ನ ಮತೀಯವಾದೀ ಮತ್ತು ಜಾತಿವಾದಿ ರಾಜಕಾರಣಕ್ಕೆ ಬಳಸಲು, ಪ್ರಗತಿಪರರನ್ನು ಹೀಗೆಳೆಯಲು ಯಾವುದೇ ಹಿಂಜರಿಕೆ ಇಲ್ಲದೆ ಅದು ಪ್ರಯತ್ನಿಸಿತು.

ದಸರಾ ಮುಗಿದ ಬಳಿಕವೂ ಬಿಜೆಪಿ ಅದನ್ನು ನಿಲ್ಲಿಸಲು ಇಚ್ಛಿಸುತ್ತಿಲ್ಲ. ಬದಲಾಗಿ ಮತ್ತಷ್ಟು ರಾಡಿ ಎಬ್ಬಿಸಲು ನೋಡುತ್ತಿದೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಯವರು ಮತ್ತೆ ಎಂಟ್ರಿ ಕೊಟ್ಟಿದ್ದಾರೆ. ಮಹಿಷಾ ದಸರಾ ಆಚರಣೆಗೆ ಕಾನೂನು ಬದ್ಧವಾಗಿ ಅವಕಾಶ ಕಲ್ಪಿಸಿದ ಸರ್ಕಾರದ ಮೇಲೆ ಮತ್ತೆ ಗೂಬೆಕೂರಿಸಲು ಹೊರಟಿದ್ದಾರೆ. ಮಹಿಷಾ ದಸರಾ ಆಚರಣೆಗೆ ಸರ್ಕಾರವೇ ಕುಮ್ಮಕ್ಕು ಕೊಟ್ಟಿದೆ ಎಂದು ಹೇಳತೊಡಗಿದ್ದಾರೆ. ಈ ಕೇಂದ್ರ ಸಚಿವೆ ತನ್ನ ಖಾತೆ ಕರ್ತವ್ಯ, ಕೆಲಸಗಳನ್ನು ಮರೆತು ಬಿಟ್ಟು ಕರ್ನಾಟಕದಲ್ಲಿ ಇಂತಹ ರಾಡಿ ಎಬ್ಬಿಸುವ ಕೋಮುವಾದಿ ಆಕ್ರಮಣಕಾರಿ ಮಾತುಗಳನಾಡುವ, ಅದಕ್ಕೆ ಮತ್ತಷ್ಟು ತಿದಿಯೂವ ಕೆಲಸದಲ್ಲೇ ನಿರತರಾಗಿರುವುದನ್ನು ನೋಡುತ್ತಲೇ ಬಂದಿದ್ದೇವೆ. ಒಂದು ರೀತಿಯಲ್ಲಿ ಇಂಥ ಕೆಲಸಗಳಿಗಾಗಿಯೇ ಕೇಂದ್ರ ಸಚಿವರನ್ನಾಗಿ ಸಿ ಸರಕಾರಿ ದುಡ್ಡಿನಲ್ಲಿ ಸಂಘ ಪರಿವಾರದ ಸ್ವಯಂಸೇವಕೀಯ ಕೆಲಸ ಮಾಡಲು ನೇಮಿಸಿದಂತೆ ಕಾಣುತ್ತಿದೆ. ಖಾತೆ, ಕೆಲಸಗಳನ್ನು ಮರೆತು ಖ್ಯಾತೆ ತೆಗೆಯುತ್ತಾ ಓಡಾಡುವ ಇವರಿಗೆ ಜನ ಸೂಕ್ತ ಪಾಠ ಕಲಿಸುವ ಅಗತ್ಯವಿದೆ.

ಹಾಗೆ ಹೇಳಬೇಕಾದ ಮತ್ತೊಂದು ವಿಷಯ ಎಂದರೆ ಇಂತಹ ಮಹಿಷ ದಸರಾದಲ್ಲಿ ಭಾಗವಹಿಸಿದ್ದ ವಿಚಾರವಾದಿ ಸಾಹಿತಿ ಕೆ.ಎಸ್. ಭಗವಾನ್ ರವರು ಅನಗತ್ಯವಾಗಿ ಕುವೆಂಪು ಅವರ ಹೆಸರನ್ನು ಎಳೆದು ತಂದದ್ದು ಮತ್ತು ಒಕ್ಕಲಿಗರ ಕುರಿತು ಅವರು ಹೇಳಿದ್ದಾರೆ ಎನ್ನುವ ಹೇಳಿಕೆಯನ್ನು ಉದ್ಧರಿಸಿ ಮಾತನಾಡಿದ್ದು ಅತ್ಯಂತ ಅಕ್ಷೇಪಾರ್ಹ. ಸಮಯ, ಸಂದರ್ಭ ಮತ್ತು ಅಗತ್ಯಗಳನ್ನು ಲೆಕ್ಕಕ್ಕೆ ಇಡದಂತೆ ನಾಲಿಗೆಯನ್ನು ಮನಸೋ ಇಚ್ಛೆ ಹರಿಬಿಡುವುದರ ಮೂಲಕ ಸಂಘ ಪರಿವಾರ ಕಾದಿದ್ದ ಅವಕಾಶಕ್ಕೆ ಕಾಳು ಹಾಕಿದರು. ಈ ಪ್ರೊಫೆಸರ್ ರವರು ನಿಜಕ್ಕೂ ಏನನ್ನು ಬಯಸುತ್ತಿದ್ದಾರೆ?



ಮಹಾನ್ 'ಅಕ್ಟೋಬರ್ ಕ್ರಾಂತಿ'



ಅಥವಾ ನಿರ್ಧಿಷ್ಟ ಸೂತ್ರ ಇರಲಿಲ್ಲ.

ಈ ಕೊರತೆಗಳಿಂದಾಗಿ ಆಂತರಿಕವಾದ ಮತ್ತು ಬಾಹ್ಯದ ಪ್ರತಿಕ್ರಾಂತಿ ಶಕ್ತಿಗಳು ಸಕ್ರಿಯವಾಗಿ ಸಮಾಜವಾದವನ್ನು ಭಗ್ನಗೊಳಿಸಲು ಪ್ರಯತ್ನಿಸಿದವು. ಇವು ಸಮಾಜವಾದಕ್ಕೆ ಹಿನ್ನಡೆ ಉಂಟು ಮಾಡಲು ಪ್ರಯತ್ನಿಸಿದವು. ಇದು ಮಾರ್ಕ್ಸ್–ಲೆನಿನ್ ಸಿದ್ಧಾಂತದ ಲೋಪವಲ್ಲ. ಬದಲಿಗೆ ಸಮಾಜವಾದಿ ಸಿದ್ಧಾಂತವನ್ನು ಸ್ಥಾಪಿಸುವ ಹಾದಿಯಲ್ಲಿ ಅಥವಾ ಜಾರಿಗೊಳಿಸುವ ಹಾದಿಯಲ್ಲಿ ವೈಜ್ಞಾನಿಕ ಮತ್ತು ಕ್ರಾಂತಿಕಾರಿ ದಾರಿಯಿಂದ ವಿಚಲಿತರಾದ್ದರಿಂದ ಉಂಟಾಗಿರುವ ಲೋಪವಾಗಿದೆ. ಬಂಡವಾಳಶಾಹಿ ಮತ್ತು ಸಮಾಜವಾದದ ಕುರಿತಾದ ತಪ್ಪಾದ ಅಂದಾಜುಗಳು; ಸಮಾಜವಾದ ಮತ್ತು ಬಂಡವಾಳಶಾಹಿಯ ಶಕ್ತಿ ಅರಿಯುವಲ್ಲಿ ಆದ ಲೋಪಗಳು. ಮಾರ್ಕ್ಸ್‌ವಾದವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದು ಮತ್ತು ಸಿದ್ಧಾಂತವನ್ನು ಯಾಂತ್ರಿಕವಾಗಿ ವ್ಯಾಖ್ಯಾನ ಮಾಡಿದ್ದು ಹಾಗೂ ಸೂತ್ರಾಂಧತೆ ಇಲ್ಲಿನ ತಪ್ಪುಗಳಾಗಿವೆ. ಇದರ ಜೊತೆಗೆ ಸಮಾಜವಾದವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಆದ ಪ್ರಮುಖ ಲೋಪಗಳಾಗಿವೆ. ಅಕ್ಟೋಬರ್ ಕ್ರಾಂತಿಯಿಂದ ಉದಯಿಸಿದ ಸೋವಿಯತ್ ಒಕ್ಕೂಟ ಅಥವಾ ಪೂರ್ವ ಯೂರೋಪಿಯನ್ ದೇಶಗಳು ಈಗ ಅಸ್ತಿತ್ವದಲ್ಲಿ ಇಲ್ಲ. ಸಮಾಜವಾದಕ್ಕೆ ಆದ ಈ ಹಿನ್ನಡೆ ನಡುವೆಯೂ ಅಕ್ಟೋಬರ್ ಕ್ರಾಂತಿಗೆ ಪ್ರಸ್ತುತತೆ ಇದ್ದೇ ಇದೆ. ಈಗಲೂ ನಮಗೆ ಕೆಳಗಿನ ಅಂಶಗಳಲ್ಲಿ ಮಾರ್ಗ ಸೂಚಿಯಾಗಿದೆ.

ಎ) ಇಪ್ಪತ್ತನೇ ಶತಮಾನದ ಆರಂಭದಲ್ಲಿ ನಿಧಾನವಾಗಿ ಬಂಡವಾಶಾಹಿಗೆ ವ್ಯವಸ್ಥೆಗೆ ಹೊರಳಿದ ದೇಶಗಳಲ್ಲಿ ಒಂದು ತಿಳುವಳಿಕೆ ಇತ್ತು. ಅದೆಂದರೆ ಹೊಸದಾಗಿ ಬೆಳೆದು ಬಂದ ಬಂಡವಾಶಾಹಿಗೆ ತಮ್ಮ ದೇಶಗಳಲ್ಲಿ ಊಳಿಗಮಾನ್ಯ ಅಥವಾ ಪಾಳೇಗಾರಿ ಶಕ್ತಿಗಳ ವಿರುದ್ಧ 'ಬೂರ್ಷ್ವಾ ಪ್ರಜಾಸತ್ತಾತ್ಮಕ ಕ್ರಾಂತಿ'ಯನ್ನು ನಡೆಸುವ ಸಾಮರ್ಥ್ಯ ಇಲ್ಲ ಎಂಬುದು. ಊಳಿಗಮಾನ್ಯ ಆಸ್ತಿ ಅಥವಾ ಸಂಪತ್ತಿನ ವಿರುದ್ಧ ಯಾವುದೇ ದಾಳಿ ನಡೆಸಿದರೂ ಅದರಿಂದ ಪ್ರತಿದಾಳಿಯಾಗಲಿದ್ದು, ದಾಳಿಯು ಬೂರ್ಷ್ವಾ ಸಂಪತ್ತಿನ ಮೇಲೆಯೇ ತಿರುಗಿಬೀಳಲಿದೆ ಎಂಬ ಭೀತಿ ಅವರಲ್ಲಿತ್ತು. ಹೀಗಾಗಿ ಅವರು ಹಳೆಯ ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡರು. ಊಳಿಗಮಾನ್ಯ ವ್ಯವಸ್ಥೆಯಲ್ಲಿನ ರೈತಾಪಿಯನ್ನು ಬಿಡುಗಡೆಗೊಳಿಸುವ ಪ್ರಜಾಸತ್ತಾತ್ಮಕ ಕ್ರಾಂತಿ ಪೂರ್ಣವಾಗಲಿಲ್ಲ. ರೈತಾಪಿಯನ್ನು ಮುಕ್ತಗೊಳಿಸುವ ಈ ಕ್ರಾಂತಿ ಶ್ರಮಜೀವಿ ವರ್ಗದ ಹೆಗಲ ಮೇಲೆ ಬಿತ್ತು.

ಇದರಿಂದಾಗಿ ಕಾರ್ಮಿಕರು ಮತ್ತು ರೈತಾಪಿ ಸಮುದಾಯ ಒಗ್ಗೂಡುವುದು ಅಗತ್ಯವಿದ್ದು ಇದಕ್ಕೆ ಕಾರ್ಮಿಕ ವರ್ಗ ನಾಯಕತ್ವ ನೀಡಬೇಕು. ಲೆನಿನ್ ಬರೆದ 'ಟೂ ಟ್ಯಾಕ್ಟಿಕ್ಸ್ ಆಫ್ ಸೋಷಿಯಲ್ ಡೆಮಾಕ್ರಸಿ' ಇನ್ ದಿ ಡೆಮಾಕ್ರಟಿಕ್ ರೆವ್ಯೊಲ್ಯೂಷನ್'ನಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿ ಪೂರ್ಣಗೊಳ್ಳಬೇಕಾದರೆ ಅದನ್ನು ದುಡಿಯುವ ವರ್ಗ ಮುನ್ನಡೆಸಬೇಕು. ಬೂರ್ಷ್ವಾ ವ್ಯವಸ್ಥೆಯನ್ನು ಸೋಲಿಸಲು ನಿರಂಕುಶ ಪ್ರಭುತ್ವದ ಪ್ರತಿರೋಧವನ್ನು ಹಿಮ್ಮೆಟ್ಟಿಸಲು ರೈತಾಪಿ ಸಮುದಾಯವನ್ನು ಜೊತೆಗೂಡಿಸಿಕೊಳ್ಳಬೇಕು. ದುಡಿಯುವ ವರ್ಗವು ಅರೆ–ಶ್ರಮಜೀವಿ ವರ್ಗ('ಸೆಮಿ ಪ್ರೋಲಟೇರಿಯಟ್')ದೊಂದಿಗೂ ಮೈತ್ರಿ ಮಾಡಿಕೊಂಡು, ಸಮಾಜವಾದಿ ಕ್ರಾಂತಿಯನ್ನು ಮಾಡಬೇಕು. ಇದರಿಂದ ಮಾತ್ರವೇ ಬೂರ್ಷ್ವಾ ಪ್ರತಿರೋಧವನ್ನು ಹಿಮ್ಮೆಟ್ಟಿಸಲು ಸಾಧ್ಯ. ಇದರಿಂದ ರೈತಾಪಿ ವರ್ಗದ ಮತ್ತು ಪುಟ್ಟ ಬಂಡವಾಳಶಾಹಿ ವರ್ಗಗಳ ಚಂಚಲತೆಗಳನ್ನೂ ನಿವಾರಿಸಲು ಸಾಧ್ಯ.

ಈ ವಿಷಯದಲ್ಲಿ ಪ್ರೊ.ಪ್ರಭಾತ್ ಪಟ್ನಾಯಕ್ ಅವರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ದುಡಿಯುವ ವರ್ಗದ ನೇತೃತ್ವದ ಕಾರ್ಮಿಕ–ರೈತ ಮೈತ್ರಿಯ ಈ ಪರಿಕಲ್ಪನೆ ನಂತರದ ದಿನಗಳಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಲು ಮತ್ತು ಅದನ್ನೂ ಮೀರಿ ಸಮಾಜವಾದದ ಹಂತಕ್ಕೆ ಸಾಗಲು ಇದು ಪ್ರಮುಖ ಘಟ್ಟವಾಗಿದೆ. ಇದು ಹಲವು ಹಾದಿಗಳಲ್ಲಿ ಮಾರ್ಕ್ಸ್‌ವಾದಿ ಮೂಲಭೂತ ಸಿದ್ಧಾಂತವನ್ನು ಮುಂದಕ್ಕೊಯ್ಯುವ ತಿಳುವಳಿಕೆಯಾಗಿದೆ. ಮೊದಲನೆಯದಾಗಿ ರೈತಾಪಿಯನ್ನು ಕ್ರಾಂತಿಕಾರಿ ಶಕ್ತಿಗಳ ಜೊತೆ ಒಳಗೊಳಿಸಿಕೊಳ್ಳುವುದಾಗಿದೆ.

ಭಾರತದಂತಹ ಹಿಂದುಳಿದ ದೇಶಗಳಲ್ಲಿ ಕ್ರಾಂತಿ ಸಂಭವಿಸಿದಲ್ಲಿ ಅದು ತುಲನಾತ್ಮಕವಾಗಿ ಸಂಘಟಿತ ಸ್ವರೂಪದ್ದಾಗಿರುತ್ತದೆ. ಇದು ಕಾರ್ಮಿಕರು ಮತ್ತು ರೈತಾಪಿ ಸಮುದಾಯದ ಮೈತ್ರಿಯಿಂದ ಆಗುತ್ತದೆ. ಲೆನಿನ್ ಅವರು ಕ್ರಾಂತಿ ಪ್ರಕ್ರಿಯೆಯಲ್ಲಿ ಇದನ್ನು ಅಳವಡಿಸಿಕೊಂಡಿದ್ದರು. ಹೀಗಾಗಿ ಕಾರ್ಮಿಕರು ಮತ್ತು ರೈತಾಪಿ ಮೈತ್ರಿ ಕೇವಲ ಘೋಷಣೆಗೆ ಸೀಮಿತವಾದದ್ದಲ್ಲ, ಇಲ್ಲವೆ ಒಣ ಭಾಷಣವಲ್ಲ, ಆದರೆ ಸಾಮಾಜಿಕ ಬದಲಾವಣೆಯಲ್ಲಿ ತೊಡಗಿಸಿಕೊಂಡಿರುವ ಇಂದಿನ ಕ್ರಾಂತಿಕಾರಿಗಳ ಕೈಯಲ್ಲಿರುವ ಪ್ರಬಲ ಅಸ್ತ್ರವಾಗಿದೆ.

ಬಿ) ಆರಂಭದಲ್ಲಿ, ಸಮಾಜವಾದಕ್ಕೆ ಪರಿವರ್ತನೆ ಹೊಂದುವ ಪ್ರಕ್ರಿಯೆ ಮುಂದುವರೆದ

ಪುಟ 2 ರಿಂದ

ಬಂಡವಾಳಶಾಹಿ ದೇಶಗಳಲ್ಲಿ ಮಾತ್ರ ನಡೆಯಲು ಸಾಧ್ಯ ಎಂಬ ಪ್ರತಿಪಾದನೆ ಇತ್ತು. ಲೆನಿನ್ ಅವರು ಸಾಮ್ರಾಜ್ಯಶಾಹಿ ಮೇಲಿನ ತಮ್ಮ ಸಿದ್ಧಾಂತವನ್ನು ಆ ಸಂದರ್ಭದಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ರೂಪಿಸಿದ್ದರು. ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಹಣಕಾಸು ಮತ್ತು ಕೈಗಾರಿಕೆಯಲ್ಲಿನ ಬಂಡವಾಳ ಕ್ರೋಡೀಕರಣ ಮತ್ತು ಕೇಂದ್ರೀಕೃತವಾಗುವ ನಿಯಮಗಳ ಕುರಿತು ಲೆನಿನ್ ಅರಿತುಕೊಂಡಿದ್ದರು. ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಈ ವಿದ್ಯಮಾನ ಏಕಸ್ವಾಮ್ಯ ವ್ಯವಸ್ಥೆ ಸ್ಥಾಪನೆಗೆ ಮುನ್ನುಡಿ ಹಾಡಲಿದೆ. ಇದು ಅಂತಿಮವಾಗಿ ಸಾಮ್ರಾಜ್ಯಶಾಹಿ ಘಟ್ಟವನ್ನು ಮುಟ್ಟಲಿದೆ. ಲೆನಿನ್ ಅವರು ಅಕ್ಟೋಬರ್ ಕ್ರಾಂತಿಯ ಮೂಲಕ ಸಾಮ್ರಾಜ್ಯಶಾಹಿಯಲ್ಲಿನ ದುರ್ಬಲ ಕೊಂಡಿಯಾಗಿದ್ದ ರಷ್ಯಾವನ್ನು ಕತ್ತರಿಸಿದರು. ಆಗ ರಷ್ಯಾ ಬೇರೆ ಹಲವು ದೇಶಗಳಿಗೆ ಹೋಲಿಸಿದರೆ, ಹಿಂದುಳಿದ ಆರ್ಥಿಕತೆಯಾಗಿತ್ತು.

ಅದೇ ವಿಷಯದಲ್ಲಿ ಕಾಮ್ರೆಡ್ ಸೀತಾರಾಂ ಯೆಚೂರಿಯವರು ಹೀಗೆ ಹೇಳಿದ್ದಾರೆ; "ಲೆನಿನ್ ಹಿಂದುಳಿದ ಆರ್ಥಿಕತೆಯೊಂದನ್ನು ಸಮಾಜವಾದದತ್ತ ಮುನ್ನಡೆಸಲು ಅಗತ್ಯವಾದ ಕ್ರಾಂತಿಯ ಘಟ್ಟಗಳನ್ನು ರೂಪಿಸಿದರು. ಕ್ರಾಂತಿಯ ಪ್ರಜಾಸತ್ತಾತ್ಮಕ ಘಟ್ಟ ಮತ್ತು ಸಮಾಜವಾದಿ ಘಟ್ಟಕ್ಕೆ ಅದರ ಸ್ಥಿತ್ಯಂತರ ಅಕ್ಟೋಬರ್ ಕ್ರಾಂತಿಯಲ್ಲಿ ಹೊರಹೊಮ್ಮಿತು. ಅಕ್ಟೋಬರ್ ಕ್ರಾಂತಿಯ ಈ ಅನುಭವ ಈಗಲೂ ಮುಂದುವರೆದಿದ್ದು ಪ್ರಸಕ್ತ ಸನ್ನಿವೇಶಕ್ಕೆ ಅದು ಅಗತ್ಯವಾದುದಾಗಿದೆ.

ಸಿ) ಎರಡನೇ ಮಹಾಯುದ್ಧದ ನಂತರ ಜಾಗತಿಕ ಬಂಡವಾಳಶಾಹಿಯಲ್ಲಿನ ಶಾಂತಿಯುತ ಮುನ್ನಡೆಯಿಂದಾಗಿ ಬಂಡವಾಳ ಕ್ರೋಢೀಕರಣ ಹೊಸ ಎತ್ತರಕ್ಕೆ ತಲುಪಿತು. ಈ ಹಂತದಲ್ಲಿ ಸಮಾಜವಾದದ ಹಿನ್ನಡೆಯಿಂದಾಗಿ ಈ ಬಂಡವಾಳಶಾಹಿ ಇನ್ನಷ್ಟು ವೃದ್ಧಿಸಿತು. ಸೋವಿಯತ್ ಒಕ್ಕೂಟ ಸೇರಿದಂತೆ ಇಡೀ ಪೂರ್ವ ಯುರೋಪ್‌ನ ಸಮಾಜವಾದಿ ರಾಷ್ಟ್ರಗಳು ಮತ್ತೆ ಬಂಡವಾಳಶಾಹಿಯ ಹಿಡಿತಕ್ಕೆ ಸಿಲುಕಿದವು. ಇದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಇನ್ನಷ್ಟು ಕ್ರೋಡೀಕರಣಗೊಳ್ಳಲು ದಾರಿ ಮಾಡಿಕೊಟ್ಟಿತು. ಇಂತಹ ಸನ್ನಿವೇಶದಲ್ಲಿ ಹಣಕಾಸು ಬಂಡವಾಳಕ್ಕೆ ಯಾವುದೇ ಅಡೆತಡೆಗಳು ಇಲ್ಲದಿದ್ದರಿಂದ ಜಗತ್ತಿನಾದ್ಯಂತ ಹರಿದಾಡಲು ಅವಕಾಶವಾಯಿತು. ಅದು ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದು ಜಾಗತೀಕರಣ ಅನುಷ್ಠಾನಕ್ಕೆ ಬಂತು.

ಪ್ರಸಕ್ತ ಹಂತದ ಜಾಗತೀಕರಣದಿಂದಾಗಿ ಬಂಡವಾಳ ಕ್ರೋಡೀಕರಣ ಮತ್ತೊಂದು ಎತ್ತರಕ್ಕೆ ಬೆಳೆದಿದೆ. ಇದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವಾಗಿ ಹೊರಹೊಮ್ಮಿದೆ. ಈ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಹೊಸ–ಉದಾರೀಕರಣ ನೀತಿಗಳೆಂದು ಹೊಸದಾಗಿ ವ್ಯಾಖ್ಯಾನ ಮಾಡಿದೆ. ಎಲ್ಲಾ ದೇಶಗಳು ಒಂದಲ್ಲಾ ಮತ್ತೊಂದು ರೀತಿಯಲ್ಲಿ ಹಣಕಾಸು ಬಂಡವಾಳದ ಅಣತಿಯಂತೆ ನಡೆಯುತ್ತಿವೆ. ಇವರು ರೂಪಿಸುವ ಹಣಕಾಸು ನೀತಿಗಳಿಗೆ ಅನುಗುಣವಾಗಿ ಅವರು ನೀತಿಗಳನ್ನು ರೂಪಿಸಬೇಕು. ಜಗತ್ತು ಈಗ ಜಾಗತಿಕ ಬಂಡವಾಳದ ಸುಳಿಯಲ್ಲಿ ಸಿಲುಕಿದೆ. ಜಾಗತಿಕ ಬಂಡವಾಳವು ದೇಶ–ರಾಜ್ಯಗಳ ಗುಣಲಕ್ಷಣಗಳನ್ನೇ ಬದಲಾಯಿಸಿದೆ. ಅವು ಜನರ ಹಿತಾಸಕ್ತಿಯನ್ನು ನೋಡುತ್ತಿಲ್ಲ, ಬದಲಿಗೆ ಹಣಕಾಸು ಬಂಡವಾಳದ ಆದಾಯ ಹೆಚ್ಚಿಸುವುದನ್ನು ನೋಡುತ್ತಿವೆ. ಕೊಳ್ಳೆ ಹೊಡೆಯುವ ಗುಣದ ಈ ಬಂಡವಾಳಶಾಹಿ ದುಡಿಯುವ ವರ್ಗದ ಮೇಲೆ ಅತೀವ ಕಷ್ಟಗಳನ್ನು ಹೇರಿ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸಿದೆ. ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಬಂಡವಾಳಶಾಹಿಯ ಈ ವಿದ್ಯಮಾನದಿಂದಾಗಿ ಆಗಿಂದಾಗ್ಗೆ ಹಣಕಾಸು ವ್ಯವಸ್ಥೆಯಲ್ಲಿ ಬಿಕ್ಕಟ್ಟು ತಲೆದೋರುತ್ತದೆ. ಬಂಡವಾಳಶಾಹಿ ಈಗ ದೀರ್ಘವಾಗಿ ಬೆಳೆದು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಹೆಚ್ಚುತ್ತಿರುವ ಬಿಕ್ಕಟ್ಟು ಜಗತ್ತಿನಾದ್ಯಂತ ಬಲಪಂಥೀಯ ಫ್ಯಾಸಿಸ್ಟ್ ರಾಜಕೀಯ ವ್ಯವಸ್ಥೆ ಬೆಳೆಯಲು ಹದವಾದ ಭೂಮಿಕೆಯನ್ನು ಸೃಷ್ಟಿಸಿದೆ. ಜನರ ಕೋಪ ಮತ್ತು ಅಸಮಾಧಾನವನ್ನು ಬೇರೆಡೆಗೆ ತಿರುಗಿಸುವುದು ಬಂಡವಾಳಶಾಹಿಯ ಪ್ರಮುಖ ಅಸ್ತ್ರವಾಗಿದೆ. ಈ ಎಲ್ಲಾ ಬೆಳವಣಿಗೆಗಳು ನಮಗೆ ಸವಾಲು ಮತ್ತು ಅವಕಾಶಗಳನ್ನು ಕಲ್ಪಿಸಿದೆ. ಬಂಡವಾಳಶಾಹಿ ಯಾವೊತ್ತಿಗೂ ಜನರಿಗೆ ಒಳಿತನ್ನು ಮಾಡುವುದಿಲ್ಲ. ಕೇವಲ ಸಮಾಜವಾದ ಮಾತ್ರ ಇದಕ್ಕೆ ಪರ್ಯಾಯವಾಗಿದೆ.

ಲೆನಿನ್ ಹೀಗೆ ಹೇಳಿದ್ದಾರೆ; ನಾವು ಆರಂಭಿಸಿದ್ದೇವೆ. ಯಾವ ದಿನಾಂಕ ಮತ್ತು ಸಮಯ, ಯಾವುದೇ ದೇಶದ ದುಡಿಯುವ ವರ್ಗವು ಇದನ್ನು ಪೂರ್ಣಗೊಳಿಸುತ್ತದೋ ಅದು ಮುಖ್ಯವಲ್ಲ. ಆದರೆ ಪ್ರಮುಖವಾದದ್ದು ಏನೆಂದರೆ "ಮಂಜುಗಡ್ಡೆ ಚೂರು ಚೂರಾಗಿದೆ. ದಾರಿ ತೆರೆದಿದೆ. ಆ ದಾರಿ ತೋರಿಸಲಾಗಿದೆ."

ಈ ಅರಿವಿನ ಮೇರೆಗೆ ಮತ್ತು ಮಹಾ ಅಕ್ಟೋಬರ್ ಕ್ರಾಂತಿಯ ಶ್ರೀಮಂತ ಅನುಭವದೊಂದಿಗೆ ಕಾರ್ಮಿಕ ವರ್ಗವು ತನ್ನ ಗುರಿಗಳನ್ನು ಅಳವಡಿಸಿಕೊಂಡಿದೆ. ಉತ್ಪಾದನೆಯ ಎಲ್ಲ ಮೂಲಗಳನ್ನು ಸಮಾಜವಾದೀಕರಣಗೊಳಿಸುವುದರಿಂದ ಮಾತ್ರವೇ ಕಾರ್ಮಿಕ ವರ್ಗದ ಶೋಷಣೆ ಕೊನೆಗೊಳ್ಳಲಿದೆ. ಈ ಮೂಲಕ ಸಮಾಜವಾದಿ ರಾಜ್ಯವನ್ನು ಸ್ಥಾಪಿಸಲಾಗುವುದು.

ಮಹಾನ್ ಅಕ್ಟೋಬರ್ ಕ್ರಾಂತಿಯ 106ನೇ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಬಂಡವಾಶಾಹಿಯನ್ನು ಕಿತ್ತೊಗೆಯುವ ಮೂಲಕ ಮಾನವೀಯತೆಯನ್ನು ಸ್ಥಾಪಿಸೋಣ ಎಂದು ಪ್ರಮಾಣ ಮಾಡೋಣ.

ಮಹಾ ಅಕ್ಟೋಬರ್ ಕ್ರಾಂತಿ ಚಿರಾಯುವಾಗಲಿ!

ಒಕ್ಕೂಟ ಪದ್ಧತಿಯಲ್ಲಿ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ



ಪ್ರೊ.ಬರಗೂರು ರಾಮಚಂದ್ರಪ್ಪ

ನಮ್ಮ ದೇಶದಲ್ಲಿ ಪ್ರಾದೇಶಿಕತೆಯ ಪರವಾಗಿ ನಡೆಯುತ್ತಿರುವ ವಿವಿಧ ಶೈಲಿಯ ಹುರುಪು, ಹೋರಾಟಗಳ ಹಿನ್ನೆಲೆಯಲ್ಲಿ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆಗಳು ಪರಸ್ಪರ ವಿರುದ್ಧ ನೆಲೆಯ ಪರಿಕಲ್ಪನೆಗಳೆ ಎಂಬ ಪ್ರಶ್ನೆ ಮೂಡುತ್ತದೆ. ನನಗನ್ನಿಸಿದಂತೆ ಇವೆರಡೂ ಪೂರಕ ಪರಿಕಲ್ಪನೆಗಳು, ವಾಸ್ತವ ಸಂಗತಿಯೆಂದರೆ ಪ್ರಾದೇಶಿಕ ಹಿತಾಸಕ್ತಿ ಮತ್ತು ರಾಷ್ಟ್ರೀಯ ಸಮಗ್ರತೆಯ ಬಗ್ಗೆ ಮಾತಾಡುವ ಎರಡೂ ಕಡೆಯ ಕೆಲವರು ಈ ಎರಡು ನೆಲೆಗಳನ್ನು ಪರಿಕಲ್ಪನೆಯ ಮಟ್ಟದಲ್ಲಿ ಒಟ್ಟಾಗಿ ಮನಸ್ಸು, ಮೆದುಳುಗಳಿಗೆ ತಂದುಕೊಂಡಿಲ್ಲ. ಬಹುಪಾಲು ತಮ್ಮದೇ ಪರಿಭಾಷೆಯ ಸಂಪ್ರದಾಯದಲ್ಲಿ ತಂತಮ್ಮ ಭಾವಕೋಶವನ್ನು ಬಸವಳಿಯುವಂತೆ ಮಾಡುವ ಇಂಥವರು ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆಗಳಿಗಿರುವ ಆರ್ಥಿಕ ಹಾಗೂ ರಾಜಕೀಯ ಸಂಬಂಧಗಳನ್ನು ಮರೆಯುತ್ತಾರೆ. ಪ್ರಾದೇಶಿಕತೆ ರಾಷ್ಟ್ರೀಯತೆಗಳೆರಡನ್ನೂ ಒಳಗೊಳ್ಳುತ್ತಲೇ ಇಂಡಿಯಾದ ಇಡೀ ವ್ಯಕ್ತಿತ್ವ ರೂಪುಗೊಳ್ಳಬೇಕೆಂಬ ಅಂಶವು ಇತ್ತಂಡದ ಮುಖಾಮುಖಿಯಲ್ಲಿ ಮರೆಯಾಗುತ್ತದೆ. ನಿಜದ ನೆಲೆಯೆಂದರೆ, ಪ್ರಾದೇಶಿಕತೆಯು ರಾಷ್ಟ್ರೀಯ ಸಮಗ್ರತೆಯನ್ನೂ, ರಾಷ್ಟ್ರೀಯ ಸಮಗ್ರತೆಯು ಪ್ರಾದೇಶಿಕ ಪರಿಕಲ್ಪನೆಯನ್ನೂ ಅರ್ಥ ಮಾಡಿಕೊಂಡರೆ, ಒಂದರೊಳಗೊಂದಾಗಿ ಅನನ್ಯ ಅಪ್ಪುಗೆಯ ಅಂತರ್ ಸಂಬಂಧದಲ್ಲಿ ಪ್ರಕ್ರಿಯೆಯಲ್ಲಿ ಭಾರತದ ವ್ಯಕ್ತಿತ್ವ ಅರಳುತ್ತದೆ.

ಈ ದಿಕ್ಕಿನಲ್ಲಿ ಪ್ರಾದೇಶಿಕ ಭಾವನೆಗಳ ಬೆಳವಣಿಗೆಯನ್ನು ಕುರಿತು ಮೊದಲು ಯೋಚಿಸೋಣ. ನಮಗೆ ತೀರಾ ಹತ್ತಿರವಾದ ಕನ್ನಡ–ಕರ್ನಾಟಕವನ್ನು ಉದಾಹರಣೆಯಾಗಿ ನೋಡೋಣ. ಇಲ್ಲಿ ಭಾಷಿಕವಾದ ಪ್ರಾದೇಶಿಕ ಭಾವನೆ ಮೂಡಿದ್ದು, ಸಂಸ್ಕೃತ, ಇಂಗ್ಲೀಷ್, ಹಿಂದಿ ಭಾಷೆಗಳ ಪ್ರಭಾವದಿಂದ ಪಾರಾಗುವ ಪ್ರತಿಕ್ರಿಯೆಯಾಗಿ, ಪಂಪನಂಥ ಮಹಾಕವಿ ಸಂಸ್ಕೃತ ಮಾರ್ಗವನ್ನು ಮೀರುತ್ತ ಕನ್ನಡದ ದೇಸಿಯನ್ನು ಬಳಸಿದ್ದು, ನಯಸೇನ ಕವಿ ತುಪ್ಪ ಮತ್ತು ಎಣ್ಣೆಯನ್ನು ಬೆರೆಸುವುದು ಸಲ್ಲದೆಂದು ಖಡಾಖಂಡಿತವಾಗಿ ಹೇಳುತ್ತ, ಸಂಸ್ಕೃತದ ಬೆರಕೆಯನ್ನು ವಿರೋಧಿಸಿದ್ದು, ಆಂಡಯ್ಯ ಕವಿ ಸಂಸ್ಕೃತ ಪದ ಪ್ರಯೋಗವನ್ನೇ ಧಿಕ್ಕರಿಸಿ ಕನ್ನಡ ತದ್ಭವಗಳನ್ನು ರೂಪಿಸಿ ಕಾವ್ಯ ರಚಿಸಿದ್ದು, ಇವೆಲ್ಲ ಸಂಸ್ಕೃತದ ದಟ್ಟ ಪ್ರಭಾವದೆದುರು ಕನ್ನಡವನ್ನು ಗಟ್ಟಿಗೊಳಿಸುವ ಕ್ರಮಗಳು. ಮುಂದೆ, ಬ್ರಿಟಿಷರ ಆಡಳಿತದ ಪ್ರಭಾವದಿಂದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರೋತ್ತರ ಕಾಲದಲ್ಲಿ ಇಂಗ್ಲೀಷ್ ಪ್ರಭಾವ ಹೆಚ್ಚಾಯಿತು, ಸ್ವಾತಂತ್ರ್ಯ ಬಂದ ನಂತರದ ಭಾರತದಲ್ಲಿ ಹಿಂದಿ ಹೇರಿಕೆಯ ಪ್ರಯತ್ನಗಳು ಪ್ರಬಲಗೊಂಡವು. ಹೀಗೆ ಅನ್ಯ ಭಾಷೆಗಳ ಹೇರಿಕೆಯನ್ನು ಪ್ರತಿರೋಧಿಸುವ ಫಲವಾಗಿ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಗಳ ಪರವಾದ ಪ್ರತಿಪಾದನೆ ಮುನ್ನಲೆಗೆ ಬಂದಿದೆ. ಭಾಷೆಗಳ ಕಲಿಕೆ ಬೇರೆ, ಹೇರಿಕೆ ಬೇರೆ. ಪ್ರಾದೇಶಿಕ ಪ್ರಜ್ಞೆಯು ಕಲಿಕೆಗೆ ವಿರೋಧಿಯಲ್ಲ. ಹೇರಿಕೆಗೆ ವಿರೋಧಿ. ಇಲ್ಲಿ ಮುಖ್ಯವಾದದ್ದು, ಪ್ರತಿರೋಧದಲ್ಲಿ ಹುಟ್ಟಿದ ಸಾಂಸ್ಕೃತಿಕ ಸ್ವಾಭಿಮಾನ. ಸ್ವಂತಿಕೆಯು ಕರಗಿ ಹೋಗುತ್ತಿರುವ ಅನುಭವ ಉಂಟಾದಾಗ ಈ ರೀತಿಯ ಪ್ರತಿರೋಧ ಪ್ರಕಟವಾಗುತ್ತದೆ. ಅಂದರೆ ಇದು ನಮ್ಮನ್ನು ನಾವು ಕಂಡುಕೊಳ್ಳುವ, ಗುರುತಿಸಿಕೊಳ್ಳುವ ಪ್ರಕ್ರಿಯೆ. ಈ ಪ್ರಕ್ರಿಯೆಯೇ ಪ್ರಾದೇಶಿಕತೆಯ ಮೊದಲ ಮಜಲು.

ಅನಂತರ ಬ್ರಿಟಿಷರ ಕಾಲದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ರೂಪುಗೊಂಡಂತೆ ಕಾಣುತ್ತದೆ. ಇಲ್ಲಿ ರಾಷ್ಟ್ರೀಯತೆಯೆನ್ನುವುದು ಅನ್ಯ ಸಾಂಸ್ಕೃತಿಕ ಪ್ರಭಾವಕ್ಕೆ ತೋರಿದ ಪ್ರತಿಕ್ರಿಯೆ. ವಿವಿಧ ಪ್ರದೇಶದ ಭಾಷೆ, ಸಂಸ್ಕೃತಿಗಳು ಕಳೆದುಹೋಗುತ್ತಿರುವ ಭಾವನೆಯಲ್ಲಿ ಪ್ರಾದೇಶಿಕ ಭಾವಕೋಶಕ್ಕೆ ಹೇಗೆ ಬಾಯಿ ಬಂದಿತೋ, ಹಾಗೆಯೇ ಬ್ರಿಟಿಷರ ಪ್ರಭಾವದಿಂದ ಬಿಡುಗಡೆ ಹೊಂದುವ ಹುಡುಕಾಟ, ಹೋರಾಟದ ಫಲವಾಗಿ ಭಾರತದಲ್ಲಿ ಸಂಸ್ಕೃತಿಯ ಪುನರುಜ್ಜೀವನ ಪ್ರಕ್ರಿಯೆ ಪ್ರಾರಂಭವಾಯಿತು. ಆಗ, ರಾಷ್ಟ್ರೀಯತೆ ಎನ್ನುವುದು ಒಂದು ಸಾಂಸ್ಕೃತಿಕ ಸಮರ್ಥನೆಯ ಕ್ರಿಯೆಯಾಯಿತು. ಅನ್ಯ ಪ್ರಭಾವದಲ್ಲಿ ಮುಳುಗಿಹೋಗದೆ ಪುಟದ ಚೆಂಡಾಗಿ ಜಿಗಿಯುವ ಆಗಿನ ರಾಷ್ಟ್ರೀಯತೆ ಒಂದು ರೀತಿಯಲ್ಲಿ ಪ್ರಾದೇಶಿಕತೆಯೂ ಹೌದು. ಯಾಕೆಂದರೆ, ಅದು ಬ್ರಿಟಿಷರ ವಿರುದ್ಧ ಭಾರತವೆಂಬ ಪ್ರದೇಶದ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿತ್ತು. ಆದರೆ, ಭಾರತವೆಂಬ ಪ್ರಧಾನ ಪ್ರದೇಶದ ಒಳಗೆ ವಿವಿಧ ಪುಟ್ಟ ಪ್ರದೇಶಗಳೂ ಇದ್ದದ್ದರಿಂದ, ಅವುಗಳ ಸಾಂಸ್ಕೃತಿಕ ಸ್ವಾಯತ್ತತೆಯ ಪ್ರಶ್ನೆಯೂ ಪುಟಿದೆದ್ದಿತು. ಆಗ ಭಾರತದೊಳಗಿನ ಪ್ರಾದೇಶಿಕ ಭಾವನೆಗಳೂ ಬೆಳೆಯತೊಡಗಿದವು. ಈ ಪ್ರಾದೇಶಿಕತೆಯನ್ನು ಉಪರಾಷ್ಟ್ರೀಯತೆಯೆಂದೂ ಕರೆಯುತ್ತಾರೆ.

ಹೀಗೆ, ಬ್ರಿಟಿಷರ ಕಾಲದಲ್ಲಿ ಸಾಂಸ್ಕೃತಿಕ ಸ್ವಾಯತ್ತತೆಗಾಗಿ ನಡೆದ ಪ್ರಯತ್ನದಲ್ಲಿ ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಗಳೆರಡೂ ಸೇರಿರುವುದು ಇಂಡಿಯಾದ ವಿಶಿಷ್ಟ ವ್ಯಕ್ತಿತ್ವದ ಪ್ರತೀಕ. ಸತ್ಯದ ಸರಳತೆಯನ್ನು ಅರಿಯುತ್ತಲೇ ಸೂಕ್ಷ್ಮತೆ ಸಂಕೀರ್ಣತೆಗಳನ್ನು ಒಳಗೊಂಡು ಸ್ಫಟಿಕ ಸ್ಪಷ್ಟತೆಯ ಕಡೆಗೆ ತುಡಿಯಬೇಕಾದ್ದು ಭಾರತ ವ್ಯಕ್ತಿತ್ವದ ವಿಶೇಷ. ಈ ತುಡಿತದ ತೀವ್ರತೆಯನ್ನು ಉಳಿಸಿಕೊಂಡಾಗ ಸೂಕ್ಷ್ಮತೆ ದಕ್ಕುತ್ತದೆ. ರಾಷ್ಟ್ರೀಯತೆಯೊಳಗೆ ಪ್ರಾದೇಶಿಕತೆಯನ್ನು ಮಿಡಿಯುವ ನಿಜನಡಿಗೆಯ ಅನುಭವ ಲಭ್ಯವಾಗುತ್ತದೆ. ಸಂವೇದನಾಶೀಲ ಮನಸ್ಸು ಇಂಥ ಸೂಕ್ಷ್ಮತೆ, ಸರಳತೆಗಳೆರಡನ್ನೂ ಒಟ್ಟಿಗೇ ಒಳಗೊಳ್ಳಲು ಸಾಧ್ಯ. ಅಂದರೆ ಸದಾ ತುಡಿಯುವ ಸಂವೇದನಾಶೀಲತೆಯಲ್ಲಿ ನಿಜವಾದ ಭಾರತದ ವ್ಯಕ್ತಿತ್ವವಿದೆ.

ಪ್ರಾದೇಶಿಕ ಭಾವನೆಯ ಕಾರಣಗಳನ್ನು ಸ್ವತಃ ಪ್ರಾದೇಶಿಕತಾ ವಾದಿಗಳೂ ಸರಿಯಾಗಿ ಶೋಧಿಸಬೇಕಾಗಿದೆ. ಭಾಷೆ – ಸಂಸ್ಕೃತಿಗಳನ್ನು ಭಾವೋದ್ರೇಕದ ಬಾಣವಾಗಿ ಬಳಸುವ ಬದಲು ಒಟ್ಟು ಬದುಕಿನ ಭಾಗವಾಗಿ ಪರಿಶೋಧಿಸಬೇಕಾಗಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರೂಪಿಸಿದ ಯೋಜನೆಗಳು ಮತ್ತು ಅವುಗಳ ಅನುಷ್ಠಾನದಲ್ಲಿ ಉಂಟಾದ ತಾರತಮ್ಯವು ಪ್ರಾದೇಶಿಕ ವಾದಕ್ಕೆ ಒಂದು ಪ್ರಮುಖ ಪ್ರೇರಣೆ. ಈಗಾಗಲೇ ಇರುವ ಅಸಮಾನತೆಯ ಅಂತರವನ್ನು ವಿಸ್ತರಿಸುತ್ತಲೇ ಹೋಗುವ ನಮ್ಮ ರಾಜಕೀಯ ವ್ಯವಸ್ಥೆ, ಇಡೀ ದೇಶದ ಸಾಮಾಜಿಕ – ಆರ್ಥಿಕ ಬದಲಾವಣೆಯನ್ನು ತೀವ್ರಗೊಳಿಸುವ ಬದಲು ಯಥಾಸ್ಥಿತಿವಾದೀ ನೆಲೆಯಲ್ಲಿ ಸುಧಾರಣೆಯ ಪ್ರಹಸನಕ್ಕೆ ತೊಡಗಿರುವುದು ಕೂಡ ಕಾರಣ. ಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ಮತ್ತು ಅಧಿಕಾರಶಾಹಿ ಧೋರಣೆಗಳು, ಈ ದೇಶದ ಬಂಡವಾಳಗಾರರ ಬಾಯಾಗಿ ಬಡವರಿಗೆ ಬಣ್ಣದ ಬೆಲೂನಾಗಿ, ಸಾಮಾನ್ಯ ಜನತೆಯ ಸಂವೇದನೆಯನ್ನೇ ಹಾಳುಗೆಡವಿದ ರಾಜಕೀಯವು ಪ್ರಾದೇಶಿಕ ಅಸಮತೋಲನಕ್ಕೂ ಕಾರಣವಾಗಿದೆ. ಆದ್ದರಿಂದ ಅಸಮತೋಲನ ಮತ್ತು ಅಸಮಾನತೆಗಳು ಪ್ರಾದೇಶಿಕ ಭಾವನೆ ಕೆರಳಲು ಕಾರಣವಾಗುತ್ತವೆ.

'ಮಣ್ಣಿನ ಮಕ್ಕಳಿಗೆ ಉದ್ಯೋಗ'ವೆಂಬ ಘೋಷಣೆಯನ್ನೇ ಪರಿಶೀಲಿಸಬಹುದು. ಇಲ್ಲಿ ಹುಟ್ಟಿ ಬೆಳೆದವರಿಗೆ ಪ್ರಾದೇಶಿಕ ಆದ್ಯತೆ ಮೇಲೆ ಉದ್ಯೋಗ ಸಿಗಬೇಕೆಂಬ ವಾದ ಸರಿಯಾದದ್ದೆ ಆಗಿದೆ. ನಾವು ಭಾರತದೇಶದ ಮಣ್ಣಿನ ಮಕ್ಕಳೂ ಹೌದು; ಆಯಾ ರಾಜ್ಯದ ಮಣ್ಣಿನ ಮಕ್ಕಳೂ ಹೌದು. ಆಯಾ ರಾಜ್ಯದವರಿಗೆ ಮಾತ್ರವೇ ಆಯಾ ರಾಜ್ಯಗಳ ಉದ್ಯೋಗ ಎಂದು ಕಾನೂನೇ ಆಯಿತೆಂದುಕೊಳ್ಳೋಣ. ಆಗ ಆಯಾ ರಾಜ್ಯದಲ್ಲಿರುವ ಮಣ್ಣಿನ ಮಕ್ಕಳೆಲ್ಲರಿಗೂ ಉದ್ಯೋಗ ಸಿಗುತ್ತದೆಯೋ ಅಥವಾ ಆಯಾ ರಾಜ್ಯದ 'ಹೊನ್ನಿನ ಮಕ್ಕಳಿಗೆ' ಮಾತ್ರ ಉದ್ಯೋಗ ಸಿಗುತ್ತದೆಯೋ? ಜೊತೆಗೆ, ರಾಜ್ಯದ ಎಲ್ಲ ನಿರುದ್ಯೋಗಗಳಿಗೂ ಇಲ್ಲೇ ಉದ್ಯೋಗ ದೊರೆಯುತ್ತದೆಯೇ? ರಾಜ್ಯದ ಮಣ್ಣಿನ ಮಕ್ಕಳಿಗೇ ಉದ್ಯೋಗ ಕೊಡುತ್ತೇವೆಂದುಕೊಂಡರೂ ಇಲ್ಲಿನ ಮಣ್ಣಿನ ಮಕ್ಕಳ ನಡುವೆಯೇ ಜಾತಿ – ವರ್ಗಗಳಾಗಿ ವಿಂಗಡಿಸಲ್ಪಟ್ಟಿರುವ ವ್ಯವಸ್ಥೆಯ ಮೂಲ ಸೂಕ್ಷ್ಮಗಳು ಮೇಲುಗೈಯಾಗುತ್ತವೆ. ಹಾಗೆಂದು ಆಯಾ ರಾಜ್ಯದ ಸ್ಥಳೀಯ ಅರ್ಹರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯವಲ್ಲ. ಸ್ಥಳೀಯರಿಗೆ ಆದ್ಯತೆ ಕೊಡಲೇಬೇಕು. ಸ್ಥಳೀಯ ಅರ್ಹರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವುದು ಒಂದು ರಾಷ್ಟ್ರೀಯ ನೀತಿಯಾಗಬೇಕು. ಜೊತೆಗೆ ಭ್ರಷ್ಟಾಚಾರವಿಲ್ಲದ ಪಾರದರ್ಶಕ ವಿಧಾನವನ್ನು ಅನುಸರಿಸಬೇಕು. ಪ್ರಾದೇಶಿಕ ಭಾಷೆ, ಸಂಸ್ಕೃತಿ ಮತ್ತು ಜನರಿಗೆ ಕೊಡುವ ಮಹತ್ವವು ರಾಷ್ಟ್ರೀಯತೆಗೆ ವಿರುದ್ಧವಲ್ಲ. ನಿಜವಾದ ರಾಷ್ಟ್ರೀಯ ಸಂವೇದನೆಯು ರಾಷ್ಟ್ರದಲ್ಲಿರುವ ಅಸಮಾನತೆಯನ್ನು ನಾಶಪಡಿಸುವ ತೀವ್ರ ಪ್ರಯತ್ನದ ಮೂಲಕ ಪ್ರಾದೇಶಿಕ ಅಸಮತೋಲನವನ್ನು ತೊಡೆಯುತ್ತದೆ.

ನಾನು ಮೊದಲೇ ಹೇಳಿದಂತೆ ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಯ ಪರಿಕಲ್ಪನೆಗಳು ಪರಸ್ಪರ ಪೂರಕವಾಗಿರಬೇಕೇ ಹೊರತು ಮಾರಕವಾಗಿ ಅಲ್ಲ. ಆದ್ದರಿಂದ, ಪ್ರಾದೇಶಿಕ ಪಕ್ಷಗಳು ಮತ್ತು ರಾಷ್ಟ್ರೀಯ ಪಕ್ಷಗಳು ಈ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಾದೇಶಿಕ ಪಕ್ಷಗಳು ಆಯಾ ಪ್ರದೇಶದ ಅಭ್ಯುದಯದ ಬಗೆಗೆ ಹೆಚ್ಚು ಗಮನ ಹರಿಸುವ ಆಸೆ ಹೊಂದಿರುತ್ತವೆಯೆಂಬುದು ನಿಜ. ಆದರೆ ಈ ಪಕ್ಷಗಳೂ ರಾಷ್ಟ್ರದ ಸಂವಿಧಾನದ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗಿದೆಯೆಂಬುದನ್ನು ಮರೆಯಬಾರದು. ಪ್ರಾದೇಶಿಕ ಪಕ್ಷವಾಗಲೀ, ರಾಷ್ಟ್ರೀಯ ಪಕ್ಷವಾಗಲೀ, ನನಗೆ ಮುಖ್ಯವಾದದ್ದು, ಅವುಗಳ ಸೈದ್ಧಾಂತಿಕ ನೆಲೆ. ರಾಷ್ಟ್ರೀಯ, ಪ್ರಾದೇಶಿಕ ಎಂಬ ಭೌಗೋಳಿಕ ಪದ ಪ್ರಯೋಗಕ್ಕಿಂತ ಒಂದು ರಾಜಕೀಯ ಪಕ್ಷ, ಜನಪರವೋ ಜನವಿರೋಧಿಯೋ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಜನಪರವಾಗಿದ್ದರೆ ಅಸಮತೋಲನದ ಪ್ರಶ್ನೆ ಗೌಣವಾಗುತ್ತದೆ. ರಾಷ್ಟ್ರೀಯ ಪಕ್ಷಗಳಿಗೆ ಪ್ರಾದೇಶಿಕ ಪ್ರಜ್ಞೆ ಮತ್ತು ಪ್ರಾದೇಶಿಕ ಪಕ್ಷಗಳಿಗೆ ರಾಷ್ಟ್ರೀಯ ಪ್ರಜ್ಞೆ ಇರಬೇಕಾಗುತ್ತದೆ.

ಇನ್ನೊಂದು ಮುಖ್ಯ ಸಂಗತಿಯೆಂದರೆ, ಸಂವಿಧಾನದ ಪ್ರಕಾರ ನಮ್ಮದು ಒಕ್ಕೂಟ ರಾಜ್ಯ ಪದ್ಧತಿ. ಅಂದರೆ ಫೆಡರಲ್ ಪದ್ಧತಿ. ಇಲ್ಲಿ ರಾಷ್ಟ್ರವೂ ಮಾನ್ಯ; ಅದರೊಳಗಿರುವ ರಾಜ್ಯವೂ ಮಾನ್ಯ. ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಗಳ ಸಂಬಂಧಕ್ಕೆ ಫೆಡರಲ್ ಪದ್ಧತಿಯೇ ಒಂದು ಸಮರ್ಥ ಪ್ರತೀಕ. ಹೀಗಿರುವಾಗ ಮೂಲ ಸಮಸ್ಯೆ ಪ್ರಾದೇಶಿಕ ಪಕ್ಷ ಅಥವಾ ರಾಷ್ಟ್ರೀಯ ಪಕ್ಷಗಳದಲ್ಲ. ಪ್ರಾದೇಶಿಕ ಮತ್ತು ರಾಷ್ಟ್ರೀಯ ನೆಲೆಗಳನ್ನು ಎರಕಹೊಯ್ದು ರೂಪಿಸುವ ಸಾಮಾಜಿಕ, ಆರ್ಥಿಕ ನೀತಿ ನಿಲುವುಗಳು ಮಾತ್ರವೇ ರಾಜಕೀಯ ಪಕ್ಷವೊಂದರ ಮೌಲ್ಯಮಾಪನಕ್ಕೆ ಮಾನದಂಡವಾಗುತ್ತವೆ.

ಈಗ ಮುಖ್ಯವಾಗಿ, ಕೇಂದ್ರ – ರಾಜ್ಯಗಳ ಸಂಬಂಧ ಮತ್ತು ಅಧಿಕಾರಗಳನ್ನು ಒಕ್ಕೂಟ ಪದ್ಧತಿಯ ಭಾಗವಾಗಿ ಅರ್ಥಮಾಡಿಕೊಂಡು ಅನುಸರಿಸಬೇಕಾಗಿದೆ. ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಯ ಸಂಬಂಧವು ಸಾಂಸ್ಕೃತಿಕ ಸ್ವಾಯತ್ತತೆಯ ಪ್ರಶ್ನೆಯಾಗಿರುವಂತೆ, ಆರ್ಥಿಕ ಸ್ವಾಯತ್ತತೆಯ ಪ್ರಶ್ನೆಯೂ ಆಗಿದೆ. ರಾಜಕೀಯವಾಗಿಯಂತೂ ಇದು ಪ್ರಧಾನವಾಗಿ ಆರ್ಥಿಕ ಸ್ವಾಯತ್ತತೆಯ ಪ್ರಶ್ನೆ. ಆದ್ದರಿಂದ ರಾಜ್ಯಗಳಿಗೆ ಆರ್ಥಿಕವಾಗಿ ಸಾಕಷ್ಟು ಸ್ವಾಯತ್ತತೆ ದೊರಕಿಸಿಕೊಳ್ಳುವ ವೈಚಾರಿಕ ಹೋರಾಟ ಇಂದಿನ ಅಗತ್ಯ. ಇಂಥ ವೈಚಾರಿಕತೆಯು ರಾಷ್ಟ್ರೀಯತೆಗೆ ವಿರೋಧಿಯಾಗಬೇಕಿಲ್ಲ; ವಿರೋಧಿಯಾಗುವುದಿಲ್ಲ. ಹಾಗೆಂದು ಕೇಂದ್ರ ಸರ್ಕಾರಗಳು ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿ ಅಧಿಕಾರ ಕೇಂದ್ರೀಕರಣ ಮಾಡಿಕೊಂಡರೆ ವಿರೋಧಿಸದೆ ಇರಬೇಕಾಗಿಲ್ಲ. ರಾಜ್ಯಗಳ ಸ್ವಾಯತ್ತ ಅಸ್ತಿತ್ವಕ್ಕೆ ಧಕ್ಕೆ ತರುವ ಪ್ರಯತ್ನಗಳನ್ನು ವಿರೋಧಿಸಬೇಕಾಗುತ್ತದೆ.

ಪ್ರಾದೇಶಿಕ ಸ್ವಾಯತ್ತತೆಯು ಪ್ರತ್ಯೇಕತೆಯಲ್ಲ. ಪ್ರಾದೇಶಿಕತೆಯ ವಾದ ಯಾವತ್ತೂ ಪ್ರತ್ಯೇಕತಾವಾದವಾಗಬಾರದು. ಅಂತೆಯೇ ರಾಷ್ಟ್ರೀಯ ಸಮಗ್ರತೆಯು ಪ್ರಾದೇಶಿಕ ಅನನ್ಯತೆಯ ಮನ್ನಣೆ ಮೂಲಕವೇ ಸಮಗ್ರತೆಯನ್ನು ರೂಪಿಸಿಕೊಳ್ಳಬೇಕು. ಪ್ರಾದೇಶಿಕ ಸ್ವಾಯತ್ತತೆ ಮತ್ತು ರಾಷ್ಟ್ರೀಯ ಸಮಗ್ರತೆಗಳು ಪರಸ್ಪರ ಪ್ರತಿರೋಧಿಯಾಗದೆ ಬದುಕುವುದೇ ಭಾರತದ ಒಕ್ಕೂಟ ಪದ್ಧತಿಯ ನೀತಿ. ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರು 'ರಾಷ್ಟ್ರೀಯತೆಯೆನ್ನುವುದು ವಿವಿಧ ಪ್ರಭೇಧಗಳ ಪ್ರಜ್ಞೆ' ಎಂದು ವ್ಯಾಖ್ಯಾನಿಸಿದ್ದು ಇಲ್ಲಿ ಉಲ್ಲೇಖನೀಯ. 'ವಿವಿಧತೆಯಲ್ಲಿ ಏಕತೆ' ಎನ್ನುವುದು ಒಕ್ಕೂಟ ಪದ್ಧತಿಯ ಆಶಯ.

ಕೃಪೆ: 'ಮನುಷ್ಯ ಜಾತಿ ತಾನೊಂದೆ ವಲಂ' ಪುಸ್ತಕದಿಂದ ಆಯ್ಕೆ. ಜನ ಪ್ರಕಾಶನ, ಬೆಂಗಳೂರು.

ವಿಝಿಂಜಂ ಅಂತರಾಷ್ಟ್ರೀಯ ಬಂದರು ಯೋಜನೆ – ಅಭಿವೃದ್ಧಿಯತ್ತ ಮತ್ತೊಂದು ದೊಡ್ಡ ಹೆಜ್ಜೆ ಇಟ್ಟ ಕೇರಳ


ಪಿಣರಾಯಿ ನೇತೃತ್ವದ ಮೊದಲ ಸರ್ಕಾರದಂತೆ ಎರಡನೇ ಸರ್ಕಾರವೂ ಅಭಿವೃದ್ಧಿ ಮತ್ತು ಜನ ಕಲ್ಯಾಣದಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ. ಕೇರಳದ ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಅಡಿಪಾಯ ಹಾಕುವ ಭೌತಿಕ ಮತ್ತು ಸಾಮಾಜಿಕ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ‘ವಿಝಿಂಜಂ’ ಅಂತರಾಷ್ಟ್ರೀಯ ಬಂದರು ಯೋಜನೆ ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಕೇರಳ ಮಾತ್ರವಲ್ಲದೆ ದೇಶದ ವಾಣಿಜ್ಯ ಕ್ಷೇತ್ರದಲ್ಲಿ ಭಾರಿ ಪ್ರಗತಿಗೆ ನಾಂದಿ ಹಾಡುವ ಯೋಜನೆ ಎಲ್.ಡಿ.ಎಫ್. (ಎಡ ಪ್ರಜಾಸತ್ತಾತ್ಮಕ ರಂಗ) ಸರ್ಕಾರದ ಅವಧಿಯಲ್ಲಿ ಸಾಕಾರಗೊಂಡಿದೆ.

2023ರ ಅಕ್ಟೋಬರ್ 15ರಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ‘ವಿಝಿಂಜಂ’ ಬಂದರಿಗೆ ಆಗಮಿಸಿದ ಮೊದಲ ಹಡಗು, ಚೀನಾದ ‘ಶೆನ್ ಹುವಾ 15’ ಅನ್ನು ಸ್ವಾಗತಿಸಿದಾಗ ರಾಜ್ಯದ ಅಭಿವೃದ್ಧಿಯ ಕನಸುಗಳಿಗೆ ರೆಕ್ಕೆಪುಕ್ಕ ಬಂದಿತು.

ಎಲ್.ಡಿ.ಎಫ್. ಸರ್ಕಾರದ ಯಾವುದೇ ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಟೀಕಿಸುವ ಮತ್ತು ಈ ಸಂಬಂಧದ ಸಾರ್ವಜನಿಕ ಕಾರ್ಯಕ್ರಮಗಳಿಂದ ಸದಾ ದೂರವಿರುತ್ತಿದ್ದ ಕಾಂಗ್ರೆಸ್ ಮತ್ತು ಯು.ಡಿ.ಎಫ್.ಗಳು, ಈ ‘ವಿಝಿಂಜಂ’ ಯೋಜನೆಯ ವಿಷಯದಲ್ಲಿ ಹಾಗೆ ಮಾಡಲಿಲ್ಲ. ಈ ಬೃಹತ್ ಯೋಜನೆಯ ತರಬಹುದಾದ ಅಗಾಧವಾದ ಅಭಿವೃದ್ಧಿ ಸಾಮರ್ಥ್ಯ ಮತ್ತು ಅದರ ಬಗ್ಗೆ ಜನರ ಅನಿಸಿಕೆಗಳಿಂದಾಗಿ ಯು.ಡಿ.ಎಫ್. ತನ್ನ ಧೋರಣೆಯನ್ನು ಬದಲಾಯಿಸಿಕೊಂಡಿತು.

ಎಡಪಕ್ಷಗಳು ಅಭಿವೃದ್ಧಿ ಯೋಜನೆಗಳ ವಿರೋಧಿಗಳಲ್ಲ

ಅತ್ಯಾಧುನಿಕ ‘ತಂತ್ರಜ್ಞಾನ ಕೇಂದ್ರ’ (ಟೆಕ್ನೋ ಪಾರ್ಕ್) ಸ್ಥಾಪಿಸುವ ಮೂಲಕ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ(ಐ.ಟಿ.)ದ ಅಭಿವೃದ್ಧಿಗೆ ಕಾರಣರಾದ ಇ.ಕೆ.ನಾಯನಾರ್ ಅವರ ದೂರದೃಷ್ಟಿಯು ‘ವಿಝಿಂಜಂ’ ಯೋಜನೆಯ ಆರಂಭದಲ್ಲಿ ಪ್ರತಿಫಲಿಸುತ್ತಿದೆ. 1996 ರಲ್ಲಿ, ಈ ಯೋಜನೆಯ ಪೂರ್ವಭಾವಿ ಪ್ರಕ್ರಿಯೆಯು ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೂ ಬಂದರಿನ ಎಲ್ಲಾ ಚಟುವಟಿಕೆಗಳಲ್ಲಿ ಎಡಪಕ್ಷಗಳು ಮತ್ತು ಸಿಪಿಐ(ಎಂ) ಸ್ಪಷ್ಟವಾದ ಸಕಾರಾತ್ಮಕ ಪಾತ್ರವನ್ನು ವಹಿಸುತ್ತಾ ಬಂದಿವೆ. ವಿ.ಎಸ್. ಅಚ್ಯುತಾನಂದನ್ ಸರ್ಕಾರದ ಅವಧಿಯಲ್ಲಿ ಯೋಜನೆಯು ಟೆಂಡರ್ ಪ್ರಕ್ರಿಯೆಗೂ ಹೋಗಿತ್ತು. ಚೀನಾ ಕಂಪನಿಗೆ ಟೆಂಡರ್ ಸಿಕ್ಕಿತ್ತು. ಆದರೆ, ಭದ್ರತಾ ಕಾರಣಗಳಿಂದಾಗಿ ಕೇಂದ್ರ ಸರ್ಕಾರ ಯೋನೆಗೆ ಅನುಮತಿ ನೀಡಿರಲಿಲ್ಲ. ನಂತರದ ಉಮ್ಮನ್ ಚಾಂಡಿ ಸರ್ಕಾರದ ಅವಧಿಯಲ್ಲಿ ಸಾರ್ವಜನಿಕ ವಲಯದಲ್ಲಿ (Land load model) ಕಲ್ಪಿಸಲಾದ ಯೋಜನೆಯಾಗಿದ್ದು, ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲು ನಿರ್ಧರಿಸಲಾಯಿತು ಮತ್ತು ಅಂತಿಮವಾಗಿ ಬಂದರು ನಿರ್ಮಿಸುವ ಅವಕಾಶ ಅದಾನಿ ಗುಂಪಿನ ಕೈಗೆ ಸಿಕ್ಕಿತು. ಆಗ ಅದಾನಿ ಗುಂಪಿನ ಖಾಸಗಿ ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಕೇರಳದ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವ ಷರತ್ತುಗಳನ್ನು ಇದ್ದವು. ಆ ಷರತ್ತುಗಳನ್ನು ಎಡಪಕ್ಷಗಳು ವಿರೋಧಿಸಿದ್ದವು. ಕೇರಳ ಸರ್ಕಾರವು ಸಣ್ಣ ಮೊತ್ತವನ್ನಷ್ಟೆ ಭರಿಸುತ್ತದೆ. ಯೋಜನೆಗೆ ಬೇಕಾದ ಬಹುದೊಡ್ಡ ಮೊತ್ತವನ್ನು ಖಾಸಗಿ ಕಂಪನಿ ಭರಿಸಲಿದೆ, ಅಂದರೆ ಯೋಜನೆಯಲ್ಲಿ ಸರಕಾರದ ಪಾತ್ರ ಮತ್ತು ಪಾಲು ಕಡಿಮೆ ಇರಲಿದೆ ಎಂಬ ಕಾರಣಕ್ಕೆ ಎಡಪಕ್ಷಗಳು ಪ್ರತಿಭಟನೆ ನಡೆಸಿದ್ದವು. ಆದರೆ, ಸಿಪಿಐ(ಎಂ) ಆಗಲಿ ಅಥವಾ ಎಡಪಕ್ಷಗಳಾಗಲಿ ಇಡೀ ಯೋಜನೆಗೇ ಎಂದಿಗೂ ವಿರೋಧ ವ್ಯಕ್ತಪಡಿಸಿಲ್ಲ. ಉಮ್ಮನ್ ಚಾಂಡಿ ಸರ್ಕಾರ ಮತ್ತು ಮನಮೋಹನ್ ಸಿಂಗ್ ಸರ್ಕಾರ ಈ ಯೋಜನೆಯನ್ನು ಕೈಬಿಡಲು ನಿರ್ಧರಿಸಿದಾಗ, ಯೋಜನೆಯನ್ನು ಬೆಂಬಲಿಸಿ, ಎಲ್.ಡಿ.ಎಫ್. ಏಪ್ರಿಲ್ 19, 2013 ರಂದು ‘ವಿಝಿಂಜಂ’ನಿಂದ ಅಯ್ಯಂಕಾಳಿ ಸಭಾಂಗಣದವರೆಗೆ ಮಾನವ ಸರಪಳಿ ರಚಿಸಿತ್ತು. ಆ ವೇಳೆ ಮಾನವ ಸರಪಳಿಯ ಮೊದಲ ಕೊಂಡಿಯಾಗಿದ್ದವರು, ಆಗ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಪಿಣರಾಯಿ ವಿಜಯನ್. ಸಿಪಿಐ(ಎಂ) ಮತ್ತು ಎಡಪಕ್ಷಗಳು ಯೋಜನೆಯ ವಿರುದ್ಧ ನಿಂತಿವೆ ಎಂಬ ಯುಡಿಎಫ್ ಹೇಳಿಕೆ ಶುದ್ಧ ಅಸಂಬದ್ಧ ಎಂದು ತೋರಿಸಲು ಈ ಘಟನೆಯೊಂದೇ ಸಾಕು. ಮೇಲಾಗಿ ಯೋಜನೆಯ ಪ್ರತಿ ಹಂತದಲ್ಲೂ ಇದ್ದ ಅಡೆತಡೆಗಳನ್ನು ನಿವಾರಿಸಿ ಯೋಜನೆ ಸಾಕಾರಗೊಳ್ಳಲು ಎಡಪಕ್ಷಗಳ ಮಧ್ಯಸ್ಥಿಕೆಯೇ ಕಾರಣ ಎಂಬುದನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲ. ಎನ್.ಟಿ. ಚಂಡಮಾರುತ ಮತ್ತು ಕೋವಿಡ್ ಸಾಂಕ್ರಾಮಿಕವು ಯೋಜನೆಯ ಕೆಲಸದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಬಿಜೆಪಿ, ಕಾಂಗ್ರೆಸ್, ಬಲಪಂಥೀಯ ಮಾಧ್ಯಮಗಳು ಮತ್ತು ‘ಪರಿಸರವಾದಿ’ಗಳ ಹೆಸರಿನ ಕೆಲವು ‘ಪರಿಸರ ಮೂಲಭೂತವಾದಿಗಳು’ ಜಂಟಿಯಾಗಿ ಎತ್ತಿದ ಆಕ್ಷೇಪಗಳು ಮತ್ತು ನಡೆಸಿದ ಪ್ರತಿಭಟನೆಗಳು ಮತ್ತು ಕೆಲವು ಜಾತಿ ಮತ್ತು ಧಾರ್ಮಿಕ ಸಂಘಟನೆಗಳ ವಿರೋಧ... ಈ ವಿಷಯದಲ್ಲಿ, ಈ ಸಂಬಂಧವಾಗಿ ಎಲ್ಲ ಪ್ರಶ್ನೆಗಳಿಗೆ ಸೂಕ್ತ ಸ್ಪಷ್ಟನೆ ಮತ್ತು ಉತ್ತರಗಳನ್ನು ನೀಡುವ ಮೂಲಕ ಎಲ್.ಡಿ.ಎಫ್. ಸರ್ಕಾರವು ಯೋಜನೆಯನ್ನು ಯಶಸ್ವಿಗೊಳಿಸಿತು.



ಈ ಯೋಜನೆಯ ಯಶಸ್ಸಿಗೆ ಎಡಪಕ್ಷಗಳು ಏನು ಮಾಡಿವೆ ಎಂಬ ಯುಡಿಎಫ್ ಟೀಕೆ ಕೇವಲ ಕುರುಡುತನವಲ್ಲದೆ ಮತ್ತೇನಲ್ಲ. ಎಲ್.ಡಿ.ಎಫ್. ಸರಕಾರ ಮಾಡಿದ ಕೆಲವು ಕೆಲಸಗಳನ್ನು ಮಾತ್ರ ಇಲ್ಲಿ ವಿವರಿಸಬಹುದು.

1. ಒಪ್ಪಂದದ ಅಡಿಯಲ್ಲಿ ವರ್ಗಾಯಿಸಲು ಅಗತ್ಯ ಭೂಮಿಯನ್ನು ಒದಗಿಸಲು ತೆಗೆದುಕೊಂಡ ಕ್ರಮಗಳು.
2. ಬಂದರು ನಿರ್ಮಾಣಕ್ಕೆ ಗ್ರಾನೈಟ್ ಹುಡುಕುವಲ್ಲಿ ಗುತ್ತಿಗೆ ಕಂಪನಿಗೆ ತೊಂದರೆಯಾಗುತ್ತಿದ್ದಂತೆ, ಹೊಸ ಕ್ವಾರಿಗಳಿಗೆ ಅಗತ್ಯ ಅನುಮತಿ ನೀಡುವ ಮೂಲಕ ಗ್ರಾನೈಟ್ ಖರೀದಿಸಲು ಸರ್ಕಾರ ಸಿದ್ಧವಾಗಿದ್ದು ಮತ್ತು ಅದಕ್ಕಾಗಿ ಇಲಾಖೆಗಳ ಸಮನ್ವಯವನ್ನೂ ಖಾತ್ರಿಪಡಿಸಿದ್ದು.
3. ಕೇಂದ್ರ ಸರ್ಕಾರದಿಂದ ಯೋಜನೆಗೆ ಹಣವನ್ನು ಸಂಗ್ರಹಿಸಲು ಕಾರ್ಯಸಾಧ್ಯತೆಯ ಗ್ಯಾಪ್ ಫಂಡ್(ವಿ.ಜಿ.ಎಫ್.) ಯೋಜನೆಯ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಈ ಮೂಲಕ ಕೇಂದ್ರ ಸರ್ಕಾರದಿಂದ 816 ಕೋಟಿ ರೂಪಾಯಿ ಯೋಜನೆಗೆ ಲಭ್ಯವಾಯಿತು.
4. ಎಲ್.ಡಿ.ಎಫ್. ಸರಕಾರ ಅಧಿಕಾರಕ್ಕೆ ಬಂದಾಗ ಕೇವಲ 350 ಮೀಟರ್ ಉದ್ದವಿದ್ದ ಬಂದರು ಒಡ್ಡನ್ನು 2,460 ಮೀಟರ್ ವಿಸ್ತರಿಸಲಾಯಿತು. ಅಂದರೆ ಶೇ. 5ರಷ್ಟಿದ್ದ ನಿರ್ಮಾಣವನ್ನು ಶೇ. 68ಕ್ಕೆ ತರಲಾಗಿದೆ. ಮೊದಲ ಹಂತದಲ್ಲಿ ಒಟ್ಟಾರೆ 2,960 ಮೀಟರ್ ಉದ್ದ ಬಂದರು ಕಟ್ಟೆ ನಿರ್ಮಾಣಗೊಳ್ಳಬೇಕಿದೆ.
5. ಹೂಳೆತ್ತುವ ಮತ್ತು ಪುನಶ್ಚೇತನ ಕಾಮಗಾರಿ ಶೇ. 68 ರಷ್ಟು ಪೂರ್ಣಗೊಂಡಿದೆ.
6. ಈ ಸರ್ಕಾರದ ಅವಧಿಯಲ್ಲಿ ಬರ್ತ್ ನಿರ್ಮಾಣವನ್ನು ಪ್ರಾರಂಭಿಸಲಾಯಿತು ಮತ್ತು ಅದು ಸುಮಾರು 82 ಪ್ರತಿಶತ ಪೂರ್ಣಗೊಂಡಿದೆ.
7. ಬಂದರಿಗೆ ವಿದ್ಯುತ್ ನೀಡಲು ಕಟ್ಟಕ್ಕಡದಿಂದ 220 ಕೆ.ವಿ. ಸಾಮರ್ಥ್ಯದ ಲೈನ್ ಅಳವಡಿಸಲಾಗಿದೆ. ಇದಕ್ಕಾಗಿ ಬಂದರಿನಲ್ಲಿ 220 ಕೆ.ವಿ. ಸಾಮರ್ಥ್ಯದ ಸಬ್ ಸ್ಟೇಷನ್ ಅಳವಡಿಸಿ ಕಾರ್ಯಾರಂಭ ಮಾಡಲಾಗಿತ್ತು.
8. ಬಂದರು ಕೆಲಸಕ್ಕೆ ಅಗತ್ಯವಿರುವ ಹಲವಾರು ಕಟ್ಟಡಗಳನ್ನು ನಿಯೋಜಿಸಲಾಗಿದೆ. ಗೇಟ್ ಸಂಕೀರ್ಣವನ್ನು ಪೂರ್ಣಗೊಳಿಸಿ ತೆರೆಯಲಾಯಿತು.
9. 130 ಎಕರೆ ಕಂಟೈನರ್ ಯಾರ್ಡ್‌ನ 40 ಎಕರೆ ಕಾಮಗಾರಿ ಪೂರ್ಣಗೊಂಡಿದೆ. ಈ ಕೆಲಸಗಳನ್ನು ಯೋಜನೆಯನ್ನು ಸಾಕಾರಗೊಳಿಸುವ ಪ್ರಾಮಾಣಿಕ ಬಯಕೆಯ ಪ್ರತಿಬಿಂಬವಾಗಿ ಮಾತ್ರ ನೋಡಬಹುದಾಗಿದೆ. ಇದ್ಯಾವುದನ್ನೂ ನೋಡದೆ ಯೋಜನೆಯನ್ನು ಸಾಧ್ಯಗೊಳಿಸಿದ ಖ್ಯಾತಿಯನ್ನು ಪಡೆದುಕೊಳ್ಳಲು ಮುಂದಾಗುವವರ ಉತ್ಸಾಹವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ.

ಒಗ್ಗೂಡಿದರೆ ಅಸಾಧ್ಯವಾದುದು ಯಾವುದೂ ಇಲ್ಲ

ಈ ಬಂದರಿಗೆ ಬಂದ ಮೊದಲ ಹಡಗನ್ನು ಸ್ವಾಗತಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದಂತೆ ಕೇರಳದಲ್ಲಿ ಎಲ್ಲರೂ ಒಗ್ಗೂಡಿದರೆ ಅಸಾಧ್ಯವಾದುದು ಯಾವುದೂ ಇಲ್ಲ. ಅಭಿವೃದ್ಧಿ ವಿಚಾರದಲ್ಲಾದರೂ ಸರ್ಕಾರದ ಜೊತೆ ನಿಲ್ಲಲು ಯುಡಿಎಫ್ ಸಿದ್ಧವಿದೆಯೇ? ‘ಲೈಫ್’ ಯೋಜನೆಯನ್ನು ಹಾಳು ಮಾಡಲು ಯತ್ನಿಸಿ ‘ಕೆ ಫೋನ್’ ವಿರುದ್ಧ ಹರಿಹಾಯ್ದ ಯುಡಿಎಫ್, ತನ್ನ ತಪ್ಪನ್ನಾದರೂ ಅರಿತು ಅಭಿವೃದ್ಧಿ ವಿಚಾರದಲ್ಲಿ ಸರಕಾರದ ಜತೆ ನಿಲ್ಲಲು ಸಿದ್ಧವಾಗಬೇಕು. ರಾಜ್ಯದ ಅಭಿವೃದ್ಧಿಯಲ್ಲಿ ರಾಜ್ಯದ ಹಿತಾಸಕ್ತಿಯೊಂದಿಗೆ ನಿಲ್ಲುವ ವಿಧಾನದ ಭಾಗವಾಗಿ ಯಾವ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದರೂ ಎಡಪಕ್ಷಗಳು ‘ವಿಝಿಂಜಂ’ ಯೋಜನೆಯೊಂದಿಗೆ ಮುಂದುವರಿಯಲು ಸಿದ್ಧವಾಗಿವೆ. ಇತ್ತೀಚಿಗೆ ಎರ್ನಾಕುಲಂನಲ್ಲಿ ಸಿಪಿಐ(ಎಂ)ನ ರಾಜ್ಯ ಸಮ್ಮೇಳನ ನಡೆದಾಗ ಮಂಡಿಸಿದ ‘ಪಕ್ಷದ ದೃಷ್ಟಿಯಲ್ಲಿ ನವ ಕೇರಳ’ದ ದಾಖಲೆಯಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಸ್ಥಳೀಯ ನಿವಾಸಿಗಳ ಆತಂಕ ನಿವಾರಣೆ..

‘ವಿಝಿಂಜಂ’ ಯೋಜನೆಯು ಯಶಸ್ವಿಯಾಗಿ ಪ್ರಗತಿಯಲ್ಲಿರುವಾಗ, ಸ್ಥಳೀಯ ನಿವಾಸಿಗಳು ಕೆಲವು ಕಳವಳಗಳನ್ನು ವ್ಯಕ್ತಪಡಿಸಿದರು. ಅವರ ಬೇಡಿಕೆಗಳನ್ನು ತಾಳ್ಮೆಯಿಂದ ಆಲಿಸಿ ಪರಿಹಾರ ಕಂಡುಕೊಳ್ಳಲು ಸರ್ಕಾರ ಸಚಿವ ಸಂಪುಟ ಉಪಸಮಿತಿ ರಚಿಸಿದೆ. ‘ವಿಝಿಂಜಂ’ ಯೋಜನೆಯನ್ನು ಕೈಬಿಡಬೇಕೆಂಬ ಬೇಡಿಕೆಯ ಹೊರತಾಗಿ ಉಳಿದ ಆರೂ ಬೇಡಿಕೆಗಳಿಗೆ ಪರಿಹಾರ ಕಂಡುಕೊಳ್ಳಲು ಸರಕಾರ ಪ್ರಾಮಾಣಿಕವಾಗಿ ಪ್ರಯತ್ನಿಸಿತು. ಈ ಮುಷ್ಕರವನ್ನು ಬಳಸಿಕೊಂಡು ಯೋಜನೆಗೆ ತಡೆಯೊಡ್ಡುವುದು ಪ್ರತಿಪಕ್ಷಗಳು ಅನುಸರಿಸಿದ ವಿಧಾನವಾಗಿದೆ. ಎಲ್.ಡಿ.ಎಫ್. ಆಡಳಿತದಲ್ಲಿ ಯಾವುದೇ ಅಭಿವೃದ್ಧಿ ಆಗುವುದಿಲ್ಲ ಎಂಬ ತಪ್ಪು ಕಲ್ಪನೆಯನ್ನು ಬಿತ್ತುವ ಕೆಲಸದಲ್ಲಿ ಯು.ಡಿ.ಎಫ್. ತೊಡಗಿದೆ. ಆದರೆ, ಇವರ ಮಾತುಗಳನ್ನು ಒಪ್ಪಲು ಜನ ಸಿದ್ಧರಿರಲಿಲ್ಲ. ಕೊಟ್ಟ ಭರವಸೆಗಳನ್ನು ಈಡೇರಿಸುವ ಮತ್ತು ನುಡಿದಂತೆ ನಡೆಯುವ ಸರ್ಕಾರ ಕೇರಳವನ್ನು ಆಳುತ್ತಿದೆ ಎಂಬುದು ಜನರಿಗೆ ತಿಳಿದಿದೆ. ಅದು ಅವರ ಅನುಭವ. ಜಿ.ಎ.ಐ.ಎಲ್. ಪೈಪ್‌ಲೈನ್, ಎಡಮನ್ ಕೊಚ್ಚಿ ಪವರ್ ಹೈವೇ, ವಾಟರ್ ಮೆಟ್ರೋ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ, ಕಣ್ಣೂರು ವಿಮಾನ ನಿಲ್ದಾಣ, ಕೊಚ್ಚಿ ಮೆಟ್ರೋ ಇತ್ಯಾದಿಗಳನ್ನು ವಾಸ್ತವಿಕವಾಗಿ ಮಾಡಿದ ➚

ಅಂತರಾಷ್ಟ್ರೀಯ ಸರಕು ಸಾಗಣೆಗೆ ಸಂಬಂಧಿಸಿದ ದೈತ್ಯ ಹಡಗುಗಳ ಸಂಚಾರವನ್ನು ಪ್ರಸ್ತುತ ಕೊಲಂಬೊ, ಸಿಂಗಾಪುರ ಮತ್ತು ಶ್ರೀಲಂಕಾದ ಸಲಾಲಾ ಬಂದರುಗಳಲ್ಲಿ ನಿರ್ವಹಿಸಲಾಗುತ್ತಿದೆ. ಈಗ ಅದು ‘ವಿಝಿಂಜಂ’ನಲ್ಲಿ ಸಾಧ್ಯವಾಗಲಿದೆ. ಕಂಟೈನರ್‌ಗಳಿಗೆ ತುಂಬಲಾದ ಸರಕುಗಳನ್ನು ಸಣ್ಣ ಹಡಗುಗಳ ಮೂಲಕ ದೊಡ್ಡ ಹಡಗುಗಳಿಗೆ, ಅಥವಾ ಭೂಮಿಯ ಮೂಲಕ ದೊಡ್ಡ ಹಡಗುಗಳಿಗೆ ಸಾಗಿಸಬಹುದು. ಅಂತೆಯೇ, ‘ವಿಝಿಂಜಂ’ ಒಂದು ಸರಕು ವರ್ಗಾವಣೆ ಕೇಂದ್ರ (ಟ್ರಾನ್ಸ್‌ಶಿಪ್‌ಮೆಂಟ್ ಪಾಯಿಂಟ್) ಆಗಲಿದ್ದು, ಅಲ್ಲಿ ಸರಕುಗಳನ್ನು ದೊಡ್ಡ ಹಡಗುಗಳಿಂದ ಸಣ್ಣ ಹಡಗುಗಳಿಗೆ ವರ್ಗಾಯಿಸಲಾಗುತ್ತದೆ.

ಆರ್‌ಎಸ್‌ಎಸ್‌ನ ವಿನಾಶಕಾರಿ ವಿಶ್ವದೃಷ್ಟಿ

ಪ್ರಕಾಶ್ ಕಾರತ್

ನಾಗಪುರದಲ್ಲಿ ನಡೆದ ವಾರ್ಷಿಕ ವಿಜಯದಶಮಿ ರ್‍ಯಾಲಿಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗ್ವತ್ ಮಾಡಿದ ಭಾಷಣ ಆರೆಸ್ಸೆಸ್‌ನ ವಿನಾಶಕಾರಿ ವಿಶ್ವದೃಷ್ಟಿಯ ಅಧಿಕೃತ ಧೋರಣೆಗಳನ್ನು ಒಳಗೊಂಡಿತ್ತು.

2023 ಅಕ್ಟೋಬರ್ 24ರಂದು ಭಾಗ್ವತ್ ಮಾಡಿದ ಭಾಷಣ, ಕಳೆದ ಕೆಲವು ವರ್ಷಗಳ ವಿಜಯದಶಮಿ ಭಾಷಣಗಳಲ್ಲಿನ ವಿಷಯಗಳ ಮುಂದುವರಿಕೆಯಾಗಿತ್ತು. ಸಂಘವು ಸಂಪೂರ್ಣವಾಗಿ ಮೋದಿ ಸರಕಾರದೊಂದಿಗೆ ಗುರುತಿಸಿಕೊಂಡಿರುವುದನ್ನು ಹಾಗೂ ಆರೆಸ್ಸೆಸ್-ನಿರ್ದೇಶಿತ ಸರಕಾರದ ವಿಶ್ವದೃಷ್ಟಿಯನ್ನು ಅದು ತೋರಿಸಿದ್ದವು. ಈ ಬಾರಿಯ ಭಾಷಣದಲ್ಲಿ ಬಿಜೆಪಿ ಮತ್ತು ಸರಕಾರದ ಬೆನ್ನಿಗೆ ನಿಲ್ಲುವಂತೆ ಭಾಗ್ವತ್ ಸಂಘದ ಕಾರ್ಯಕರ್ತರಿಗೆ ಕರೆ ನೀಡಿದ್ದು ಮುಂಬರುವ ಲೋಕಸಭೆ ಚುನಾವಣೆಗೆ ತಯಾರಿಯ ಸ್ಪಷ್ಟ ಸೂಚನೆಯಾಗಿದೆ. ಇದು ಭಾರತವನ್ನು ಸ್ವಂತ ಬಲದಿಂದ ಒಂದು ದೊಡ್ಡ ಶಕ್ತಿಯನ್ನಾಗಿಸುವತ್ತ ಕೆಲಸ ಮಾಡುವ ಸರಕಾರವಾಗಿದೆ ಎಂದು ಅವರು ಹೇಳಿದರು.

ಆದರೆ, ಭಾರತ ಪ್ರಗತಿ ಹೊಂದುವುದನ್ನು ಬಯಸದ ಕೆಲವು ಜನರು ಒಡ್ಡಿರುವ ಹೊಸ ಅಪಾಯವೊಂದನ್ನು ಭಾಗ್ವತ್ ಪರಿಚಯಿಸಿದರು. 'ಆದ್ದರಿಂದ ಅವರು ಸಮಾಜದಲ್ಲಿ ತಾರತಮ್ಯ ಸೃಷ್ಟಿಸಲು ಪ್ರಯತ್ನಿಸಿದರು; ರಚನಾತ್ಮಕ ಸಾಮೂಹಿಕತೆಯನ್ನು ಒಡೆಯುವ, ಪ್ರತ್ಯೇಕತೆ ಮತ್ತು ಸಂಘರ್ಷವನ್ನು ಉಂಟು ಮಾಡುವ ಪ್ರಯತ್ನ ಅದಾಗಿದೆ' ಎಂದವರು ಹೇಳಿದರು.

ಜಾಗೃತಿಯ ಬಗ್ಗೆ ಭಯ

ಈ ವಿನಾಶಕಾರಿ ಶಕ್ತಿಗಳನ್ನು 'ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು ಅಥವಾ ವೋಕ್, ಅಂದರೆ ಎಚ್ಚರಗೊಂಡವರು' ಎಂದು ಭಾಗ್ವತ್ ಕರೆದರು. ಈ ಶಕ್ತಿಗಳು ಕೆಲಸ ಮಾಡುವ ರೀತಿಯ 'ಕರಾಳ' ಚಿತ್ರಣವನ್ನು ಅವರು ಬಣ್ಣಿಸಿದರು: 'ಮಾಧ್ಯಮ ಮತ್ತು ಅಕಾಡೆಮಿ ವಲಯವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಹಾಗೂ ಶಿಕ್ಷಣ, ಸಂಸ್ಕೃತಿ, ರಾಜಕೀಯ ಮತ್ತು ಸಾಮಾಜಿಕ ಪರಿಸರವನ್ನು ಗೊಂದಲ, ಅರಾಜಕತೆ ಮತ್ತು ಭ್ರಷ್ಟಾಚಾರಕ್ಕೆ ತಳ್ಳುವುದು ಅವರ ಕಾರ್ಯವಿಧಾನವಾಗಿದೆ' ಎಂದರು.

ನಿಗೂಢ ಸೂತ್ರಗಳು

ಈ ಸುತ್ತುಬಳಸು ಹಾಗೂ ನಿಗೂಢ ಸೂತ್ರಗಳ ಅರ್ಥವೇನು? ಭಾಗ್ವತ್ 'ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು' ಎಂಬ ಪದವನ್ನು ಬಳಸಿರುವುದು ಆಸಕ್ತಿಯ ವಿಚಾರವಾಗಿದೆ. ಅಂತಾರಾಷ್ಟ್ರೀಯವಾಗಿ ತೀರಾ-ಬಲಪಂಥೀಯ ಮತ್ತು ನವ-ಫ್ಯಾಸಿಸ್ಟ್ ವಲಯಗಳಲ್ಲಿ ಬಳಸಲಾಗುವ ಪದ ಇದಾಗಿದೆ. ಅವರ ಪ್ರಕಾರ, 'ಸಾಂಸ್ಕೃತಿಕ ಮಾರ್ಕ್ಸ್‌ವಾದ'ವು ಪಾಶ್ಚಿಮಾತ್ಯ ನೈತಿಕತೆ ಮತ್ತು ನಾಗರಿಕತೆಯನ್ನು ನಾಶ ಮಾಡುವ ಹಾಗೂ ಸರಿಯಾದ ರಾಜಕೀಯದ (ಪೊಲಿಟಿಕಲ್ ಕರೆಕ್ಟ್‌ನೆಸ್) ಶುದ್ಧ ಪರಿಕಲ್ಪನೆಯನ್ನು ಹೇರುವ ಪಿತೂರಿಯಾಗಿದೆ. ಎಡ ಮತ್ತು ಆರೆಸ್ಸೆಸ್‌ನ ಫ್ಯಾಸಿಸ್ಟ್ ಸಿದ್ಧಾಂತ ಹಾಗೂ ಭಾರತೀಯ ಸಮಾಜ ಮತ್ತು ಸಂಸ್ಕೃತಿಯನ್ನು 'ಏಕರೂಪಗೊಳಿಸುವ' ಮೋದಿ ಸರಕಾರದ ಸರ್ವಾಧಿಕಾರಿ ಪ್ರಯತ್ನಗಳನ್ನು ಟೀಕಿಸುವ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಮಸಿ ಬಳಿಯಲು ಆರೆಸ್ಸೆಸ್ ಈ ಪದವನ್ನು ಚಾಲ್ತಿಗೆ ತರುತ್ತಿದೆ. ವಾಸ್ತವವಾಗಿ, 'ಸಾಂಸ್ಕೃತಿಕ ಮಾರ್ಕ್ಸ್‌ವಾದ' ಎನ್ನುವಂಥ ಯಾವುದೇ ವಿಚಾರವಿಲ್ಲ. 1920ರ ದಶಕದಿಂದಲೇ ಅವರು ಮಾರ್ಕ್ಸ್‌ನಿಂದ ದೂರ ಸರಿದಿದ್ದಾರೆ ಎಂದು ಹೇಳುವಲ್ಲೇ ಸ್ವತಃ ಭಾಗ್ವತ್ ಇದನ್ನು ಒಪ್ಪಿಕೊಂಡಿದ್ದಾರೆ. ಜನಾಂಗ ತಾರತಮ್ಯ ಮತ್ತು ಅಲ್ಪಸಂಖ್ಯಾತರ ವಿರುದ್ಧದ ನಾನಾ ಬಗೆಯ ತಾರತಮ್ಯಗಳ ಬಗ್ಗೆ ಮಾತನಾಡುವವರ ವಿರುದ್ಧ ದಾಳಿ ಮಾಡಲು ಕೂಡ ಬಲಪಂಥೀಯರು 'ಎಚ್ಚರ' (ವೋಕ್) ಮತ್ತು 'ಎಚ್ಚರದ ಸಂಸ್ಕೃತಿ' (ವೋಕ್ ಕಲ್ಚರ್) ಪದಗಳನ್ನು ಬಳಸುತ್ತಾರೆ. ಆದರೆ ಇಲ್ಲಿ ಕೂಡ, ಇದು 'ಎಚ್ಚರ'ವನ್ನು ಆಚರಿಸುವ ಮಾರ್ಕ್ಸ್‌ವಾದಿಗಳಲ್ಲ; ಪಶ್ಚಿಮದ ಬೂರ್ಜ್ವಾ-ಉದಾರವಾದಿಗಳಾಗಿದ್ದಾರೆ. ಭಾರತದಲ್ಲಿ ಎಡಪಂಥೀಯರ ಮೇಲೆ ದಾಳಿ ನಡೆಸಲು 'ಭಾರತೀಯ' ಸಂಸ್ಕೃತಿಗೆ ಪರಕೀಯವಾದುದು ಎಂಬ ಅತಿ-ಸಂಪ್ರದಾಯವಾದಿ ಬಲಪಂಥೀಯರ ವಾಕ್ಚಾತುರ್ಯವನ್ನು ಭಾಗ್ವತ್ ಅನುಕರಣೆ ಮಾಡುತ್ತಿದ್ದಾರೆ. ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದೀಕರಿಸಲು ಮತ್ತು ಜೆಎನ್‌ಯುನಂಥ ವಿಶ್ವವಿದ್ಯಾಲಯಗಳನ್ನು ಟಾರ್ಗೆಟ್ ಮಾಡಲು ಇದು ಆರೆಸ್ಸೆಸ್ ನೇತೃತ್ವದ ಅಭಿಯಾನಕ್ಕೆ ಸಮರ್ಥನೆಯೂ ಆಗಿದೆ.

'ಅಕಾಡೆಮಿಯಾ'ದಂತೆ ಮಾಧ್ಯಮ ಕೂಡ ನಿಯಂತ್ರಣ ಮತ್ತು ದಬ್ಬಾಳಿಕೆ ಒಳಗಾಗಿದೆ. 'ನ್ಯೂಸ್‌ಕ್ಲಿಕ್' ಮೇಲೆ ಹೇಗೆ ಆಕ್ರಮಣ ನಡೆಸಲಾಯಿತು ಎನ್ನುವುದರಿಂದ ನಾವದನ್ನು ಕಂಡಿದ್ದೇವೆ.

ನಿಜವಾದ ಟಾರ್ಗೆಟ್

ಆರೆಸ್ಸೆಸ್ ಮುಖ್ಯಸ್ಥನ ನಿಜವಾದ ಟಾರ್ಗೆಟ್ ಎಡ ಶಕ್ತಿಯಾಗಿದೆ. ಇತ್ತೀಚೆಗೆ ಪುಣೆಯಲ್ಲಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಭಾಗ್ವತ್, 'ಎಡಪಂಥೀಯ ಪರಿಸರ'ದ ವಿರುದ್ಧ ಹೋರಾಟ ನಡೆಸಲು ಕರೆ ನೀಡಿದ್ದನ್ನು ಗಮನಿಸಬಹುದು. ಶಿಕ್ಷಣ ವ್ಯವಸ್ಥೆ ಮತ್ತಿತರ ಸಂಸ್ಥೆಗಳಲ್ಲಿ ಎಡ ಶಕ್ತಿಗಳು ನುಸುಳಿದ್ದಾರೆ ಎಂದವರು ಹೇಳಿದ್ದರು. ಸಾಮಾಜಿಕವಾಗಿ ತುಳಿತಕ್ಕೊಳಗಾದ ನಾನಾ ಜನ ಸಮುದಾಯದವರು ತಮ್ಮನ್ನು ತಾವು ದೃಢವಾಗಿ ಸಮರ್ಥಿಸಿ ಕೊಳ್ಳುತ್ತಿರುವುದಕ್ಕೆ ಆರೆಸ್ಸೆಸ್ ಹೆಚ್ಚೆಚ್ಚು ಕಳವಳಗೊಳ್ಳುತ್ತಿದೆ ಮತ್ತು ಪ್ರಾದೇಶಿಕ ಆಶೋತ್ತರಗಳನ್ನು ವಿಭಜನಕಾರಿ ಎಂದು ಕರೆಯುತ್ತಿದೆ. ಮಣಿಪುರದಲ್ಲಿನ ಹಿಂಸಾಚಾರ ಮತ್ತು ಅಶಾಂತಿಗೆ ಬಾಹ್ಯ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಕಾರಣವೇ ಹೊರತು ಈಶಾನ್ಯ ಭಾರತದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರ ಪ್ರೇರಿತ ಸಂಕುಚಿತ ಅಸ್ಮಿತೆ ರಾಜಕಾರಣವು ಕಾರಣವಲ್ಲ ಎಂದು ಭಾಗ್ವತ್ ಹೇಳಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಭಾಗ್ವತ್‌ರ ಈ ಸಿದ್ಧಾಂತವನ್ನು ನರೇಂದ್ರ ಮೋದಿ ಅದೇ ದಿನ ದೆಹಲಿಯಲ್ಲಿ ನಡೆದ ದಸರಾ ರ್‍ಯಾಲಿ ಭಾಷಣದಲ್ಲಿ ಪ್ರತಿಧ್ವನಿಸಿದರು. ಜಾತಿವಾದ ಮತ್ತು ಪ್ರಾದೇಶಿಕವಾದದ ಹೆಸರಿನಲ್ಲಿ ದೇಶವನ್ನು ಒಡೆಯಲು ಯತ್ನಿಸುವ ಶಕ್ತಿಗಳನ್ನು ಸೋಲಿಸುವಂತೆ ಮೋದಿ ಕರೆ ನೀಡಿದರು.

ಜಾತಿ ಗಣತಿಯಿಂದ ದೇಶ ವಿಭಜನೆಯಂತೆ!

ಜಾತಿ ಗಣತಿ ನಡೆಸುವ ಬೇಡಿಕೆಯು ಜಾತಿವಾದದ ಮೂಲಕ ದೇಶವನ್ನು ಒಡೆಯುವ ಸಾಧನವೆಂದು ಮೋದಿ ಹೇಳುತ್ತಾರೆ. ಭಾರತವನ್ನು ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯನ್ನಾಗಿ ಮಾಡುವಲ್ಲಿ ನಿರತರಾಗಿರುವ ಮೋದಿ ಈ ಮಾತನ್ನು ಆಡಿದ್ದಾರೆ. ಭಾಗ್ವತ್ ಮತ್ತು ಮೋದಿ ಇಬ್ಬರಿಗೂ ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ತೆರೆಯುವುದು ರಾಷ್ಟ್ರೀಯ ಪುನರುಜ್ಜೀವನದ ಒಂದು ಸಂಕೇತವಾಗಿದೆ. ಇದು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ 'ಸಾಂಸ್ಕೃತಿಕ ಏಕತೆ'ಯ ಸಂಕೇತವೆಂದು ಅವರು ಭಾವಿಸುತ್ತಾರೆ. ಹಿಂದುತ್ವ ಸರ್ವಾಧಿಕಾರಿ ರಾಷ್ಟ್ರವನ್ನು ಸ್ಥಾಪಿಸುವ ತಮ್ಮ ಪ್ರಯತ್ನದಲ್ಲಿ ಅವರು ಶಿಕ್ಷಣ ವ್ಯವಸ್ಥೆ ಮತ್ತು ಎಲ್ಲ 'ಪರಕೀಯ' ಶಕ್ತಿಗಳನ್ನು ತೆಗೆದು ಹಾಕಲು ಬಹು-ಸಂಸ್ಕೃತಿಯ ಸಂರಚನೆಯನ್ನು ಟಾರ್ಗೆಟ್ ಮಾಡುತ್ತಾರೆ ಎನ್ನುವುದು ಭಾಗ್ವತ್ ಮತ್ತು ಮೋದಿ ಭಾಷಣಗಳು ಸ್ಪಷ್ಟಪಡಿಸುತ್ತವೆ. ಈ ಅಪಾಯಕಾರಿ ಗುರಿ ಸಾಧಿಸಲು ಆರೆಸ್ಸೆಸ್ ಮತ್ತು ಮೋದಿ ಸರಕಾರ ಪರಸ್ಪರ ಕೈಜೋಡಿಸಿರುವುದು ಜಗಜ್ಜಾಹೀರಾಗಿದೆ.

ಅನು: ವಿಶ್ವ

ಅನುಭವ.

ಬಂದರಿಗೆ ಮೊದಲ ಹಡಗು ಸಮೀಪಿಸಿದಾಗ, ತಿರುವನಂತಪುರಂ ನಗರವು 'ಕೇರಳದ 'ಶೆನ್ ಶೆನ್'' (ಬಂದರಿನ ನಿರ್ಮಾಣದಿಂದ ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಚೀನಾದ ನಗರ) ಆಗಲಿದೆ ಎಂದು ಯೋಜನೆಯ ವಿರುದ್ಧ ಹಿಂದೆ ಆಕ್ಷೇಪಣೆಗಳನ್ನು ಎತ್ತಲು ಪ್ರಯತ್ನಿಸಿದ್ದ ಪತ್ರಿಕೆಯೊಂದು ಹೇಳಿದೆ. ಉದ್ಯೋಗಾವಕಾಶಗಳ ಮಹಾಪೂರವೇ ಹರಿದುಬರಲಿದೆ ಎಂದು ಈಗ ಪತ್ರಿಕೆಯಲ್ಲಿ ಶೀರ್ಷಿಕೆ ನೀಡಲಾಗಿದೆ. ಯೋಜನೆಯು ವಾಸ್ತವವಾದಾಗ, ಅದು ತರಬಹುದಾದ ಪ್ರಗತಿ ಮತ್ತು ಬದಲಾವಣೆಯ ಚಿತ್ರವನ್ನು ಮರೆಮಾಡಲು ಆ ಪತ್ರಿಕೆಗೂ ಅಸಾಧ್ಯವಾಯಿತು. 'ವಿಝಿಂಜಂ' ಬಂದರು, 'ಮದರ್‌ಶಿಪ್' ಎನ್ನಲಾಗುವ ದೈತ್ಯ ಹಡಗುಗಳಿಗೆ ಲಂಗರು ತಾಣ (ಡಾಕಿಂಗ್ ಬಂದರು) ಆಗಿರುತ್ತದೆ, ದೊಡ್ಡ ಹಡಗುಗಳು ಎಂದರೆ ಸು.25,000 ಕಂಟೇನರ್‌ಗಳನ್ನು ಸಾಗಿಸಬಲ್ಲ ಬೃಹತ್ ಹಡಗುಗಳಾಗಿವೆ. ಅಂತಹ ಹಡಗುಗಳಿಗೆ ಕನಿಷ್ಠ 20 ಮೀಟರ್ ಆಳದ (ಸಮುದ್ರ) ತೀರ ಬೇಕಾಗುತ್ತದೆ. ಈ ತೀರವು ಯಾವುದೇ ಮೇಲ್ಹಾವಣಿ ಇಲ್ಲದೆ ಆಕಾಶಕ್ಕೆ ತೆರೆದಿರುತ್ತದೆ. ಅಂತಹ ದೊಡ್ಡ ಹಡಗುಗಳು ಲಂಗರು ಹಾಕಬಹುದಾದ ಬಂದರುಗಳ ಅಭಿವೃದ್ಧಿ ಸಾಮರ್ಥ್ಯವು ಈಗ ವಿಸ್ತರಿಸಿದೆ. ಇಂತಹ ದೈತ್ಯ ಹಡಗುಗಳ ಸಂಚಾರವನ್ನು ಪ್ರಸ್ತುತ ಕೊಲಂಬೊ, ಸಿಂಗಾಪುರ ಮತ್ತು ಶ್ರೀಲಂಕಾದ ಸಲಾಲಾ ಬಂದರುಗಳಲ್ಲಿ ನಿರ್ವಹಿಸಲಾಗುತ್ತಿದೆ. ಈಗ ಅದು 'ವಿಝಿಂಜಂ'ನಲ್ಲಿ ಸಾಧ್ಯವಾಗಲಿದೆ. ಕಂಟೈನರ್ ಒಳಗೆ ತುಂಬಲಾದ ಸರಕುಗಳನ್ನು ಸಣ್ಣ ಬಂದರುಗಳಿಂದ ದೊಡ್ಡ ಹಡಗುಗಳಿಗೆ, ಸಣ್ಣ ಹಡಗುಗಳ ಮೂಲಕ ಅಥವಾ ಭೂಮಿಯ ಮೂಲಕ ಸಾಗಿಸಬಹುದು. ಅಂತೆಯೇ, 'ವಿಝಿಂಜಂ' ಒಂದು ಸರಕು ವರ್ಗಾವಣೆ ಕೇಂದ್ರ (ಟ್ರಾನ್ಸ್‌ಶಿಪ್‌ಮೆಂಟ್ ಪಾಯಿಂಟ್) ಆಗಲಿದ್ದು, ಅಲ್ಲಿ ಸರಕುಗಳನ್ನು ದೊಡ್ಡ ಹಡಗುಗಳಿಂದ ಸಣ್ಣ ಹಡಗುಗಳಿಗೆ ವರ್ಗಾಯಿಸಲಾಗುತ್ತದೆ. ಇದರೊಂದಿಗೆ ಹೊರ ವರ್ತುಲ ರಸ್ತೆ, ಉಪಗ್ರಹ ನಗರ, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳು, ಶಿಕ್ಷಣ ಮತ್ತು ಆರೋಗ್ಯ ಗ್ರಾಮಗಳು, ಪ್ರವಾಸೋದ್ಯಮ ಕೇಂದ್ರಗಳು ಮತ್ತು ಇತರ ಹಲವು ಯೋಜನೆಗಳು ಇದರ ಭಾಗವಾಗಲಿವೆ. ತಿರುವನಂತಪುರಂ ಕೂಡ ಕೊಚ್ಚಿಯಂತೆ ವಾಣಿಜ್ಯ ನಗರಿಯಾಗಲಿದೆ. ಕೇರಳದ ಅಭಿವೃದ್ಧಿಯ ಸ್ವರೂಪವನ್ನೇ ಬದಲಿಸಬಹುದಾದ 'ವಿಝಿಂಜಂ' ಯೋಜನೆಯು ಎಲ್.ಡಿ.ಎಫ್. ಸರ್ಕಾರದ ಇಚ್ಛಾಶಕ್ತಿಯಿಂದಲೇ ನಿಜವಾಯಿತು ಎಂಬುದು ಇತಿಹಾಸದಲ್ಲಿ ದಾಖಲಾಗುತ್ತದೆ.

ಖಾಸಗಿ ವಲಯದ ಸಹಭಾಗಿತ್ವ

ಕೇರಳದ ತಿರುವನಂತಪುರದ ಹೊರವಲಯದಲ್ಲಿರುವ 'ವಿಝಿಂಜಂ' ಬಂದರಿನ ಅಭಿವೃದ್ಧಿ ಯೋಜನೆಯು ಖಾಸಗಿ ವಲಯದ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳ್ಳುತ್ತಿದೆ. ರೂ. 4,300 ಕೋಟಿ ಮೊತ್ತದ ಈ ಯೋಜನೆಯು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ ಮತ್ತು 30 ವರ್ಷಗಳ ಕಾಲಾವಧಿಗೆ 'ನಿರ್ಮಿಸು-ನಿರ್ವಹಿಸು-ವರ್ಗಾಯಿಸು'(ಬಿ.ಓ.ಟಿ) ಆಧಾರದ ಮೇಲೆ ನಿರ್ಮಿಸಲಾಗುವುದು. ಬಂದರಿಗೆ ಅಗತ್ಯ ಸಂಪರ್ಕಗಳು ಮತ್ತು ವಿದ್ಯುತ್, ನೀರು ಪೂರೈಕೆಯಂತಹ ಬಾಹ್ಯ ಬೆಂಬಲ ಮೂಲಸೌಕರ್ಯಗಳನ್ನು ಒದಗಿಸುವ ಪ್ರಮುಖ ಉದ್ದೇಶದೊಂದಿಗೆ ಕೇರಳ ಸರ್ಕಾರವು 'ವಿಝಿಂಜಂ ಇಂಟರ್ನ್ಯಾಷನಲ್ ಸೀಪೋರ್ಟ್ ಲಿಮಿಟೆಡ್'(VISL) ಎಂಬ ಹೆಸರಿನ ಸಂಪೂರ್ಣ ಸರ್ಕಾರಿ ಸ್ವಾಮ್ಯದ ಕಂಪನಿಯನ್ನು ಸಂಯೋಜಿಸಿದೆ.

ವಿಝಿಜಂನಲ್ಲಿರುವ 'ಬಂದರುಗಳು ಮತ್ತು ವಿಶೇಷ ಆರ್ಥಿಕ ವಲಯ ಲಿಮಿಟೆಡ್' (APSEZ), ಈ ಆಳ ಸಮುದ್ರದ ನೀರಿನ ಬಂದರನ್ನು ಭಾರತದ ಮೊದಲ 'ಬೃಹತ್ ಟ್ರಾನ್ಸ್‌ಶಿಪ್‌ಮೆಂಟ್ ಕಂಟೈನರ್ ಟರ್ಮಿನಲ್' ಆಗಿ ಅಭಿವೃದ್ಧಿಪಡಿಸುತ್ತಿದೆ. ವಿಝಿಂಜಂ ಬಂದರು ಕೇರಳ ಸರ್ಕಾರದ ಒಡೆತನದಲ್ಲಿದೆ. ಮತ್ತು 30 ವರ್ಷಗಳ ಕಾಲ 'ಬಿ.ಓ.ಟಿ.' ಆಧಾರದ ಮೇಲೆ ಅದಾನಿ ಗುಂಪಿನ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಭಾರತೀಯ ಉಪಖಂಡದ ಏಕೈಕ ಸರಕು ಕಂಟೈನರ್ ವರ್ಗಾವಣೆ ಕೇಂದ್ರ

ವಿಶ್ವ-ದರ್ಜೆಯ, ಭವಿಷ್ಯಕ್ಕೆ ಸಿದ್ಧವಾಗುತ್ತಿರುವ ಬಂದರು ಭಾರತೀಯ ಉಪಖಂಡದ ಏಕೈಕ 'ಟ್ರಾನ್ಸ್‌ಶಿಪ್‌ಮೆಂಟ್ ಹಬ್' ಆಗಿದೆ. ಇದು ಅಂತರರಾಷ್ಟ್ರೀಯ ಹಡಗು ಮಾರ್ಗಗಳಿಗೆ ಹತ್ತಿರದಲ್ಲಿದೆ ಮತ್ತು ಭಾರತದ ಕರಾವಳಿಯಲ್ಲಿ ಕೇಂದ್ರೀಕೃತವಾಗಿದೆ. 'ಮೆಗಾಮ್ಯಾಕ್ಸ್ ಕಂಟೈನರ್‌ಶಿಪ್'ಗಳನ್ನು ಅಂದರೆ ದೈತ್ಯ ಸರಕು ಕಂಟೈನರ್‌ಗಳ ವರ್ಗಾವಣೆಯನ್ನು ನಿರ್ವಹಿಸಲು ಅತ್ಯಾಧುನಿಕ ಮೂಲಸೌಕರ್ಯದೊಂದಿಗೆ ಹಡಗುಗಳ ತ್ವರಿತ ತಿರುಗುವಿಕೆಗಾಗಿ ವಿಝಿಂಜಮ್ ಬಂದರು ದೊಡ್ಡ ಪ್ರಮಾಣದ ಸ್ವಯಂಚಾಲಿತತೆಯನ್ನು ನೀಡುತ್ತದೆ.

'ವಿಝಿಂಜಂ ಪೋರ್ಟ್ ಲಿಮಿಟೆಡ್'ನ ಮೊದಲ ಹಂತವು ಮೇ 2024 ರೊಳಗೆ ಪೂರ್ಣಗೊಳ್ಳಲು ಸಿದ್ಧವಾಗಿದೆ. ಹಂತ 1 ರಲ್ಲಿ ಇದರ ಸಾಮರ್ಥ್ಯವು ಮೊದಲ ಹಂತದಲ್ಲಿ 6,00,000 TEU- (Twenty Foot equivalent Unit–ಸರಕಿನ ಪ್ರಮಾಣದ ಅಳತೆ ಇಪ್ಪತ್ತು ಅಡಿ ಅಳತೆಗೆ ಸಮನಾದದ್ದು.) ಪ್ರಮಾಣದಿಂದ 30 ಲಕ್ಷ TEU ಗಳವರೆಗೆ ಸೇರಿಸಲು ಯೋಜಿಸಲಾಗಿದೆ. ಬಂದರು ಮೇ ಮತ್ತು ಡಿಸೆಂಬರ್ 2024 ರ ನಡುವೆ ವಾಣಿಜ್ಯ ಬಳಕೆಗಾಗಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.

68 ನೇ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಒಂದು ಅವಲೋಕನ

ಶಿಕ್ಷಣ ಮಾಧ್ಯಮ: ಕನ್ನಡ, ಪ್ರಜಾಪ್ರಭುತ್ವದ ಅಳಿವು–ಉಳಿವಿನ ಪ್ರಶ್ನೆ



ಕರ್ನಾಟಕ ಏಕೀಕರಣದ ಅರವತ್ತೆಂಟನೇ ವಾರ್ಷಿಕೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಕನ್ನಡ ಭಾಷೆಯ ಅಳಿವು–ಉಳಿವಿನ ಪ್ರಶ್ನೆಗೆ ನೇರವಾಗಿ ಸಂಬಂಧಿಸಿದ ಒಂದು ನಿರ್ಣಾಯಕ ಪ್ರಶ್ನೆಯಾದ 'ಶಾಲಾ ಶಿಕ್ಷಣ ಮಾಧ್ಯಮ'ದ ಸ್ಥಿತಿಗತಿಯ ಕುರಿತು ಒಂದು ಪರಿಶೀಲನೆ ನಡೆಸುವ ಪ್ರಯತ್ನ ಇದು. ಇಂಗ್ಲೀಷ್ ಮಾಧ್ಯಮ ಎಂಬುದು ಕನ್ನಡ ಮಾಧ್ಯಮವನ್ನು ಹೇಗೆ ತಳದಿಂದ ಇಡಿ, ಇಡಿಯಾಗಿ ನುಂಗುತ್ತಾ ಬರುತ್ತಿದೆ ಎಂಬ ಆತಂಕಕಾರಿ ಚಿತ್ರಣ ಇಲ್ಲಿದೆ.

ಆರ್. ರಾಮಕೃಷ್ಣ

ಮುಂಬೈ, ಹೈದರಾಬಾದ್, ಮದ್ರಾಸ್, ಮೈಸೂರು ಮುಂತಾದ ವಿವಿಧ ಪ್ರಾಂತಗಳಲ್ಲಿ ಹಂಚಿ ಹೋಗಿದ್ದ, ಪ್ರಧಾನವಾಗಿ ಕನ್ನಡ ಮಾತನಾಡುವ ನಾನಾ ಪ್ರದೇಶಗಳು ಒಂದುಗೂಡಿ ಏಕೀಕೃತಗೊಂಡ ಒಂದು ರಾಜ್ಯವು ಉದಿಸಿ ಈ ನವೆಂಬರ್ ಒಂದಕ್ಕೆ 68 ವರ್ಷಗಳು ತುಂಬುತ್ತವೆ. ಇಂತಹ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ಉದ್ದೇಶ–ಒಂದುಗೂಡುವುದರ ಹಿಂದಿದ್ದ ಆಶೋತ್ತರಗಳು ಎಷ್ಟರ ಮಟ್ಟಿಗೆ ಈಡೇರಿವೆ ಅಥವಾ ಈ ಆಶೋತ್ತರಗಳು ಈಡೇರುವ ದಾರಿಯಲ್ಲಿ ನಾವು ಹಂತ ಹಂತವಾಗಿಯಾದರೂ ನಡೆಯುತ್ತಿದ್ದೇವಾ ಎಂದು ಪರಿಶೀಲಿಸಿಕೊಳ್ಳಬೇಕಾದ ತುರ್ತು ಅಗತ್ಯ ಇದೆ.

ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ್, ಒರಿಸ್ಸಾ, ಬಂಗಾಳ, ಅಸ್ಸಾಂ, (ಹಿಂದಿನ ಅವಿಭಜಿತ ಆಂಧ್ರ ಪ್ರದೇಶ) ಹೀಗೆ ಭಾರತವು ಪ್ರಧಾನವಾಗಿ ವಿವಿಧ ಭಾಷಾವಾರು ರಾಜ್ಯಗಳ ಒಂದು ವಿಶಾಲವಾದ ಒಕ್ಕೂಟ. ಕೆಲವು ಅಪವಾದಗಳಿದ್ದರೂ ರಾಜ್ಯಗಳು ಇಲ್ಲಿ ಪ್ರಮುಖವಾಗಿ ಭಾಷೆಗಳ ಆಧಾರದಲ್ಲಿ ಒಂದೊಂದು ಘಟಕವಾಗಿ ರೂಪುಗೊಂಡಿವೆ. ಒಂದು ಭಾಷೆಯನ್ನು ಆಡುವ ಮತ್ತು ಒಂದು ಭಾಷೆಯನ್ನು ಬಲ್ಲ ಜನರು ಒಂದು ಘಟಕದಲ್ಲಿ ಒಂದುಗೂಡಿದ್ದರೆ, ಆ ಜನ ಸಮುದಾಯದ ಸಾಂಸ್ಕೃತಿಕ–ಸಾಮಾಜಿಕ ವಿಕಾಸಕ್ಕೆ ಮತ್ತು ಆರ್ಥಿಕ ಪ್ರಗತಿಗೆ ಅದು ಪೂರಕವಾಗಿರುತ್ತದೆ, ಆಡಳಿತ ಸರಾಗವಾಗಿರುತ್ತದೆ ಎಂದು ಸರಿಯಾಗಿಯೇ ಭಾವಿಸಲಾಗಿತ್ತು.

ಜಗತ್ತಿನ ಯಾವುದೇ ಒಂದು ಭಾಷೆಯು ಬರಿಯ ವಿಚಾರ–ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಭಾವನೆ–ಮಾಹಿತಿ ತಿಳಿಸುವ ಮಾಧ್ಯಮ ಮಾತ್ರವಲ್ಲ. ಅದು ಒಂದು ಜೀವಂತ ಸಂಸ್ಕೃತಿಯ ವಾಹಕವೂ ಆಗಿರುತ್ತದೆ. ಭಾಷೆ ಯಾವುದೇ ಸಮಾಜದ ಒಂದು ವಿಶೇಷ ಅಸ್ಮಿತೆ. ಭಾಷೆ ಎಂದಾಗ ಅದರ ಜೊತೆಗೆ ಕೇವಲ ಭಾವನಾತ್ಮಕ ಕಾರಣಗಳು ಮಾತ್ರ ಇಲ್ಲ. ಭಾಷಾವಾರು ರಾಜ್ಯಗಳ ರಚನೆಯ ಹಿಂದೆ ಒಂದು ವೈಜ್ಞಾನಿಕ ತರ್ಕ ಮತ್ತು ಪ್ರಜಾಪ್ರಭುತ್ವದ ತತ್ವಗಳ ತಳಹದಿಯೂ ಇದೆ. ಜನಸಾಮಾನ್ಯರ ಭಾಷೆಯಲ್ಲಿ ಆಡಳಿತ ಇದ್ದರೆ ಜನರಿಗೆ ಅನುಕೂಲ. ಕರ್ನಾಟಕದಲ್ಲಿರುವ ಸರಕಾರಿ ಕಚೇರಿಗಳಲ್ಲಿ, ಬ್ಯಾಂಕುಗಳು, ಅಂಚೆ ಕಚೇರಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟೂ ಕನ್ನಡದಲ್ಲಿ ಆಡಳಿತ ಇರಬೇಕು ಮತ್ತು ಸಾರ್ವಜನಿಕರಿಗೆ ಕನ್ನಡ ಭಾಷೆಯಲ್ಲಿ ವ್ಯವಹರಿಸಲು ಸಂಪೂರ್ಣವಾದ ಅವಕಾಶ ಇರಬೇಕು. ಆಗ ಮಾತ್ರ ಪ್ರಜ್ಞಾಪ್ರಭುತ್ವ ವ್ಯವಸ್ಥೆ ಎಂಬುದಕ್ಕೆ ಅರ್ಥ ಬರುತ್ತದೆ. ಎಷ್ಟೇ ಶ್ರೇಷ್ಠ ಎಂದು ಯಾರು ಎಷ್ಟೇ ವಾದಿಸಿದರೂ ಭಾರತದಲ್ಲಿ ಸಂಸ್ಕೃತ ಭಾಷೆಯನ್ನು ಆಡಳಿತ ಭಾಷೆ ಮಾಡಲಾಗದು. ಜನರಿಗೆ ಅರ್ಥವಾಗದ ಯಾವುದೇ ಭಾಷೆಯಲ್ಲಿ ಆಡಳಿತ ಎಂದರೆ ಅದು ಹೇರಿಕೆಯಾಗುತ್ತದೆ. ಅಲ್ಲಿ ಪ್ರಜಾಪ್ರಭುತ್ವದ ಮೂಲ ತತ್ವ ಉಲ್ಲಂಘನೆಯಾಗುತ್ತದೆ.


ತಾಯಿ ನುಡಿಯಲ್ಲಿ ಶಿಕ್ಷಣ

ಇನ್ನು ಶಿಕ್ಷಣದ ವಿಷಯಕ್ಕೆ ಬಂದಾಗ, ಎಲ್ಲ ಹಂತಗಳಲ್ಲೂ ಮಗುವಿಗೆ ತನ್ನ ತಾಯಿ ನುಡಿಯಲ್ಲಿ ಶಿಕ್ಷಣ ದೊರಕಬೇಕು. (ಅದು ಅತಿ ಕಡಿಮೆ ಜನರು ಮಾತನಾಡುವ ಭಾಷೆಯ ಕುಟುಂಬದ ಮಗುವಾದಲ್ಲಿ, ಆಗ ಪರಿಸರದ ನುಡಿಯಲ್ಲಿ ಶಿಕ್ಷಣ ದೊರಕಬೇಕು.) ಈ ಆಶಯದ ಹಿಂದೆ ಒಂದು ವೈಜ್ಞಾನಿಕ ತತ್ವ ಇದೆ. ತನ್ನ ಮನೆಯಲ್ಲಿ ಅಥವಾ ಪರಿಸರದಲ್ಲಿ ಪ್ರಚಲಿತದಲ್ಲಿರುವ ಭಾಷೆಯಲ್ಲಿ ಮಗುವು ಯಾವುದೇ ವಿಚಾರವನ್ನು ಕಲಿತಾಗ ಅದು ಮಗುವಿಗೆ ಸುಲಭವಾಗಿ ಅರ್ಥವಾಗುತ್ತದೆ ಮತ್ತು ಚೆನ್ನಾಗಿ ಮನದಟ್ಟಾಗುತ್ತದೆ.

ಕಳಿತ ಬಾಳೆಹಣ್ಣು..

ಒಂದು ಸಾಮಾನ್ಯ ಕುಟುಂಬದ ಮಗುವು ಹಣಕಾಸು ಲೆಕ್ಕಾಚಾರಗಳನ್ನು ರೂಪಾಯಿಗಳ ಲೆಕ್ಕದಲ್ಲಿ ಕಲಿತಿದೆ ಎಂದು ಭಾವಿಸೋಣ. ಅದೇ ಮಗುವಿಗೆ ನಾವು ಅಮೆರಿಕನ್ ಡಾಲರ್ ಮೌಲ್ಯದಲ್ಲಿ ಹಣದ ಮೊತ್ತವನ್ನು ಹೇಳಿದಾಗ ಆ ಮಗು ಹಣದ ಮೊತ್ತವನ್ನು ಡಾಲರ್ ಮೌಲ್ಯದ ಆಧಾರದಲ್ಲಿ ರೂಪಾಯಿಗೆ ಪರಿವರ್ತಿಸಿಕೊಂಡು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದಷ್ಟು ಸಮಯ ಬೇಕಾಗುತ್ತದೆ ಮತ್ತು ಮಿದುಳಿನಲ್ಲಿ ಒಂದಷ್ಟು ಲೆಕ್ಕಾಚಾರದ ಕಸರತ್ತುಗಳು ನಡೆಯಬೇಕಾಗುತ್ತದೆ. ಹಾಗೆಯೆ ಕರ್ನಾಟಕದಲ್ಲಿ ಕನ್ನಡ ಭಾಷೆಯ ಪರಿಸರದಲ್ಲಿ ಬಾಳುತ್ತಿರುವ ಮಗುವಿಗೆ, ವಿಷಯವನ್ನು ಕನ್ನಡ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವುದನ್ನು ಕಲಿತ ಮಗುವಿಗೆ ಇಂಗ್ಲೀಷ್ ಭಾಷೆಯಲ್ಲಿ ಏನನ್ನಾದರೂ ಹೇಳಿದಾಗ ಮಗುವಿನ ಮೆದುಳು ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಿಕೊಂಡು ಮನನ ಮಾಡಿಕೊಳ್ಳಬೇಕಾಗುತ್ತದೆ.

ಚೆನ್ನಾಗಿ ಕಳಿತ ಬಾಳೆಹಣ್ಣನ್ನು ಸುಲಭವಾಗಿ ಸಿಪ್ಪೆ ಸುಲಿದು ತಿನ್ನುವುದಕ್ಕೂ ಹಾಗೂ ಹಲಸಿನ ಹಣ್ಣನ್ನು ಅದರ ಸಿಪ್ಪೆ ತೆಗೆದು ತಿನ್ನುವುದಕ್ಕೂ ವ್ಯತ್ಯಾಸವಿದೆಯಲ್ಲವೇ ಹಾಗೆ. ಹೀಗಾಗಿ ತನ್ನ ಕುಟುಂಬದಲ್ಲಿ ಇಲ್ಲದ, ತನ್ನ ಪರಿಸರದಲ್ಲಿಲ್ಲದ ಒಂದು ಭಾಷೆಯಲ್ಲಿ ವಿಚಾರಗಳನ್ನು ಕಲಿಯಬೇಕಾದ ಮಗುವು ಕಲಿಕೆಯಲ್ಲಿ ಸಹಜವಾಗಿಯೇ ಹಿಂದುಳಿಯುತ್ತದೆ. ಇಂತಹ ಕಾರಣಕ್ಕಾಗಿ ಕರ್ನಾಟಕದಲ್ಲಿ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ಇರಬೇಕು (ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಸಾಧ್ಯತೆ ಇರುವ ಕಡೆ ಉರ್ದು, ತೆಲುಗು, ತಮಿಳು, ತೆಲುಗು ಮುಂತಾದ ತಾಯಿನುಡಿಗಳಲ್ಲಿ ಸಹ ಇರಬೇಕು.)ಎಂದು ಕೇಳುವುದು ಒಂದು ವೈಜ್ಞಾನಿಕವಾದ ಮತ್ತು ಜನಪರವಾದ ಹಾಗೂ ಪ್ರಜ್ಞಾಸತ್ತಾತ್ಮಕವಾದ ಬೇಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಕನ್ನಡದಂತಹ ಯಾವುದೇ ಭಾಷೆಯ ಉಳಿವು ಬೆಳವಣಿಗೆ ಒಟ್ಟು ಸಮಾಜದ ಪ್ರಗತಿ ದೃಷ್ಟಿಯಿಂದ, ಆರೋಗ್ಯಕರ ಪ್ರಜಾಪ್ರಭುತ್ವದ ದೃಷ್ಟಿಯಿಂದ ಬಹಳ ಮಹತ್ವದ್ದಾಗುತ್ತದೆ.



"ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ, ಕೊಲೆಗೈದರಮ್ಮನನೆ ಕೊಲಿಸಿದಂತೆ".

ಆದರೆ ಭಾರತದಲ್ಲಿ ಕನ್ನಡ ಮತ್ತು ಕನ್ನಡದಂತಹ ಜನ ಭಾಷೆಗಳಿಗೆ, ಈ ಭಾಷೆಗಳ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಕಷ್ಟ ಎನ್ನುವಂತಹ ಬಹಳ ಗಂಭೀರ ಅಪಾಯಗಳು ಎದುರಾಗುತ್ತಿವೆ. ಈ ಬೆಳವಣಿಗೆ ಎಷ್ಟೆಲ್ಲಾ ಕಣ್ಣು ಕುಕ್ಕುವಂತೆ ಕಾಣುತ್ತಿದ್ದರೂ ಈ ವಿಷಯದಲ್ಲಿ ನಮ್ಮ ಸಮಾಜದಲ್ಲಿ ಎಚ್ಚರ ಮತ್ತು ಜಾಗೃತಿ, ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಪ್ರಯತ್ನಗಳು ಕಾಣದಿರುವುದು ಆಶ್ಚರ್ಯಕರವೂ ಆಘಾತಕರವೂ ಆಗಿದೆ.

ಶಾಲಾ ಶಿಕ್ಷಣವನ್ನು ಮಗುವಿನ ತಾಯಿ ನುಡಿಯಲ್ಲಿ ಅಥವಾ ಪರಿಸರದ ಭಾಷೆಯಲ್ಲಿ ಕೊಡುವುದು ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾದ ಒಂದು ಅಂಶ. ಈ ವಿಷಯದಲ್ಲಿ ಏನಾಗುತ್ತಿದೆ ಎಂದು ಕೆಲವು ನಿರ್ದಿಷ್ಟ ಉದಾಹರಣೆಗಳೊಂದಿಗೆ ಪರಿಶೀಲಿಸೋಣ.

ಈ ಕನ್ನಡ ಶಾಲೆಗೆ ಒಂದು ಮಗುವೂ ಸೇರಲಿಲ್ಲ

ಕರ್ನಾಟಕದ ದಕ್ಷಿಣದ ತುದಿ ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ, ಎಂಟು ಜನ ಶಿಕ್ಷಕರಿರುವ ಹಳೇ ಮಾರಟಳ್ಳಿಯ ಕನ್ನಡ ಮಾಧ್ಯಮದ ಸರಕಾರಿ ಪ್ರಾಥಮಿಕ ಶಾಲೆಗೆ 2023–24 ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿಗೆ ಒಂದೇ ಒಂದು ಮಗುವೂ ಸಹ ದಾಖಲಾಗಲಿಲ್ಲ. ಈ ಶಾಲೆಗೆ ಒಂದನೇ ತರಗತಿಗೆ 30 ಮಕ್ಕಳನ್ನು ಸೇರಿಸಿಕೊಳ್ಳುವ ಅವಕಾಶ ಇತ್ತು. ಮೂರು ವರ್ಷಗಳ ಹಿಂದೆ ಇಲ್ಲಿ ಸರಕಾರದ್ದೇ ಇಂಗ್ಲೀಷ್ ಮಾಧ್ಯಮ ಶಾಲೆ ಆರಂಭ ಆಗಿದೆ. ಮೂರೇ ಮೂರು ವರ್ಷಗಳಲ್ಲಿ ಕನ್ನಡ ಮಾಧ್ಯಮ ವಿಭಾಗವನ್ನೇ ಮುಚ್ಚಬೇಕಾದ ಪರಿಸ್ಥಿತಿ ಬರುತ್ತಿದೆ. ಈಗ ಅಲ್ಲಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಒಂದನೇ ತರಗತಿಗಿಂತ ಮೇಲಿನ ತರಗತಿಗಳಲ್ಲಿ ಓದುತ್ತಿರುವವರು ಎಂದರೆ, ಸುತ್ತ ಮುತ್ತಲ ದೊಡ್ಡಾಣೆ, ತೋಕೆರೆ ಮುಂತಾದ ಗುಡ್ಡಗಾಡು ಪ್ರದೇಶದ ಗ್ರಾಮಗಳಿಂದ ಬರುವ ಮಕ್ಕಳು ಮಾತ್ರ. ಈ ಕನ್ನಡ ಮಾಧ್ಯಮದಲ್ಲಿ 7–8 ನೇ ತರಗತಿಯವರೆಗೆ ಓದಿದರೂ ಸಹ ಮುಂದೆ ಆ ಮಕ್ಕಳಲ್ಲಿಯೂ ಹೆಚ್ಚಿನವರು ಪ್ರೌಢಶಾಲೆಗೆ ಖಾಸಗಿ ಶಾಲೆಯ ಇಂಗ್ಲೀಷ್ ಮಾಧ್ಯಮಕ್ಕೆ ಹೋಗುತ್ತಾರೆ. ಅಂದರೆ ಒಟ್ಟಾರೆ ಎಲ್ಲ ಹಂತಗಳಲ್ಲಿ ಸರಕಾರಿ ಶಾಲೆಗಳು ಮತ್ತು ಕನ್ನಡ ಮಾಧ್ಯಮದ ಶಾಲೆಗಳಿಗೆ ಧಕ್ಕೆ ಬರುತ್ತಿದೆ ಎನ್ನುವುದು ಇಲ್ಲಿ ಎದ್ದು ಕಾಣುತ್ತದೆ.

ಕೋಲಾರ–ವಿದ್ಯಾರ್ಥಿ ಕೊರತೆ ಎಷ್ಟೆಂದರೆ ಮುಖ್ಯ ಶಿಕ್ಷಕರೇ ಇಲ್ಲ

ಕೋಲಾರ ಜಿಲ್ಲೆ ಕೋಲಾರ ತಾಲ್ಲೂಕಿನ ಐತರಹಳ್ಳಿ ಕ್ಲಸ್ಟರ್‌ನಲ್ಲಿ ವಿಚಾರಿಸಿದಾಗಲೂ ಕೆಲವು ಶಿಕ್ಷಕರ ವೈಯುಕ್ತಿಕವಾದ ವಿಶೇಷ ಪ್ರಯತ್ನಗಳಿಂದ ಕನ್ನಡ ಮಾಧ್ಯಮಕ್ಕೆ ಸರಕಾರಿ ಶಾಲೆಗೆ ಸೇರುತ್ತಿರುವುದು ಬಿಟ್ಟರೆ, ಎಲ್ಲ ಕಡೆ ಗಣನೀಯವಾಗಿ ವಿದ್ಯಾರ್ಥಿಗಳ ಸಂಖ್ಯೆ ಕುಸಿತ ಆಗುತ್ತಿರುವ ಚಿತ್ರಣವೇ ಸಿಗುತ್ತದೆ. ಯಾವುದೇ ಸರಕಾರಿ ಶಾಲೆಗೆ 60 ಕ್ಕಿಂತ ಹೆಚ್ಚಿನ ಮಕ್ಕಳು ಇದ್ದರೆ ಮಾತ್ರವೇ ಸರಕಾರ ಆ ಶಾಲೆಗೆ ಮುಖ್ಯ ಶಿಕ್ಷಕರನ್ನು ಕೊಡುವುದು. ಇಲ್ಲವಾದರೆ ಇರುವ ಸಹ ಶಿಕ್ಷಕರಲ್ಲೆ ಒಬ್ಬರು ಮುಖ್ಯ ಶಿಕ್ಷಕರ ಜವಾಬ್ದಾರಿ ಹೊರಬೇಕಾಗುತ್ತದೆ. (ಇರುವ ಶಿಕ್ಷಕರಲ್ಲೇ ಒಬ್ಬ ಶಿಕ್ಷಕರು ಆಡಳಿತಾತ್ಮಕ ಕೆಲಸಗಳಿಗೆ ನಿಗದಿಯಾದರೆ, ಪಾಠ ಮಾಡಲು ಒಬ್ಬರು ಕಡಿಮೆಯಾಗುತ್ತಾರೆ.) ಈ ಕ್ಲಸ್ಟರ್(ಶಾಲೆಗಳ ಗುಂಪು)ನ 11 ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಯಾವ ಶಾಲೆಗೂ ಸರಕಾರ ಮುಖ್ಯ ಶಿಕ್ಷಕರನ್ನು ಕೊಟ್ಟಿಲ್ಲ. ಏಕೆಂದರೆ ಈ ಎಲ್ಲ ಶಾಲೆಗಳಲ್ಲಿಯೂ ದಿನೇ ದಿನೇ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ, ಕಡಿಮೆಯಾಗುತ್ತಿದೆ.

ಬೀದರ್–ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಂಖ್ಯೆ ಕುಸಿತ

ಕರ್ನಾಟಕದ ಉತ್ತರದ ತುತ್ತ ತುದಿಯ ಬೀದರ್ ಜಿಲ್ಲೆಯ ಹಳೆಯ ಹುಮ್ನಾಬಾದ್(ಈಗ ಚಿಟಗುಪ್ಪ ತಾ.) ತಾಲ್ಲೂಕಿನ ಚಾಂಗ್ಲೇರಾ ಪಂಚಾಯತ್ ವ್ಯಾಪ್ತಿಯ ಕನ್ನಡ ಮಾಧ್ಯಮದ ಸರಕಾರಿ ಪ್ರೌಢಶಾಲೆಯಲ್ಲಿಯು ಇದೇ ರೀತಿಯ ಪ್ರವೃತ್ತಿ ಕಂಡು ಬರುತ್ತಿದೆ. ಕಳೆದ ವರ್ಷ 350 ಮಕ್ಕಳು ಸೇರಿದ್ದ ಸರಕಾರಿ ಶಾಲೆಗೆ ಈ ವರ್ಷ 321 ಮಕ್ಕಳು ಮಾತ್ರ ಸೇರಿದ್ದಾರೆ. ಅಂದರೆ 29 ಮಕ್ಕಳು ಕಡಿಮೆಯಾಗಿದ್ದಾರೆ. ವಿದ್ಯಾರ್ಥಿಗಳ ಹರಿವು ಇಂಗ್ಲೀಷ್ ಮಾಧ್ಯಮದ ಕಡೆಗಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಕರಾವಳಿಯಲ್ಲಿಯೂ 'ಇಂಗ್ಲೀಷ್ ಮಾಧ್ಯಮ'ದ ಹಾವಳಿ

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡದ

ವಿಟ್ಲದಲ್ಲಿರುವ ಇಂಗ್ಲೀಷ್ ಮಾಧ್ಯಮದ ಸರಕಾರಿ ಶಾಲೆಯೊಂದನ್ನು ಉದಾಹರಣೆಗಾಗಿ ನೋಡುವುದಾದರೆ, ಸು. 15–20 ಕಿ.ಮಿ. ಗಳಿಂದಲೂ ಈ ಶಾಲೆಗೆ ಮಕ್ಕಳು ಬರುತ್ತಾರೆ. ಆ ಶಾಲೆಯಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ ಸು. 1,500 ಇದೆ, ಇದೇ ಕಾರಣಕ್ಕಾಗಿ ಸುತ್ತಮುತ್ತಲ ಕನ್ನಡ ಮಾಧ್ಯಮದ ಶಾಲೆಗಳು ಅಗತ್ಯ ಸಂಖ್ಯೆಯ ವಿದ್ಯಾರ್ಥಿಗಳಿಲ್ಲದೇ ಸೊರಗುತ್ತಿವೆ ಎನ್ನುವ ಮಾಹಿತಿ ಕೊಡುತ್ತಾರೆ ಸ್ಥಳೀಯರು.

ನವೋದಯ ಶಾಲೆ, ರಾಣಿ ಚೆನ್ನಮ್ಮ, ಮುರಾರ್ಜಿ, ಏಕಲವ್ಯ ಮುಂತಾದ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುವ ವಸತಿ ಶಾಲೆಗಳು ಸಹ ಕನ್ನಡ ಮಾಧ್ಯಮದ ಸರಕಾರಿ ಶಾಲೆಯಿಂದ ಮಕ್ಕಳನ್ನು ಸಾಕಷ್ಟು ಸೆಳೆಯುತ್ತಿರುವುದು ಕಂಡು ಬರುತ್ತದೆ.

'ಇಂಗೀಲಿಷ್ ವ್ಯಾಮೋಹ' ಮಾತ್ರವಲ್ಲ

ಕನ್ನಡ ಮಾಧ್ಯಮದ ಶಾಲೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆ ಆಗುತ್ತಿರುವುದು, ಕೇವಲ ಇಂಗ್ಲೀಷ್ ಮಾಧ್ಯಮ ಮತ್ತು ಇಂಗ್ಲೀಷ್ ಭಾಷೆಯ ಬಗೆಗಿನ ವ್ಯಾಮೋಹದಿಂದಲ್ಲ. ಇದು ಬಹಳ ಸಂಕೀರ್ಣವಾದ ಸಮಸ್ಯೆ. ಸರಕಾರಿ ಶಾಲೆಗಳಿಂದ ಮಕ್ಕಳು ಇಂಗ್ಲೀಷ್ ಮಾಧ್ಯಮದ ಶಾಲೆಗಳ ಕಡೆಗೆ ಪೋಷಕರು ವಲಸೆ ಹೋಗಲು ಬಹುಮುಖ್ಯವಾದ ಒಂದು ಕಾರಣ, ಸರಕಾರಿ ಶಾಲೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರು ಇಲ್ಲದಿರುವುದು. ಪ್ರಾಥಮಿಕ ಹಂತದಲ್ಲಿ ಖಾಸಗಿ ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ಕನಿಷ್ಠ ತರಗತಿಗೆ ಒಬ್ಬರು ಶಿಕ್ಷಕರು ಇರುತ್ತಾರೆ, ಆ ನಂತರದ ಹಂತದಲ್ಲಿ ಕನಿಷ್ಠ ವಿಷಯಕ್ಕೊಬ್ಬರು ಶಿಕ್ಷಕರು ಇರುತ್ತಾರೆಂದು ಕಾಣುವ ಖಾಸಗಿ ಶಾಲೆಯ ಚಿತ್ರಣ. ಪೋಷಕರು ಈ ಶಾಲೆಗಳಲ್ಲಿ ತಮ್ಮ ಮಗುವಿಗೆ ಶಿಕ್ಷಕರು ವೈಯುಕ್ತಿಕ ಗಮನ ಕೊಡಲು ಸಾಧ್ಯವಾಗುತ್ತದೆ ಎಂದು ಸಹಜವಾಗಿಯೇ ಭಾವಿಸುತ್ತಾರೆ. ಸರಕಾರಿ ಶಾಲೆಗಳಲ್ಲಿ ಮೂರು ನಾಲ್ಕು ತರಗತಿಗಳನ್ನು ಒಬ್ಬರೇ ಶಿಕ್ಷಕರು ನೋಡಿಕೊಳ್ಳಬೇಕಾದ ಗಂಭೀರ ಸವಾಲು ಶಿಕ್ಷಕರ ಮೇಲಿರುವಾಗ ಪೋಷಕರಿಗೆ ಆ ಶಾಲೆಗೆ ಕಳಿಸಲು ಖಂಡಿತ ಧೈರ್ಯ ಬರುವುದಿಲ್ಲ. ಕೆಲವೆಡೆ ಖಾಸಗಿ ಶಾಲೆಯಲ್ಲೇ ಕನ್ನಡ ಮಾಧ್ಯಮದ ವಿಭಾಗ ಅಗತ್ಯ ಶಿಕ್ಷಕರೊಂದಿಗೆ ಉತ್ತಮವಾಗಿ ಸಜ್ಜುಗೊಂಡಿದ್ದರೆ ಅಲ್ಲಿಗೆ ಗಣನೀಯ ಸಂಖ್ಯೆಯ ವಿದ್ಯಾರ್ಥಿಗಳು ಸೇರಿರುವ ಉದಾಹರಣೆಗಳೂ ಇವೆ.

ವಿದ್ಯಾರ್ಥಿ ಶಿಕ್ಷಕರ ನಡುವೆ ಇರಬೇಕಾದ ವೈಜ್ಞಾನಿಕ ಅನುಪಾತ, ಕನಿಷ್ಠ ವಿಷಯಕ್ಕೊಬ್ಬರು ಶಿಕ್ಷಕರು ಎಂಬ ಅಗತ್ಯವನ್ನು ಲೆಕ್ಕಕ್ಕೆ ತೆಗೆದುಕೊಂಡು ಯೋಚಿಸಿದರೆ, ಸರಕಾರಿ ಶಾಲೆಗಳಲ್ಲಿ ಖಾಲಿ ಇರುವ ಲಕ್ಷಾಂತರ ಶಿಕ್ಷಕ ಹುದ್ದೆಗಳನ್ನು ತುಂಬಬೇಕಾದ ಅಗತ್ಯವಿದೆ. ಆದರೆ ಸರಕಾರಗಳು ಈ ಬಗೆಗೆ ಅಗತ್ಯ ಗಮನ ನೀಡುತ್ತಿಲ್ಲ. ಪ್ರತಿ ವರ್ಷವೂ ಸುಮಾರು 3,000 ಶಿಕ್ಷಕರು ನಿವೃತ್ತರಾಗುತ್ತಾರೆ. ಎಷ್ಟೋ ಜನ ಶಿಕ್ಷಕರು ಇರುವ ಕಡೆಯಿಂದ ಬೇರೆ ಶಾಲೆಗೆ ವರ್ಗಾವಣೆ ಆಗಿ ಹೋಗುತ್ತಾರೆ. ಹೀಗೆ ಶಾಲೆಯಲ್ಲಿ ಖಾಲಿಯಾಗುವ ಹುದ್ದೆಗಳಿಗೂ ಸಹ ಅಗತ್ಯ ನೇಮಕಾತಿಗಳನ್ನು ಮಾಡದೇ ಸರಕಾರವು ವರ್ಷಗಟ್ಟಲೆ ವಿಳಂಬ ಮಾಡುತ್ತಿರುವುದರಿಂದ ಸರಕಾರಿ ಶಾಲೆಗಳು ಪೋಷಕರ ವಿಶ್ವಾಸವನ್ನು ಕಳೆದುಕೊಂಡು ಒಟ್ಟು ಶಿಕ್ಷಣ ಕ್ಷೇತ್ರವೇ ಸೊರಗುವಂತಾಗಿದೆ. ಈ ವಿಷಯದಲ್ಲಿ ಕನ್ನಡ ಭಾಷೆಯ ಉಳಿವಿನ ಪ್ರಶ್ನೆಯು ಶಿಕ್ಷಣದ ಗುಣಮಟ್ಟದೊಂದಿಗೆ ತಳುಕು ಹಾಕಿಕೊಂಡಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಅನ್ನದ ಭಾಷೆ ಮತ್ತು
ಉನ್ನತ ಶಿಕ್ಷಣದಲ್ಲಿನ ಮಾಧ್ಯಮದ ಪ್ರಶ್ನೆ

ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗೆ ಸೇರಿಸಿದ ಪೋಷಕರೆಲ್ಲರೂ ಕನ್ನಡ ಭಾಷೆಗೆ ವಿರುದ್ಧ ಇದ್ದಾರೆಂದು ಅರ್ಥವಲ್ಲ. ತಮ್ಮ ಮಗುವಿಗೆ ಉತ್ತಮ ಭವಿಷ್ಯ ರೂಪಿಸಲು ಪೂರಕವಾದ ರೀತಿಯ ಶಿಕ್ಷಣ ಕೊಡಿಸಲು ಪ್ರಯತ್ನಿಸುವುದು


ಶಿಕ್ಷಕರ ಕೊರತೆ, ಖಾಸಗಿ ಶಾಲೆ ಸೆಳೆತದ ಫಲ
ಸರಕಾರಿ ಸ್ಕೂಲ್ ಮಕ್ಕಳ ದಾಖಲಾತಿ ಕುಸಿತ
567 ಶಾಲೆ ಬಂದ್
ಸರಕಾರಿ ಶಾಲೆಗಳ ಚಿತ್ರಣ
• ಸರಕಾರಿ ಶಾಲೆಗಳು 47,449
• ವಿದ್ಯಾರ್ಥಿಗಳ ಸಂಖ್ಯೆ 42,66,645
• ಶಿಕ್ಷಕರ ಸಂಖ್ಯೆ 1,73,647

ತೀರಾ ಸಹಜ. ಕನ್ನಡ ಮಾಧ್ಯಮದಲ್ಲಿಯೇ ತಾಂತ್ರಿಕ–ವಿಜ್ಞಾನ–ವಾಣಿಜ್ಯ ಇತ್ಯಾದಿ ಉನ್ನತ ಶಿಕ್ಷಣವನ್ನು ಕಲಿಯುವ ಉತ್ತಮ ಅವಕಾಶಗಳಿದ್ದು, ಶಿಕ್ಷಣ ಪಡೆದ ಮೇಲೆ ಅದರಿಂದಲೇ ಉತ್ತಮ ಉದ್ಯೋಗ ಗಳಿಸಿಕೊಳ್ಳುವುದು ಮತ್ತು ಉತ್ತಮ ಜೀವನವನ್ನು ರೂಪಿಸಿಕೊಳ್ಳುವುದು ಸಾಧ್ಯವಾದರೆ ಪೋಷಕರು ತಮ್ಮ ಮಕ್ಕಳನ್ನು ಖಂಡಿತ ಕನ್ನಡ ಮಾಧ್ಯಮಕ್ಕೇ ಸೇರಿಸುತ್ತಾರೆ. ಇವತ್ತು ಇಂಗ್ಲೀಷ್ ಕಲಿಯುವುದರಿಂದ ನಮ್ಮ ಸಮಾಜದಲ್ಲಿ ಹೇಗಾದರೂ ಅನ್ನ ಸಂಪಾದನೆಗೆ ದಾರಿಯಾಗುತ್ತದೆ ಎಂಬ ಪರಿಸ್ಥಿತಿ ಇರುವುದು ಸುಳ್ಳಲ್ಲ.

ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಯ ತಾಯಿ ನುಡಿ ಅಥವಾ ಪರಿಸರದ ಭಾಷೆಯಲ್ಲಿ ಶಿಕ್ಷಣ ಸಿಗಬೇಕು ಎನ್ನುವುದು ಒಂದು ಆದರ್ಶದ ಕನಸು. ಆದರೆ ಯಾವುದೇ ಮಗು ಉನ್ನತ ಶಿಕ್ಷಣ, ಅದರಲ್ಲಿಯೂ ತಾಂತ್ರಿಕ ಮತ್ತು ವೈದ್ಯಕೀಯ, ವಾಣಿಜ್ಯ ವ್ಯವಹಾರಗಳಂತಹ ವಿಷಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದುಕೊಳ್ಳಬೇಕಾದರೆ ಅದು ಬಹುತೇಕ ಇಂಗ್ಲೀಷ್ ಮಾಧ್ಯಮದಲ್ಲಿಯೇ ಪಡೆದುಕೊಳ್ಳಬೇಕಾಗುತ್ತದೆ ಎನ್ನುವುದೇ ಈಗಿರುವ ಕಠೋರ ವಾಸ್ತವ. ಏಕೆಂದರೆ ತಾಂತ್ರಿಕ, ವೈದ್ಯಕೀಯ, ವಾಣಿಜ್ಯ, ಆಡಳಿತಾತ್ಮಕ ಪಾರಿಭಾಷಿಕ ಪದಗಳನ್ನು ಜನಭಾಷೆಯಲ್ಲಿ ಉನ್ನತ ಶಿಕ್ಷಣದ ಪಠ್ಯಪುಸ್ತಕಗಳನ್ನು ರೂಪಿಸುವ ಕೆಲಸವು ದೇಶ ಸ್ವಾತಂತ್ರ್ಯ ಕಂಡು ಎಪ್ಪತ್ತೈದು ವರ್ಷ ದಾಟಿದರೂ ಆಗಿಲ್ಲ. ಇದನ್ನು ಸಾಧಿಸುವ ಇಚ್ಛಾಶಕ್ತಿ ನಮ್ಮನ್ನು ಆಳುವ ಸರಕಾರಗಳಿಗೆ ಇಲ್ಲ.

ಒಂದು ಭಾಷೆಯಾಗಿ
ಇಂಗ್ಲೀಷನ್ನು ಚೆನ್ನಾಗಿ ಕಲಿಸುವುದು

ಶಾಲಾ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿಯೇ ಪಡೆದುಕೊಳ್ಳುವುದು, ಜೊತೆಗೆ ಒಂದು ಭಾಷೆಯಾಗಿ ಇಂಗ್ಲೀಷನ್ನು ಉತ್ತಮವಾಗಿ ಕಲಿಸುವುದು.... ಈ ಒಂದು ಸೂತ್ರವನ್ನು ಹಲವು ತಜ್ಞರು ಸೂಚಿಸುತ್ತಾರೆ. ತಾತ್ವಿಕವಾಗಿ ಇದು ಸರಿಯಿದೆ. ಇರುವ ಸಮಸ್ಯೆಗೆ ಅದೊಂದು ಉತ್ತಮ ಪರಿಹಾರ. ಆದರೆ ಈ ನೀತಿಯ ಜಾರಿಯಲ್ಲಿ ಗಂಭೀರ ಸಮಸ್ಯೆಗಳಿವೆ.

ಸರಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಿಗೆ ಇಂಗ್ಲೀಷನ್ನು ಚೆನ್ನಾಗಿ ಕಲಿಸಬಲ್ಲ ಶಿಕ್ಷಕರು ಅಗತ್ಯ ಸಂಖ್ಯೆಯಲ್ಲಿ ಇಲ್ಲ. ಕೆಲ ವರ್ಷಗಳ ಹಿಂದೆ ಎಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಸರಕಾರವೇ 'ಕರ್ನಾಟಕ ಪಬ್ಲಿಕ್ ಸ್ಕೂಲ್' ಎಂಬ ಹೆಸರಿನ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಆರಂಭಿಸಿತು. ದುರಂತವೆಂದರೆ ಈ ಶಾಲೆಗಳಲ್ಲೂ ಸಹ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸಲು ಅಗತ್ಯ ಅರ್ಹತೆ ಇರುವ ಶಿಕ್ಷಕರಿಲ್ಲ. ಸರಕಾರವು ಇಂಗ್ಲೀಷ್ ಭಾಷಾ ಶಿಕ್ಷಕರಿಗೆ ಅಲ್ಪಾವಧಿಯ ತರಬೇತಿಯನ್ನು ನೀಡಿ, ಇಂಗ್ಲೀಷ್ ಮಾಧ್ಯಮದಲ್ಲಿ ವಿವಿಧ ವಿಷಯಗಳನ್ನು ಬೋಧಿಸಲು ನೇಮಿಸಿದೆ. ಅಂದರೆ ಇಲ್ಲಿಯೂ ಸರಕಾರವು ತನ್ನ ಹೊಣೆಗಾರಿಕೆಯಿಂದ ಜಾರಿಕೊಂಡಿರುವುದೇ ಕಾಣುತ್ತಿದೆ. ಸಿದ್ದರಾಮಯ್ಯ ನೇತೃತ್ವದ ನೂತನ ರಾಜ್ಯ ಸರಕಾರವು ಸಹ ತನ್ನ ಮೊದಲ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಮೊದಲಿಗಿಂತಲೂ ಕೊಂಚ ಕಡಿಮೆ ಹಣ ಕೊಡುವ ಮೂಲಕ ಶಿಕ್ಷಣ ಪ್ರೇಮಿಗಳಿಗೆ ನಿರಾಶೆಯನ್ನೇ ಉಂಟು ಮಾಡಿದೆ.

ಇಂತಹ ಒಟ್ಟು ಪರಿಸ್ಥಿತಿಯನ್ನು ನೋಡಿದಾಗ ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಅಮೂಲಾಗ್ರ ಬದಲಾವಣೆ ಈ ಸದ್ಯಕ್ಕೆ ಆಗುವ ಲಕ್ಷಣಗಳೇನೂ ಕಾಣುವುದಿಲ್ಲ. ಇರುವ ಸಮಸ್ಯೆಗಳು ಮುಂದುವರಿಯುತ್ತವೆ ಮತ್ತು ಹೊಸ ಸಮಸ್ಯೆ ಸೃಷ್ಟಿಯಾಗುತ್ತವೆ.

ತ್ರಿಶಂಕು ಸ್ವರ್ಗದಂತಹ
ಅತಂತ್ರ ವಿದ್ಯಾರ್ಥಿ ಸಮೂಹದ ಸೃಷ್ಟಿ

ಒಂದು ಮಗುವು ತನ್ನ ತಾಯಿನುಡಿ ಅಥವಾ ಪರಿಸರದ ಭಾಷೆಯಲ್ಲಿ, ಅಂದರೆ ಕನ್ನಡದಂತಹ ಜನಭಾಷೆಯಲ್ಲಿ ಶಾಲಾ ಶಿಕ್ಷಣವನ್ನು ಪಡೆದರೆ ಅದು ತನಗೆ ಆಪ್ತವಾದ ಭಾಷೆಯಲ್ಲಿ ಸಾಹಿತ್ಯ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಹೀಗೆ ವಿಷಯಗಳನ್ನು ಚೆನ್ನಾಗಿ ಕಲಿಯಲು ಅವಕಾಶವಾಗುತ್ತದೆ. ಮತ್ತು ಕನ್ನಡದಂತಹ ಒಂದು ಭಾಷೆಯನ್ನಾದರೂ ಚೆನ್ನಾಗಿ ಕಲಿಯಲು ಸಾಧ್ಯವಾಗುತ್ತದೆ. ಯಾವುದೇ ಮಗು ಕನಿಷ್ಠ ಒಂದು ಭಾಷೆಯಲ್ಲಿಯಾದರೂ ಪ್ರಭುತ್ವ ಸಾಧಿಸುವುದು ಅನಿವಾರ್ಯ ಅಗತ್ಯ.

ಶಿಕ್ಷಣ ಮಾಧ್ಯಮದ ವಿಷಯದಲ್ಲಿನ ಗೋಜಲುಗಳು ಮತ್ತು ಗೊಂದಲಗಳಿಂದ ಮತ್ತು ಶಿಕ್ಷಕರ ಕೊರತೆಯಂತಹ ನಾನಾ ಕೊರತೆಗಳಿಂದ ಗುಣಾತ್ಮಕ ಶಿಕ್ಷಣ ಇಲ್ಲದಂತಾಗಿರುವುದರಿಂದ ಆ ಕಡೆ ಇಂಗ್ಲೀಷೂ ಬಾರದ, ಈ ಕಡೆ ಕನ್ನಡವೂ ಬಾರದ ಅತಂತ್ರ ಸ್ಥಿತಿಯಲ್ಲಿರುವ ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿದ್ದಾರೆ.

ಹೀಗೆ ಒಂದಾದರೂ ಭಾಷೆಯನ್ನು, ಆ ಭಾಷೆಯ ಮೂಲಕ ಒಂದಷ್ಟು ವಿಚಾರಗಳನ್ನು ಚೆನ್ನಾಗಿ ಕಲಿತಿದ್ದರೆ, ಮುಂದೆ ಕಾಲೇಜು ಶಿಕ್ಷಣ, ಉನ್ನತ ಶಿಕ್ಷಣದ ಹಂತದಲ್ಲಿ ಮತ್ತೊಂದು ಭಾಷೆಯನ್ನು ಕಲಿತುಕೊಳ್ಳಲು ಸಹಾಯವಾಗುತ್ತದೆ.

ಆದರೆ ಶಿಕ್ಷಣ ಮಾಧ್ಯಮದ ವಿಷಯದಲ್ಲಿನ ಗೋಜಲುಗಳು ಮತ್ತು ಗೊಂದಲಗಳಿಂದ ಮತ್ತು ಶಿಕ್ಷಕರ ಕೊರತೆಯಂತಹ ನಾನಾ ಕೊರತೆಗಳಿಂದ ಗುಣಾತ್ಮಕ ಶಿಕ್ಷಣ ಇಲ್ಲದಂತಾಗಿರುವುದರಿಂದ ಆ ಕಡೆ ಇಂಗ್ಲೀಷೂ ಬಾರದ, ಈ ಕಡೆ ಕನ್ನಡವೂ ಬಾರದ ಅತಂತ್ರ ಸ್ಥಿತಿಯಲ್ಲಿರುವ ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿದ್ದಾರೆ. ತಮ್ಮ ತಾಯಿ ನುಡಿಯಲ್ಲಿ ಕಲಿತಾಗ ಮಕ್ಕಳಲ್ಲಿ ಹೊರಹೊಮ್ಮಬಹುದಾದ ಸೃಜನಶೀಲತೆಗೆ ಗಂಭೀರ ಹಾನಿಯಾಗಿದೆ. ಆಗುತ್ತಿದೆ.

ಮನೆಯಲ್ಲಿ, ತಮ್ಮ ಪರಿಸರದಲ್ಲಿ ಇಂಗ್ಲೀಷ್ ಕಲಿಕೆಗೆ ಸೂಕ್ತವಾದ ವಾತಾವರಣ, ಅನುಕೂಲ ಇಲ್ಲದ ಎಷ್ಟೋ ಬಡ ಕುಟುಂಬಗಳ ಮಕ್ಕಳು, ಗ್ರಾಮಾಂತರದ ಮಕ್ಕಳು, ತಳ ಸಮುದಾಯಗಳ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಶಾಲಾ ಶಿಕ್ಷಣವನ್ನು ಪಡೆದು ಕಾಲೇಜು ಶಿಕ್ಷಣಕ್ಕೆ ಬಂದರೂ ಬಹಳಷ್ಟು ಮಕ್ಕಳು ಕನ್ನಡದಲ್ಲಿಯಾಗಲಿ, ಇಂಗ್ಲೀಷನಲ್ಲೇ ಆಗಲಿ ಸರಳವಾದ ನಾಲ್ಕು ವಾಕ್ಯಗಳನ್ನು ತಪ್ಪಿಲ್ಲದಂತೆ ಬರೆಯಲಾರದ ಅತಂತ್ರ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ.

ಇದರ ಅರ್ಥ ಬಡವರು, ಗ್ರಾಮಾಂತರದ ಮಕ್ಕಳು, ತಳ ಸಮುದಾಯದ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದ ಅವಕಾಶ ಇರಬಾರದು ಎಂದಲ್ಲ. ಶ್ರೀಮಂತರು, ನಗರದ ಪ್ರದೇಶ ಮಕ್ಕಳು, ಮೇಲ್ಜಾತಿಯ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದ ಅವಕಾಶ ಸಿಗುತ್ತಿದೆ ಎಂದಾದರೆ ಅದು ಬಡವರು, ಗ್ರಾಮಾಂತರದ ಮಕ್ಕಳು, ತಳ ಸಮುದಾಯದ ಮಕ್ಕಳಿಗೂ ಸಿಗಬೇಕು.

ಆಳುವ ಸರಕಾರಗಳು ಶಿಕ್ಷಣಕ್ಕೆ ಅಗತ್ಯ ಹಣಕಾಸನ್ನು ಕೊಡುವುದು, ರಾಜ್ಯ ಕೇಂದ್ರ ಸರಕಾರಗಳು ಒಟ್ಟು ಸೇರಿ ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.)ಯ ಶೇ.6 ರಷ್ಟು ನೀಡುವುದು. ಖಾಲಿ ಇರುವ ಎಲ್ಲ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಮತ್ತು ಗ್ರಂಥಾಲಯ–ಪ್ರಯೋಗಶಾಲೆ ಮುಂತಾದ ಮೂಲಭೂತ ಸೌಕರ್ಯಗಳನ್ನು ಕೊಟ್ಟು ಸರಕಾರಿ ಶಿಕ್ಷಣ ವ್ಯವಸ್ಥೆಯನ್ನು ಸದೃಢಗೊಳಿಸುವುದು, ಮಕ್ಕಳು ಕನ್ನಡ ಮಾಧ್ಯಮದಲ್ಲಿ ಕಲಿಯುವುದು, ಜೊತೆಗೆ ಒಂದು ಭಾಷೆಯಾಗಿ ಇಂಗ್ಲೀಷನ್ನು ಅತ್ಯುತ್ತಮವಾಗಿ ಕಲಿಸುವ ವ್ಯವಸ್ಥೆ ಮಾಡುವುದು ಹೀಗೆ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ. ಶಿಕ್ಷಣ ಮಾಧ್ಯಮದ ಪ್ರಶ್ನೆ ನೇರವಾಗಿ ಕನ್ನಡ ಅಳಿವು ಉಳಿವಿಗೆ ಸಂಬಂಧಿಸಿದೆ. ಹಾಗೂ ಕನ್ನಡದಂತಹ ಒಂದು ಜನ ಭಾಷೆ ಉಳಿಯುವಂತಹ ನೀತಿ ನಾವೆಲ್ಲಾ ದನಿ ಎತ್ತಬೇಕಾಗಿದೆ.

'ಎಲ್ಲ ಹಂತಗಳಲ್ಲೂ ಇಂಗ್ಲೀಷ್ ಮಾಧ್ಯಮ ಮಾತ್ರ' ಆಂಧ್ರ ಪ್ರದೇಶದ ಅನಾಹುತಕಾರಿ ನೀತಿ

ಕರ್ನಾಟಕದ ನೆರೆ ರಾಜ್ಯವಾದ ಆಂಧ್ರಪ್ರದೇಶ ಸರಕಾರವು 2019 ರಲ್ಲಿ ಭಾಷಾ ಮಾಧ್ಯಮದ ವಿಷಯದಲ್ಲಿ ಒಂದು ಅನಾಹುತಕಾರಿ ನೀತಿಯನ್ನು ಘೋಷಿಸಿತು. 2020–21 ನೇ ಶೈಕ್ಷಣಿಕ ವರ್ಷದಿಂದ ಆಂಧ್ರ ಪ್ರದೇಶದ ಸರಕಾರಿ, ಖಾಸಗಿ ಸೇರಿದಂತೆ ಎಲ್ಲ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮದ ಅವಕಾಶ ಮಾತ್ರ ಇರುತ್ತದೆ. ತೆಲುಗು ಮತ್ತಿತರ ಯಾವುದೇ ಭಾಷೆಯ ಮಾಧ್ಯಮದ ಅವಕಾಶ ಇರುವುದಿಲ್ಲ ಎಂಬುದೇ ಆ ನೀತಿ. ಈ ನೀತಿ ಅವೈಜ್ಞಾನಿಕ ಮತ್ತು ಇಂತಹ ದೊಡ್ಡ ಬದಲಾವಣೆಗೆ ಪೂರಕವಾದ ತಯಾರಿ, ಶಿಕ್ಷಕರ ತರಬೇತಿ ಇತ್ಯಾದಿ ಯಾವುದೂ ಆಗಿಲ್ಲ, ಹೀಗಾಗಿ ಈ ನೀತಿಯನ್ನು ಕೈಬಿಡಬೇಕೆಂದು ಆಂಧ್ರ ಪ್ರದೇಶದ ಶಿಕ್ಷಕರ ಸಂಘಟನೆಗಳು, ವಿರೋಧ ಪಕ್ಷಗಳು ಈ ನೀತಿಯನ್ನು ವಿರೋಧಿಸಿವೆ. ಕೆಲವರು ಈ ನೀತಿಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆ. ದೇಶದ ಸರ್ವೋಚ್ಚ ನ್ಯಾಯಾಲಯವು ಈ ವಿಷಯದಲ್ಲಿ ಯಾವುದೇ ಮಧ್ಯಂತರ ಆದೇಶಗಳನ್ನು ನೀಡಲು ನಿರಾಕರಿಸಿರುವುದರಿಂದ ಸದ್ಯಕ್ಕೆ ಅಧಿಕೃತವಾಗಿ ಸರಕಾರ ನೀತಿಯೇ ಜಾರಿಯಲ್ಲಿದೆ.

ಸೂಕ್ತ ಸಿದ್ಧತೆ, ತರಬೇತಿ ಹೊಂದಿದ ಸಮರ್ಥ ಶಿಕ್ಷಕರಿಲ್ಲದೇ ಈ ನೀತಿಯು ಹೇಗೆ ಜಾರಿಯಾಗುತ್ತಿದೆ ಎಂದು ಯಾರಾದರೂ ಊಹಿಸಬಹುದು. ಆದರೆ ಇದೊಂದು ಅನಾಹುತಕಾರಿ ನೀತಿ ಎಂಬುದು ಮಾತ್ರ ನಿಜ. ಸರಕಾರವು, ತೆಲುಗು–ಇಂಗ್ಲೀಷ್ ಎರಡೂ ಭಾಷೆಯಲ್ಲಿರುವ ದ್ವಿಭಾಷಾ ಪಠ್ಯ ಪುಸ್ತಕವನ್ನು ಶಾಲೆಗಳಿಗೆ ಒದಗಿಸಲಾಗುವುದು, ಪಠ್ಯ ಪುಸ್ತಕದೊಳಗೆ ಪಠ್ಯವನ್ನು ಧ್ವನಿರೂಪದಲ್ಲಿ ಕೇಳಲು ಅನುಕೂಲವಾಗುವಂತೆ ಕ್ಯೂಆರ್. ಕೋಡ್ ಅನ್ನು ನೀಡಲಾಗುವುದು ಎಂದು ಹೇಳಿ ತನ್ನ ದುಡುಕಿನ ನಿರ್ಧಾರವನ್ನು ವಾಪಾಸ್ ಪಡೆಯಲು ನಿರಾಕರಿಸಿದೆ ಮತ್ತು ಕಾಲೇಜು ಶಿಕ್ಷಣದಲ್ಲಿಯೂ ಇದೇ ನೀತಿಯನ್ನು ಜಾರಿಗೊಳಿಸಲು ಮುಂದಾಗಿದೆ. ಮುಂದೇನಾಗುವುದೋ ಕಾದು ನೋಡಬೇಕಿದೆ. ಆಂಧ್ರಪ್ರದೇಶದ ಈ ನೀತಿಯು ಕರ್ನಾಟಕಕ್ಕೆ ಮತ್ತು ದೇಶದ ಯಾವುದೇ ರಾಜ್ಯಗಳಿಗೆ ಆದರ್ಶವಾಗದಂತೆ ಶಿಕ್ಷಣ ಪ್ರೇಮಿಗಳೆಲ್ಲರೂ ಎಚ್ಚರವಹಿಸಬೇಕಿದೆ.

ಕನಿಷ್ಟ ಬೆಂಬಲ ಬೆಲೆಗಳ ಘೋಷಣೆಯಲ್ಲಿ ರೈತರಿಗೆ ಮತ್ತೊಮ್ಮೆ ವಂಚನೆ, ನಷ್ಟ ಸರಕಾರ ರೈತರಿಗೆ ಮೋಸ ಮಾಡುವುದನ್ನು ನಿಲ್ಲಿಸಬೇಕು–ಎಐಕೆಎಸ್

ಜೂನ್ 7, 2023 ರಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 2023–24ರ ಹಿಂಗಾರಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು (ಎಂಎಸ್‌ಪಿ) ಘೋಷಿಸಿದೆ. ಇವು ಅನ್ಯಾಯಯುತವಾಗಿದ್ದು, ರೈತರ ನಿರೀಕ್ಷೆಗಳನ್ನು ಸುಳ್ಳಾಗಿಸಿವೆ ಮತ್ತು ಅವರ ಆದಾಯದಲ್ಲಿ ಭಾರಿ ನಷ್ಟವನ್ನು ಉಂಟುಮಾಡುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹೇಳಿಕೊಂಡಂತೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಬದಲು, ಹೆಚ್ಚುತ್ತಿರುವ ಲಾಗುವಾಡು ವೆಚ್ಚಗಳು ಮತ್ತು ಜತೆಗೆ ಈ ಅನ್ಯಾಯಯುತ ಎಂಎಸ್‌ಪಿ ಬಹುಪಾಲು ರೈತರನ್ನು, ವಿಶೇಷವಾಗಿ ಸಣ್ಣ, ಅತಿ ಸಣ್ಣ, ಮಧ್ಯಮ ರೈತರು ಮತ್ತು ಹಿಡುವಳಿದಾರರನ್ನು ಸಾಲದ ಸುಳಿಯಲ್ಲಿ ತಳ್ಳುತ್ತದೆ. ಸ್ವಾಮಿನಾಥನ್ ಆಯೋಗದ ಶಿಫಾರಸಿನ ಪ್ರಕಾರ ಸಿ2+50% (C2+50 %) ಎಂಎಸ್‌ಪಿ ನೀಡಲಾಗುವುದು ಎಂದು 2014ರಲ್ಲಿ ಪ್ರಧಾನಿ ನೀಡಿದ ದೀರ್ಘಕಾಲದ ಆಶ್ವಾಸನೆ ಚುನಾವಣಾ ಲೊಳಲೊಟ್ಟೆಯಾಗಿಯೇ ಉಳಿದಿದೆ. ಒಂದೇ ಒಂದು ಬೆಳೆಗೂ ಈ ಸೂತ್ರದ ಪ್ರಕಾರ ಎಂಎಸ್‌ಪಿ ನಿಗದಿಯಾಗಿಲ್ಲ ಎಂದು ಎಐಕೆಎಸ್ ಹೇಳಿದೆ.

ಸರ್ಕಾರವು ಸಿ2+50% ವನ್ನು ಅನುಷ್ಠಾನಗೊಳಿಸದ ಕಾರಣ ಭತ್ತ ಬೆಳೆಯುವ ರೈತರು ಅನುಭವಿಸಿದ ನಷ್ಟವು ಸುಮಾರು ಕ್ವಿಂಟಾಲಿಗೆ ರೂ.683.5 ಆಗಿದೆ. ಉತ್ಪಾದಕತೆ ಸರ್ಕಾರದ ಅಂದಾಜಿನಂತೆ 4 ಟನ್/ಹೆಕ್ಟೇರ್ ಎಂದು ಪರಿಗಣಿಸಿದರೆ ಸಿ2 ವೆಚ್ಚವನ್ನು ಗಣನೆಗೆ ತೆಗೆದುಕೊಂಡರೆ ಅನುಭವಿಸಿದ ನಷ್ಟವು ಹೆಕ್ಟೇರಿಗೆ ರೂ.27340 ಆಗುತ್ತದೆ. ತೊಗರಿ, ಹೆಸರು, ಉದ್ದು, ಸೂರ್ಯಕಾಂತಿ, ಎಳ್ಳು, ಮತ್ತು ಹತ್ತಿಯಲ್ಲಿ, ಪ್ರತಿ ಕ್ವಿಂಟಾಲ್‌ನ ನಷ್ಟವು ಸುಮಾರು ರೂ.2000 ನಿಂದ ರೂ.3000ಗಿಂತಲೂ ಹೆಚ್ಚಾಗಿರುತ್ತದೆ.

ಕೆಳಗಿನ ಕೋಷ್ಟಕವು ಅನ್ಯಾಯದ, ಫಲದಾಯಕವಲ್ಲದ ಎಂಎಸ್‌ಪಿ ಯಿಂದ ರೈತರು ಅನುಭವಿಸಿದ ದೊಡ್ಡ ನಷ್ಟವನ್ನು ತೋರಿಸುತ್ತದೆ.

ಆಂಧ್ರಪ್ರದೇಶ, ಬಿಹಾರ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳದ ಭತ್ತದ ಯೋಜಿತ ಉತ್ಪಾದನಾ ವೆಚ್ಚದ ಅಂದಾಜುಗಳು ಸಿ.ಎ.ಸಿ.ಪಿ.ಅಂದಾಜು ಮಾಡಿರುವುದಕ್ಕಿಂತ ಹೆಚ್ಚಿರುವುದನ್ನು ಗಮನಿಸಬೇಕು. ಅಂತೆಯೇ, ಹೆಚ್ಚಿನ ಬೆಳೆಗಳಲ್ಲಿ ರಾಜ್ಯದ ಪ್ರಅಂದಾಜುಗಳು ಸಿ.ಎ.ಸಿ.ಪಿ.ಅಂದಾಜು ಗಳಿಗಿಂತ ಹೆಚ್ಚು. ಆದ್ದರಿಂದ ವಾಸ್ತವದಲ್ಲಿ, ಮೊದಲು ಸಿ.ಎ.ಸಿ.ಪಿ. ರಾಜ್ಯಗಳಲ್ಲಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ಪಾತ್ರವನ್ನು ವಹಿಸುತ್ತದೆ ಮತ್ತು ನಂತರ ಅಖಿಲ ಭಾರತ ವೆಚ್ಚದ ಅಂದಾಜುಗಳನ್ನು ತಲುಪಲು ಸರಾಸರಿ ತೂಕವನ್ನು ತೆಗೆದುಕೊಳ್ಳುತ್ತದೆ. ಉದಾಹರಣೆಗೆ, ಕೇರಳದಲ್ಲಿ ಭತ್ತದ ಸಿ2(C2) ವೆಚ್ಚವು ರಾಜ್ಯದ ಅಂದಾಜಿನ ಪ್ರಕಾರ ರೂ.2847/ಕಿಂ. ಆಗಿದ್ದರೆ, ಸಿ.ಎ.ಸಿ.ಪಿ.ಅಂದಾಜು ರೂ.2338/ಕ್ವಿಂ.ಮಾತ್ರ. ಭತ್ತಕ್ಕೆ ಸಿ2(C2) ವೆಚ್ಚದ ಪಂಜಾಬ್ ರಾಜ್ಯದ ಅಂದಾಜು ರೂ..2089/ಕ್ವಿಂ. ಆಗಿದ್ದರೆ ಸಿ.ಎ.ಸಿ.ಪಿ. ಅದನ್ನು ರೂ..1462/ ಕ್ವಿಂ. ಎಂದು ಯೋಜಿಸುತ್ತದೆ. ತೊಗರಿಯಲ್ಲಿ ಸಿ2 ವೆಚ್ಚವನ್ನು ಕರ್ನಾಟಕ ರಾಜ್ಯವು ರೂ.9588/ಕ್ವಿಂ. ಎಂದು ಅಂದಾಜಿಸಿದರೆ, ಸಿ.ಎ.ಸಿ.ಪಿ.ಅಂದಾಜು ರೂ.5744/ಕ್ವಿಂ. ಮಾತ್ರ, ಅಂದರೆ ರೂ.3844/ಕ್ವಿಂ. ಕಡಿಮೆ. ಹತ್ತಿಗೆ ತೆಲಂಗಾಣ ರಾಜ್ಯದ ಅಂದಾಜು ರೂ.11031/ಕ್ವಿಂ. ಆಗಿದ್ದರೆ, ಸಿಎಸಿಪಿ ಅಂದಾಜು ರೂ.6264/ಕ್ವಿಂ. ಅಂದರೆ ರೂ.4767/ಕ್ವಿಂ. ಕಡಿಮೆ. ರಾಜ್ಯಗಳು ಸೂಚಿಸಿದ ಎಂಎಸ್‌ಪಿಯ ಸರಾಸರಿಯನ್ನು ಗಣನೆಗೆ ತೆಗೆದುಕೊಂಡರೆ ಸರಾಸರಿ ಎಂಎಸ್‌ಪಿ ರೂ.2960/ಕ್ವಿಂ. ಆಗುತ್ತಿತ್ತು. ಬಿಜೆಪಿ ಸರ್ಕಾರದ ಘೋಷಣೆಯು ರಾಜ್ಯದ ಸರಾಸರಿಗಿಂತ ರೂ..776/ಕ್ವಿಂ. ನಷ್ಟು ಕಡಿಮೆಯಾಗಿದೆ. ಇದು ಇತರ ಬೆಳೆಗಳಿಗೂ ಅನ್ವಯಿಸುತ್ತದೆ.

ಈ ರೀತಿಯಾಗಿ ಎಲ್ಲಾ ಬೆಳೆಗಳಿಗೆ ಕಡಿಮೆ ಉತ್ಪಾದನಾ ವೆಚ್ಚದ ಲೆಕ್ಕಾಚಾರದಿಂದಾಗಿ ಮತ್ತು ಇವನ್ನೆಲ್ಲ ಪರಿಗಣಿಸಿದ ಅಖಿಲ ಭಾರತ ಸರಾಸರಿ ಇನ್ನೂ ಕಡಿಮೆಯಾಗಿದೆ. ವೆಚ್ಚದ ಲೆಕ್ಕಾಚಾರದಲ್ಲಿಯೇ ರೈತರಿಗೆ ಮೊದಲು ಮೋಸವಾಗುತ್ತದೆ. ಹೆಚ್ಚಿನ ಉತ್ಪಾದನಾ ವೆಚ್ಚವನ್ನು ಹೊಂದಿರುವ ರಾಜ್ಯಗಳಲ್ಲಿನ ರೈತರು ಎರಡನೇ ಬಾರಿ ವಂಚನೆಗೊಳಗಾಗುತ್ತಾರೆ ಏಕೆಂದರೆ ಈ ಅಖಿಲ ಭಾರತ ಸರಾಸರಿ ವೆಚ್ಚವು ಅವರ ವಾಸ್ತವಿಕ ವೆಚ್ಚಕ್ಕಿಂತ ಕಡಿಮೆಯೇ ಇರುತ್ತದೆ. ಇದಲ್ಲದೆ ಯಾವುದೇ ಖಚಿತವಾದ ಸಂಗ್ರಹಣೆ ಇಲ್ಲದಿರುವುದರಿಂದ ಈ ಎಂಎಸ್‌ಪಿ ಗಳು ಬಹುತೇಕ ಕಾಲ್ಪನಿಕ ಅಥವಾ ಕಾಗದದ ಮೇಲೆಯೇ ಉಳಿಯುವುದರಿಂದ ಮೂರನೇ ಬಾರಿ ರೈತರು ವಂಚನೆಗೊಳಗಾಗುತ್ತಾರೆ, ಯಾವುದೇ ಸಂದರ್ಭದಲ್ಲಿ ಎ2ಎಫ್‌ಎಫ್ (A2+FL) ವೆಚ್ಚಗಳು ಸಿ2 ವೆಚ್ಚಗಳಿಗಿಂತ ತುಂಬಾ ಕಡಿಮೆ. ಅಂತಹ ವೆಚ್ಚದ ಲೆಕ್ಕಾಚಾರಗಳ ಆಧಾರದ ಮೇಲೆ ಎಂಎಸ್‌ಪಿ ಯನ್ನು ನಿರ್ಧರಿಸಲಾಗುತ್ತದೆ. ಇದೂ ಸಾಲದೆಂಬಂತೆ ಸಿ.ಎ.ಸಿ.ಪಿ.ಮತ್ತು ಬಿಜೆಪಿ ಸರ್ಕಾರವು ರಾಜ್ಯಗಳು ಉತ್ಪಾದನಾ ಬೋನಸ್ ಅಥವಾ ಪ್ರೋತ್ಸಾಹಕಗಳನ್ನು ನೀಡುವುದನ್ನು ನಿರುತ್ಸಾಹಗೊಳಿಸುತ್ತವೆ, ಉದಾಹರಣೆಗೆ ಕೇರಳದಲ್ಲಿ ಭತ್ತಕ್ಕೆ ನೀಡಲಾದ ರೂ.780/ಕ್ವಿಂ. ಬೋನಸ್, ಜಾರ್ಖಂಡ್‌ನಲ್ಲಿ ರೂ.110/ಕ್ವಿಂ., ತಮಿಳುನಾಡು ಮತ್ತು ಬಿಹಾರದಲ್ಲಿ ರೂ.75/ಕ್ವಿಂ. ಇತ್ಯಾದಿ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಎಂಎಸ್‌ಪಿ ಯನ್ನು ಪರಿಷ್ಕರಿಸಬೇಕು ಮತ್ತು ಸಿ2+50% ಸೂತ್ರದ ಪ್ರಕಾರ ಅದನ್ನು ಹೆಚ್ಚಿಸಬೇಕು ಮತ್ತು ಆ ದರಗಳಲ್ಲಿ ಸಂಗ್ರಹಣೆಯ ಖಾತ್ರಿ ನೀಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಒತ್ತಾಯಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಅಲ್ಲಿ ದತ್ತಾಂಶ ಸಂಗ್ರಹಣೆ ನಡೆಯುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿರುವ ಎಐಕೆಎಸ್, ಬಿಜೆಪಿ ಸರ್ಕಾರವು ಜಮ್ಮು ಮತ್ತು ಕಾಶ್ಮೀರವನ್ನೂ ಸೇರಿಸಿ ಅಲ್ಲಿಯ ರೈತರಿಂದಲೂ ಸಂಗ್ರಹಣೆಯ ಖಾತರಿ ನೀಡಬೇಕು ಎಂದು ಆಗ್ರಹಿಸಿದೆ.. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ರೈತರಿಗೆ ಮಾಡುತ್ತಿರುವ ವಿಶ್ವಾಸದ್ರೋಹದ ವಿರುದ್ಧ ಪ್ರತಿಭಟಿಸಲು ಮತ್ತು ಅವರ ಮೋಸದ ದಾವೆಗಳನ್ನು ಬಯಲಿಗೆಳೆಯಲು ಎದ್ದು ನಿಲ್ಲಬೇಕು ಎಂದು ಅಖಿಲ ಭಾರತ ಕ್ಸಾನ್ ಸಭಾ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಬೆಳೆ	A2+FL	C2	C2-A2+FL	ಎಂಎಸ್‌ಪಿ	C2+50%	ರೈತರಿಗೆ ನಷ್ಟ /ಪ್ರತಿ ಕ್ವಿಂ.ಗೆ
ಗೋದಿ	1128	1652	524	2275	2478	203
ಬಾರ್ಲಿ	1158	1614	456	1850	2421	571
ಕಡಲೆ	3400	4547	1147	5440	6820.5	1380.5
ಮಸೂರ್	3405	4890	1485	6425	7335	910
ಸಾಸಿವೆ	2855	4068	1213	5650	6102	452
ಸೂರ್ಯಕಾಂತಿ	3807	5414	1607	5800	8121	2321

ಸಲಿಂಗ ವಿವಾಹಗಳನ್ನು ಕುರಿತ ನಿರಾಶಾದಾಯಕ ತೀರ್ಪು–ಎಐಡಿಡಬ್ಲ್ಯುಎ

ಸಲಿಂಗ ವಿವಾಹಗಳಿಗೆ ಮಾನ್ಯತೆ ನೀಡಬೇಕು ಎಂದು ಕೇಳುವ ಅರ್ಜಿಗಳ ಮೇಲೆ ಸುಪ್ರಿಂ ಕೋರ್ಟಿನ ಸಾಂವಿಧಾನಿಕ ನ್ಯಾಯಾಲಯದ ತೀರ್ಪು ಮದುವೆಯಾಗುವ ಅಥವಾ ನಾಗರಿಕ ಸಂಯೋಗದಲ್ಲಿ ಸಹಜೀವನ ನಡೆಸುವ ಮತ್ತು ಅದರ ಪರಿಣಾಮವಾಗಿ ದೊರಕುವ ಸವಲತ್ತುಗಳನ್ನು ಪಡೆಯುವ ಯಾವುದೇ ಮೂಲಭೂತ ಹಕ್ಕು ಇಲ್ಲ ಎಂದು ಹೇಳಿ ನಿರಾಸೆಯುಂಟು ಮಾಡಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಹೇಳಿದೆ. ತಮ್ಮನ್ನು ದಂಪತಿಗಳೆಂದು ಕಾನೂನು ಗುರುತಿಸದ ಕಾರಣ ದೈನಂದಿನ ಜೀವನದಲ್ಲಿ ಹಲವಾರು ರೀತಿಯ ತಾರತಮ್ಯವನ್ನು ಎದುರಿಸುತ್ತಿರುವ ಐಲಉಃಖಿಕಿ+ ದಂಪತಿಗಳಿಗೆ ಈ ತೀರ್ಪು ಭಾರಿ ಹಿನ್ನಡೆಯಾಗಿದೆ. ಅವರಿಗೆ ಕುಟುಂಬವನ್ನು ರೂಪಿಸುವ, ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಹಕ್ಕನ್ನು ನಿರಾಕರಿಸಲಾಗಿದೆ, ವಿವಿಧ ಸಂದರ್ಭಗಳಲ್ಲಿ ಪರಸ್ಪರ ಪ್ರತಿನಿಧಿಸುವ ಕಾನೂನುಬದ್ಧ ಹಕ್ಕನ್ನು ಕೂಡ ನಿರಾಕರಿಸಲಾಗಿದೆ, ಜೊತೆಗೆ ಗ್ರಾಚ್ಯುಟಿ, ಪಿಂಚಣಿ ಮುಂತಾದ ಹಣಕಾಸು ಸವಲತ್ತುಗಳು, ಉತ್ತರಾಧಿಕಾರ ಮತ್ತು ಇತರ ಭೌತಿಕ ಸೌಲಭ್ಯಗಳನ್ನೂ ನಿರಾಕರಿಸಲಾಗಿದೆ. ವಿದೇಶಿ ಐಲಉಃಖಿಕಿ+ ಸಂಗಾತಿಗೆ ಭಾರತದಲ್ಲಿ ವಾಸಿಸುವ ಹಕ್ಕು ಕೂಡ ಲಭ್ಯವಿಲ್ಲ. ಕಾನೂನು ಮಾನ್ಯತೆ ಇಲ್ಲದಿರುವುದು ಎಂದರೆ ದಂಪತಿಗಳು ತಮ್ಮ ದೈನಂದಿನ ಜೀವನದಲ್ಲಿ ಹಿಂಸೆ ಮತ್ತು ದಬ್ಬಾಳಿಕೆಯಂತಹ ವಿವಿಧ ರೀತಿಯ ತಾರತಮ್ಯಗಳನ್ನು ಎದುರಿಸುತ್ತಲೇ ಇರಬೇಕಾಗಿದೆ ಎಂದು ಎಐಡಿಡಬ್ಲ್ಯುಎ ಬೇಸರ ವ್ಯಕ್ತಪಡಿಸಿದೆ.

ಎಲ್ಲಾ ನ್ಯಾಯಾಧೀಶರು ಸಲಿಂಗ ದಂಪತಿಗಳ ವಿರುದ್ಧದ ತಾರತಮ್ಯವನ್ನು ಕೊನೆಗೊಳಿಸಬೇಕು ಎಂದು ಒಪ್ಪಿಕೊಂಡರೂ ಕೂಡ ನ್ಯಾಯಮೂರ್ತಿ ಎಸ್.ಆರ್.ಭಟ್ ನೇತೃತ್ವದ ಬಹುಮತದ ತೀರ್ಪು, ನಾಗರಿಕ ಸಂಯೋಗವನ್ನು ರಚಿಸಿಕೊಳ್ಳುವ ಅವರ ಹಕ್ಕಿನ ಕಾನೂನು ಮಾನ್ಯತೆಯನ್ನು ಶಾಸಕಾಂಗ ಮಾತ್ರ ನೀಡಬಹುದು ಎಂಬ ಅಭಿಪ್ರಾಯಕ್ಕೆಬಂದಿದೆ. ಈ ತೀರ್ಪು ಈಗಾಗಲೇ ಒಂದೇ ಲಿಂಗದ ವ್ಯಕ್ತಿಗಳಲ್ಲಿ ಪ್ರೀತಿ ಮತ್ತು ಒಡನಾಟವು ಸ್ವಾಭಾವಿಕವಾಗಿದೆ ಮತ್ತು ವಿಲಕ್ಷಣ ಸಮುದಾಯವು ಎದುರಿಸುತ್ತಿರುವ ತಾರತಮ್ಯವನ್ನು ಕೊನೆಗೊಳಿಸುವುದು ಪ್ರಭುತ್ವದ ಕರ್ತವ್ಯ ಎಂದು ಗುರುತಿಸಿರುವ ನವತೇಜ್ ಜೋಹರ್ ತೀರ್ಪಿಗಿಂತ ಮುಂದಕ್ಕೆ ಹೋಗಲಿಲ್ಲ. ತೀರ್ಪಿಗಿಂತ ಸಂವಿಧಾನವನ್ನು ಉಲ್ಲಂಘಿಸುವ ಒಂದು ತಾರತಮ್ಯದ ಕಾನೂನಿನ ಬಗ್ಗೆ ಹೇಳುವ ಅಧಿಕಾರವನ್ನು ಸಂವಿಧಾನವು ತಮಗೆ ನೀಡಿಲ್ಲ ಎಂದು ನ್ಯಾಯಾಲಯವು ಈ ವಿಷಯದಲ್ಲಿ ಅತ್ಯಂತ ಸಂಕುಚಿತ ಮತ್ತು ತಾಂತ್ರಿಕ ದೃಷ್ಟಿಕೋನವನ್ನು ತೆಗೆದುಕೊಂಡಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ಅಲ್ಪಮತದ ತೀರ್ಪು,"ಸಂಗಾತಿಯನ್ನು ಆಯ್ಕೆಮಾಡುವ ಸ್ವಾತಂತ್ರ್ಯ ಮತ್ತು ಅವರ ಸಹವಾಸವನ್ನು ಆನಂದಿಸುವ ಸ್ವಾತಂತ್ರ್ಯ, ... ಆ ಸಂಬಂಧವನ್ನು ತಾರತಮ್ಯಕ್ಕೆ ಒಳಪಡಿಸಿದರೆ ಅದು ನಿಷ್ಪ್ರಯೋಜಕವಾಗುತ್ತದೆ" ಎಂದು ಗುರುತಿಸುವ ಮೂಲಕ ಸಲಿಂಗ ದಂಪತಿಗಳಿಗೆ ಅವರ ಸಹಜೀವನವನ್ನು ನಾಗರಿಕ ಎಂದು ಮಾನ್ಯ ಮಾಡುವ ಹಕ್ಕನ್ನು ಮಾತ್ರ ನೀಡಿದೆ. ಅನುಚ್ಛೇದ 21 ರ ಅಡಿಯಲ್ಲಿ ಮತ್ತು ಸಮಾನತೆಯ ವಿಧಿಯೂ ಸೇರಿದಂತೆ ಸಂವಿಧಾನದ ಇತರ ವಿವಿಧ ಕಲಮುಗಳ ಅಡಿಯಲ್ಲಿ ಬದುಕಿನ ಹಕ್ಕಿನ ಭಾಗವಾಗಿ ತನ್ನ ಜೊತೆಗಾರರನ್ನು ಆಯ್ಕೆ ಮಾಡುವ ಮತ್ತು ಸಹಜೀವನವನ್ನು ನಿರ್ಮಿಸುವ ಸಾಮರ್ಥ್ಯವನ್ನು ಅವರು ಮಾನ್ಯ ಮಾಡಿದ್ದಾರೆ. ಆದರೆ ಅದರ ಫಲಿತಾಂಶವಾಗಿ ಸಲಿಂಗ ದಂಪತಿಗಳು ವಿವಾಹದ ಹಕ್ಕನ್ನು ಹೊಂದಿದ್ದಾರೆ ಎಂದು ಹೇಳುವ ಮಟ್ಟಕ್ಕೆ ಹೋಗಲಿಲ್ಲ. ವಿಶೇಷ ವಿವಾಹ ಕಾಯಿದೆಯು ಭಿನ್ನಲಿಂಗೀಯರಲ್ಲದ ಜೋಡಿಗಳ ವಿವಾಹವನ್ನು ಅನುಮತಿಸುವುದಿಲ್ಲವಾದ್ದರಿಂದ ಅಸಾಂವಿಧಾನಿಕ ಮತ್ತು ಅರ್ಜಿದಾರರ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಹೇಳಲು ಅವರು ನಿರಾಕರಿಸಿದರು.

ಬಹುಮುಖ್ಯವಾಗಿ ಅಲ್ಪಮತದ ತೀರ್ಪು, ಹಲವಾರು ಪಠ್ಯಗಳನ್ನು ಉಲ್ಲೇಖಿಸಿ, ಸಲಿಂಗ ಪ್ರೇಮವು ಸ್ವಾಭಾವಿಕವಾಗಿದೆ ಮತ್ತು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದೆ ಮತ್ತು ಭಾರತದಲ್ಲಿ ಇಂದು ಎಲ್ಲಾ ವರ್ಗಗಳಲ್ಲಿ ಅಸ್ತಿತ್ವದಲ್ಲಿದೆ ಎಂದಿದೆ. ಅಂತಹ ಸಂಬಂಧಗಳು ಕುಲೀನ ವಿದ್ಯಮಾನಗಳಲ್ಲ ಮತ್ತು ನಗರ ಹಾಗೂ ಗ್ರಾಮೀಣ ಎರಡೂ ಪ್ರದೇಶಗಳಲ್ಲಿ ಇವೆ ಎಂದೂ ಅದು ಹೇಳಿದೆ. ಅಲ್ಪಮತದ ತೀರ್ಪು ನಂತರ ಪ್ರಭುತ್ವವು ನಾಗರಿಕ ಸಂಯೋಗ ಮತ್ತು ಈ ರೀತಿಯ ದೃಢವಾದ ಸಂಬಂಧದಿಂದ ಹೊಮ್ಮುವ ಅರ್ಹತೆಗಳ ಗುಚ್ಛವನ್ನು ಗುರುತಿಸಬೇಕು ಎಂದೂ ಹೇಳುತ್ತದೆ. ಇದನ್ನು ಹೇಳಿದ ನಂತರ, ಅವರು ಅಂತಹ ದಂಪತಿಗಳಿಗೆ ಸಿಗುವ ಸೌಲಭ್ಯಗಳ ವ್ಯಾಪ್ತಿಯನ್ನು ಇನ್ನಷ್ಟೇ ರಚಿಸಬೇಕಾದ ಕೇಂದ್ರ ಸಚಿವ ಸಂಪುಟದ ಅಧ್ಯಕ್ಷತೆಯ ಸರ್ಕಾರಿ ಸಮಿತಿಗೆ ಬಿಟ್ಟರು. ನ್ಯಾಯಮೂರ್ತಿ ಭಟ್ ಅವರ ಬಹುಮತದ ತೀರ್ಪು ಕೂಡ ಅರ್ಜಿಗಳಲ್ಲಿ ಎತ್ತಲಾದ ಅರ್ಜಿದಾರರ ಹಕ್ಕುಗಳ ಪ್ರಶ್ನೆಯನ್ನು ಉನ್ನತ ಅಧಿಕಾರದ ಸಮಿತಿ ಚರ್ಚಿಸಲು ಮತ್ತು ಸಂಸತ್ತು ನಿರ್ಧರಿಸಲೆಂದು ಬಿಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು ವಿಲಕ್ಷಣ ದಂಪತಿಗಳ ವಿರುದ್ಧ ಹಿಂಸಾಚಾರ ಮತ್ತು ತಾರತಮ್ಯವನ್ನು ನಿಭಾಯಿಸಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಮಗ್ರ ನಿರ್ದೇಶನಗಳ ಒಂದು ಪಟ್ಟಿಯನ್ನು ನೀಡಿದರು. ವಿಲಕ್ಷಣ ದಂಪತಿಗಳನ್ನು ರಕ್ಷಿಸಲಿಕ್ಕೆ ಮತ್ತು ಅವರ ಕುಟುಂಬ ಸದಸ್ಯರಿಗೆ ಕಿರುಕುಳ ನೀಡಲು ಅವಕಾಶ ನೀಡದಂತೆ ಅವರು ಪೊಲೀಸ್ ವ್ಯವಸ್ಥೆಗಳಿಗೆ ನಿರ್ದೇಶನಗಳನ್ನು ನೀಡಿದರು. ಅಗತ್ಯವಿದ್ದರೆ ವಿಲಕ್ಷಣ ದಂಪತಿಗಳು ಆಶ್ರಯ ಪಡೆಯಲು ಸುರಕ್ಷಿತ ಮನೆಗಳನ್ನು ಕೊಡಬೇಕು ಎಂದೂ ಅವರು ಹೇಳಿದರು. ರಚನೆಯಾಗಲಿರುವ ಸರ್ಕಾರದ ಸಮಿತಿಯು ವಿಲಕ್ಷಣ ಸಮುದಾಯದ ಸದಸ್ಯರು ಮತ್ತು ಇತರ ಕ್ಷೇತ್ರ ತಜ್ಞರೊಂದಿಗೆ ಒಟ್ಟಾಗಿ ಕೆಲಸ ಮಾಡಬೇಕು ಎಂದು ಅವರು ಹೇಳಿದರು. ಸಮಿತಿಯು ಸಲಿಂಗ ದಂಪತಿಗಳಿಗೆ ಪಡಿತರ ಚೀಟಿ, ಜಂಟಿ ಬ್ಯಾಂಕ್ ಖಾತೆಯ ಸೌಲಭ್ಯ, ಈ ಖಾತೆಗಳಲ್ಲಿ ನಾಮಿನಿಗಳೆಂದು ಹೆಸರಿಸುವ ಹಕ್ಕು ಮತ್ತು ವೈದ್ಯಕೀಯ ಪ್ರಕ್ರಿಯೆಗಳಲ್ಲಿ, ಜೈಲು ಭೇಟಿಗಳಲ್ಲಿ ನಿಕಟ ಸಂಬಂಧಿಗಳೆಂದು ಪರಿಗಣಿಸಲ್ಪಡುವ, ಮೃತ ಸಂಗಾತಿಯ ದೇಹವನ್ನು ಪಡೆಯುವ ಮತ್ತು ಅಂತಿಮ ವಿಧಿಗಳನ್ನು ಏರ್ಪಡಿಸುವ ಅವಕಾಶಗಳಂತಹ ಸೌಲಭ್ಯಗಳನ್ನು ನೀಡಬೇಕು ಎಂದು ಅವರು ಸಲಹೆ ನೀಡಿದರು. ಆದರೆ, ನ್ಯಾಯಮೂರ್ತಿ ಹಿಮಾ ಕೊಹ್ಲಿ ಮತ್ತು ನ್ಯಾಯಮೂರ್ತಿ ನರಸಿಂಹ ಈ ನಿರ್ದೇಶನಗಳನ್ನು ಒಪ್ಪಲೂ ಇಲ್ಲ. ಸುಪ್ರಿಂ ಕೋರ್ಟ್ ನಿರ್ದೇಶನಗಳನ್ನು ನೀಡಿದ ಹಿಂದಿನ ಪ್ರಕರಣಗಳು "ಅಸಮರ್ಪಕತೆಗಳು ...... ತೀವ್ರ ಮತ್ತು ಅಸಹನೀಯವಾಗಿದ್ದವು" ಎಂಬುದಕ್ಕಾಗಿ ಎಂದಿರುವುದು ಆಶ್ಚರ್ಯಕರವಾಗಿದೆ. LGBTQ+ ಸಮುದಾಯವು ಎದುರಿಸುತ್ತಿರುವ ನಿರಂತರ ಹಿಂಸಾಚಾರ, ಕಿರುಕುಳ ಮತ್ತು ತಾರತಮ್ಯವು ಈ ಹಿಂದೆ ಎದುರಿಸಿದ ಅಸಮರ್ಪಕತೆಗಳಂತೆ ಏಕೆ ಘೋರವಾಗಿಲ್ಲ ಎಂಬುದನ್ನು ನ್ಯಾಯಮೂರ್ತಿ ಭಟ್ ವಿವರಿಸಲಿಲ್ಲ.

ಬಿ ನ್ ್ನ ಲಿ ಂ ಗಿ ೀ ಂ ು ್ ು

ಪುಟ 13 ಕ್ಕೆ

ಶೇ. 8 ರಷ್ಟು ಕಾರ್ಪೊರೇಟ್ ತೆರಿಗೆ ಕಡಿತ: ಸರ್ಕಾರಕ್ಕೆ ವರ್ಷವೊಂದರಲ್ಲಿ ಲಕ್ಷ ಕೋಟಿ ರೂ. ನಷ್ಟ

ಸಿ. ಸಿದ್ದಯ್ಯ

ಸರ್ಕಾರ (ಕಾರ್ಯಾಂಗ) ಎಂದರೆ ಆಳುವ ವರ್ಗದ ವ್ಯವಹಾರಗಳನ್ನು ನಿರ್ವಹಿಸುವ ಸಮಿತಿಯಲ್ಲದೆ ಬೇರೇನೂ ಅಲ್ಲ ಎಂಬ ಮಾತಿದೆ. ನರೇಂದ್ರ ಮೋದಿ ನೇತೃತ್ವದ ಭಾರತೀಯ ಜನತಾ ಪಕ್ಷದ ಒಕ್ಕೂಟ ಸರ್ಕಾರವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಭಾರತದ ಬಲಿಷ್ಠ ಕಾರ್ಪೊರೇಟ್ ವಲಯದ ಅನುಕೂಲಕ್ಕಾಗಿ ಕೆಲಸ ಮಾಡಲು ಅದು ಮುಕ್ತ ಮತ್ತು ಲಜ್ಜೆಗೆಟ್ಟ ಮಾರ್ಗವನ್ನು ಅನುಸರಿಸುತ್ತಿದೆ.

ಸೆಪ್ಟೆಂಬರ್ 20, 2019 ರಂದು, ಮೋದಿಯವರ ಹೂಸ್ಟನ್ ಕಾರ್ಯಕ್ರಮಕ್ಕೆ 40 ಗಂಟೆಗಳ ಮೊದಲು, ಸರ್ಕಾರವು ಬೃಹತ್ ತೆರಿಗೆ ದರ ಕಡಿತವನ್ನು ಘೋಷಿಸಿತು. ಸೆಪ್ಟೆಂಬರ್ 2019 ರಲ್ಲಿ ಅಸ್ತಿತ್ವದಲ್ಲಿದ್ದ ಕಂಪನಿಗಳಿಗೆ ಮೂಲ ಕಾರ್ಪೊರೇಟ್ ತೆರಿಗೆಯನ್ನು 30 ಪ್ರತಿಶತದಿಂದ 22 ಪ್ರತಿಶತಕ್ಕೆ ಕಡಿತಗೊಳಿಸಿತು ಮತ್ತು ಅಕ್ಟೋಬರ್ 1, 2019 ರ ನಂತರ ಸಂಯೋಜಿತವಾದ ಹೊಸ ಉತ್ಪಾದನಾ ಸಂಸ್ಥೆಗಳಿಗೆ, ಕಾರ್ಪೊರೇಟ್ ತೆರಿಗೆಯನ್ನು ಶೇ. 25 ರಿಂದ ಶೇ. 15 ಕ್ಕೆ ಇಳಿಸಲಾಯಿತು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಸಾಮಾನ್ಯರು ಬಳಕೆ ಮಾಡುವ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ವಿಪರೀತವಾಗಿ ಹೆಚ್ಚಳ ಮಾಡಿದೆ ಎಂದು ಯಾರಾದರೂ ಹೇಳಿದರೆ, ಮೋದಿ ಅಭಿಮಾನಿಗಳು ತಟ್ಟನೆ ಕೊಡುವ ಉತ್ತರ 'ದೇಶ ಅಭಿವೃದ್ಧಿಯಾಗಬೇಕಾದರೆ ತೆರಿಗೆ ಹೆಚ್ಚಳ ಮಾಡಲೇಬೇಕು' ಎನ್ನುತ್ತಾರೆ. ಹಾಗಾದರೆ, ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದ್ದೇಕೆ? ಎಂದು ಪ್ರಶ್ನಿಸಿದರೆ, ಅದು ಹೂಡಿಕೆದಾರರಿಗೆ ಪ್ರೋತ್ಸಾಹ ನೀಡಲು ಮತ್ತು ಉದ್ಯಮಗಳ ಬೆಳವಣಿಗೆಗೆ ಕಾರ್ಪೊರೇಟ್ ತೆರಿಗೆ ಕಡಿತ ಅವಶ್ಯಕ ಎನ್ನುತ್ತಾರೆ!!


ವಿಪರ್ಯಾಸವೆಂದರೆ, ಸರ್ಕಾರವು ಕಾರ್ಪೊರೇಟ್ ತೆರಿಗೆ ಕಡಿತ ಕೆಲವು ರೀತಿಯ ಉದ್ಯೋಗವನ್ನು ಹೆಚ್ಚಿಸುವ ಹೆಜ್ಜೆ ಎಂದು ಬಿಂಬಿಸಲು ಪ್ರಯತ್ನಿಸಿತು. ತೆರಿಗೆ ರಿಯಾಯಿತಿಗಳು ಕಾರ್ಪೊರೇಟ್‌ಗಳ ಹೂಡಿಕೆಯನ್ನು ಹೆಚ್ಚಿಸಲು ಕಾರಣವಾಗುತ್ತವೆ ಮತ್ತು ಪ್ರತಿಯಾಗಿ ಹೆಚ್ಚಿನ ಉದ್ಯೋಗಗಳ ಸೃಷ್ಟಿಗೆ ಕಾರಣವಾಗುತ್ತವೆ ಎಂಬುದು ಅವರ ವಿಲಕ್ಷಣ ತರ್ಕವಾಗಿತ್ತು. ಬೆಳವಣಿಗೆಗಳು ತೋರಿಸಿದಂತೆ, ಅಂತಹ ಯಾವದೂ ಸಂಭವಿಸಿಲ್ಲ. 2019 ರಲ್ಲಿ ಯಾವುದೇ ಉದ್ಯೋಗದ ಬೆಳವಣಿಗೆ ಇರಲಿಲ್ಲ, ಮತ್ತು ನಂತರ, 2020 ರಲ್ಲಿ, ಸಾಂಕ್ರಾಮಿಕ ರೋಗವು ಭಾರತವನ್ನು ನಲುಗಿಸಿತು. ಇದು ಹಲವಾರು ತಿಂಗಳುಗಳವರೆಗೆ ವಿವಿಧ ರೂಪಗಳಲ್ಲಿ ನಡೆದು, ಯಾವುದೇ ಪೂರ್ವ ಸಿದ್ಧತೆ ಇಲ್ಲದೆ, ಅವೈಜ್ಞಾನಿಕವಾಗಿ ಮಾಡಿದ ಲಾಕ್‌ಡೌನ್ ಘೋಷಣೆ ದೇಶದ ಆರ್ಥಿಕತೆಯನ್ನು ಮತ್ತಷ್ಟು ನಾಶಪಡಿಸಲು ಕಾರಣವಾಯಿತು.

ದೇಶ ಸಂಕಷ್ಟದಲ್ಲಿದ್ದಾಗ ಉದ್ಯಮಿಗಳ ಸಂಪತ್ತು ಹೆಚ್ಚಳ!!

ವಿಚಿತ್ರವೆಂದರೆ, ಸಾಂಕ್ರಾಮಿಕ ಮತ್ತು ಲಾಕ್‌ಡೌನ್‌ಗಳ ವಿನಾಶದಿಂದ ಕಾರ್ಪೊರೇಟ್ ವಲಯವು ಉತ್ತಮವಾಗಿ ಹೊರಹೊಮ್ಮಿದವು!! ಆ ಅವಧಿಯಲ್ಲಿ ಅವುಗಳ ಸಂಪತ್ತು ವೇಗವಾಗಿ ವೃದ್ಧಿಗೊಂಡಿತು. 2020 ರ ಅಂತ್ಯದ ವೇಳೆಗೆ ದೊಡ್ಡ ಕಂಪನಿಗಳ ಲಾಭವು ದಾಖಲೆಯ ಗರಿಷ್ಠ ಮಟ್ಟಕ್ಕೆ ಏರಿತು. ಇದು ಕಾರ್ಪೊರೇಟ್ ತೆರಿಗೆ ದರಗಳಲ್ಲಿನ ಭಾರೀ ಕಡಿತದಿಂದ ಮಾತ್ರವಲ್ಲದೆ ಸಾಂಕ್ರಾಮಿಕ ಸಮಯದಲ್ಲಿ ಕಾರ್ಮಿಕರ ವೆಚ್ಚವನ್ನು ಉಳಿಸಲು, ಕಾರ್ಮಿಕರನ್ನು ಹಿಮ್ಮೆಟ್ಟಿಸಲು ಅಥವಾ ವಜಾಗೊಳಿಸಲು ಉದ್ಯಮಕ್ಕೆ ಸರ್ಕಾರದಿಂದ ನೀಡಲಾದ 'ಮುಕ್ತ ಅವಕಾಶಗಳು' ಸಹಾಯ ಮಾಡಿತು..

ಕಡಿಮೆ ತೆರಿಗೆ ದರವು ಹೊಸ ಹೂಡಿಕೆಗಳನ್ನು, ವಿಶೇಷವಾಗಿ ಉತ್ಪಾದನೆಯಲ್ಲಿ ಹೂಡಿಕೆಗಳನ್ನು ಆಕರ್ಷಿಸುತ್ತದೆ, ಮತ್ತು ಇದು ದೇಶದ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಎಂದು ಆಡಳಿತ ನಡೆಸುವವರು ವಾದಿಸುತ್ತಾರೆ. ಅತಿ ಶ್ರೀಮಂತರು ಮತ್ತು ಕಾರ್ಪೊರೇಟ್ ವಲಯಕ್ಕೆ ಇಂತಹ ರಿಯಾಯಿತಿಗಳು ಇನ್ನಷ್ಟು ಅಸಮಾನತೆಯ ಹೆಚ್ಚಳಕ್ಕೆ ಕಾರಣವಾಗಿವೆ.

2019–20ರಿಂದ ಜಾರಿಯಾದ ಮತ್ತು ಉದ್ಯಮಿಗಳಿಗೆ ಲಾಭ ಮಾಡಿಕೊಡುವ ಕಾರ್ಪೊರೇಟ್ ತೆರಿಗೆ ದರಗಳಲ್ಲಿನ ಕಡಿತದಿಂದಾಗಿ 2019–20 ಮತ್ತು 2020–21ರಲ್ಲಿ ಸರ್ಕಾರವು 1.84 ಲಕ್ಷ ಕೋಟಿ ರೂಪಾಯಿಗಳ ಆದಾಯ ನಷ್ಟವನ್ನು ಅನುಭವಿಸಿದೆ ಎಂದು ಸಂಸದೀಯ ಸಮಿತಿಯ ವರದಿಯೊಂದರಿಂದ ತಿಳಿಯುತ್ತದೆ.



ಕಾರ್ಪೊರೇಟ್ ತೆರಿಗೆ ದರವನ್ನು ಕಡಿಮೆ ಮಾಡಿದ ಮೊದಲ ವರ್ಷದಲ್ಲಿ, ಅಂದರೆ 2019–20 ರಲ್ಲಿ ಒಟ್ಟಾರೆ ನಷ್ಟವು 86,835 ಕೋಟಿ ರೂ.ಗಳಷ್ಟಿತ್ತು, ನಂತರ 2020–21ರಲ್ಲಿ 96,400 ಕೋಟಿ ರೂ. ನಷ್ಟವಾಗಿದೆ ಎಂದು ವರದಿ ಹೇಳುತ್ತದೆ. ನಂತರದ 2021–22 ಮತ್ತು 2022–23ರ ಎರಡು ಆರ್ಥಿಕ ವರ್ಷಗಳಲ್ಲಿ ತಲಾ ಅಂದಾಜು ಒಂದು ಲಕ್ಷ ಕೋಟಿ ರೂ. ನಷ್ಟ ಸೇರಿಸಿದರೆ, ನಾಲ್ಕು ಆರ್ಥಿಕ ವರ್ಷಗಳಲ್ಲಿ ಸರ್ಕಾರಕ್ಕೆ ಸರಿಸುಮಾರು 4 ಲಕ್ಷ ಕೋಟಿ ರೂಗಳ ನಷ್ಟವಾಗಿದೆ.

ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಂತೆ!!

ಕಾರ್ಪೊರೇಟ್ ತೆರಿಗೆಯನ್ನು ಶೇ. 8 ರಷ್ಟು ಕಡಿತ ಮಾಡಿರುವುದರಿಂದ ಸರ್ಕಾರಕ್ಕೆ ಈ ತೆರಿಗೆಯಿಂದ ಬರುವ ಆದಾಯ ಹೆಚ್ಚಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಳ್ಳುತ್ತದೆ. ಇದಕ್ಕೆ ಅವರು ನೀಡಿದ ಕಾರಣವೆಂದರೆ, 2021–22ರಲ್ಲಿ 7.12 ಲಕ್ಷ ಕೋಟಿ ರೂ. ಕಾರ್ಪೊರೇಟ್ ತೆರಿಗೆ ಸಂಗ್ರಹವಾಗಿದೆ. 2018–19 ಕ್ಕೆ ಹೋಲಿಸಿದರೆ ಹೆಚ್ಚಿನ ತೆರಿಗೆ ಬಂದಿದೆ ಎಂಬುದು. ಶೇ. 8ರಷ್ಟು ತೆರಿಗೆ ಕಡಿತ ಮಾಡದೇ ಇದ್ದರೆ, ಮತ್ತಷ್ಟು ತೆರಿಗೆ ಸಂಗ್ರಹವಾಗುತ್ತಿತ್ತು ಎಂಬುದನ್ನು ಇವರು ಮರೆಮಾಚುತ್ತಾರೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಸಾಮಾನ್ಯರು ಬಳಕೆ ಮಾಡುವ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ವಿಪರೀತವಾಗಿ ಹೆಚ್ಚಳ ಮಾಡಿದೆ ಎಂದು ಯಾರಾದರೂ ಹೇಳಿದರೆ, ಮೋದಿ ಅಭಿಮಾನಿಗಳು ತಟ್ಟನೆ ಕೊಡುವ ಉತ್ತರ 'ದೇಶ ಅಭಿವೃದ್ಧಿಯಾಗಬೇಕಾದರೆ ತೆರಿಗೆ ಹೆಚ್ಚಳ ಮಾಡಲೇಬೇಕು' ಎನ್ನುತ್ತಾರೆ. ಹಾಗಾದರೆ, ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದ್ದೇಕೆ? ಎಂದು ಪ್ರಶ್ನಿಸಿದರೆ, ಅದು ಹೂಡಿಕೆದಾರರಿಗೆ ಪ್ರೋತ್ಸಾಹ ನೀಡಲು ಮತ್ತು ಉದ್ಯಮಗಳ ಬೆಳವಣಿಗೆಗೆ ಕಾರ್ಪೊರೇಟ್ ತೆರಿಗೆ ಕಡಿತ ಅವಶ್ಯಕ ಎನ್ನುತ್ತಾರೆ!!

2014–2015ರಲ್ಲಿ ಮೋದಿ ಅಧಿಕಾರಕ್ಕೆ ಬಂದಾಗ ಆದಾಯ ತೆರಿಗೆ ಸಂಗ್ರಹವು ರೂ. 2.6 ಲಕ್ಷ ಕೋಟಿಯಿಂದ 2021–22 ರಲ್ಲಿ ರೂ. 5.6 ಲಕ್ಷ ಕೋಟಿಗೆ ಏರಿಕೆಯಾಗಿದೆ – ಇದು ಶೇ. 117 ರಷ್ಟು ಏರಿಕೆಯಾಗಿದೆ. ಅದೇ ಅವಧಿಯಲ್ಲಿ, ಕಾರ್ಪೊರೇಟ್‌ಗಳ ಮೇಲೆ ವಿಧಿಸಲಾದ ಕಾರ್ಪೊರೇಷನ್ ತೆರಿಗೆಯು ಕೇವಲ ಶೇ. 28 ರಷ್ಟು ಅಂದರೆ, ರೂ. 4.3 ಲಕ್ಷ ಕೋಟಿಯಿಂದ ರೂ. 5.5 ಲಕ್ಷ ಕೋಟಿಗೆ ಹೆಚ್ಚಾಗಿದೆ,.

ಒಟ್ಟು ತೆರಿಗೆ ಆದಾಯದಲ್ಲಿ ಕಾರ್ಪೊರೇಟ್ ತೆರಿಗೆಯ ಪಾಲು 2014–15 ರಲ್ಲಿ ಶೇ. 34.5 ರಿಂದ 2021–22 ರಲ್ಲಿ ಶೇ. 24.7 ಕ್ಕೆ ಕುಸಿಯಿತು. ಅದೇ ಅವಧಿಯಲ್ಲಿ ಕಸ್ಟಮ್ಸ್ ಆದಾಯವು ಶೇ. 15 ರಿಂದ ಶೇ. 6 ಕ್ಕೆ ಇನ್ನಷ್ಟು ತೀವ್ರವಾಗಿ ಕುಸಿಯಿತು. ಆದರೆ ಆದಾಯ ತೆರಿಗೆಯಿಂದ ಬಂದ ಆದಾಯ ಶೇ. 20.8ರಿಂದ ಶೇ. 25.3ಕ್ಕೆ ಏರಿಕೆಯಾಗಿದೆ. (ಚಾರ್ಟ್ ನೋಡಿ)

ಅದೇ ಅವಧಿಯಲ್ಲಿ, ಒಟ್ಟು ತೆರಿಗೆ ಆದಾಯವು ಶೇ. 78 ರಷ್ಟು ಹೆಚ್ಚಾಗಿದೆ, ಇದು ಕಾರ್ಪೊರೇಟ್ ತೆರಿಗೆ ಮತ್ತು ಆದಾಯ ತೆರಿಗೆ ಬೆಳವಣಿಗೆಯ ದರಗಳಲ್ಲಿನ ಹೆಚ್ಚಿನ ಪ್ರಮಾಣದ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರುತ್ತದೆ.

ಸಾಲದ ಪಾಲು ಹೆಚ್ಚಳ

ಹೀಗೆ ತೆರಿಗೆ ಕಡಿತದಿಂದ ಉಂಟಾಗುವ ಕೊರತೆ ತುಂಬಿಕೊಳ್ಳಲು ಸರ್ಕಾರ ಜನಸಾಮಾನ್ಯರ ಮೇಲಿನ ತೆರಿಗೆ ಹೆಚ್ಚಳ ಮಾಡತೊಡಗುತ್ತದೆ. ಬಹುತೇಕ ಸರಕು ಮತ್ತು ಸೇವೆಗಳ ಮೇಲೆ ಜಿಎಸ್‌ಟಿ ವಿಧಿಸುವುದು, ಈ ತೆರಿಗೆಯನ್ನು ಹಾಗಾಗ್ಗೆ ಹೆಚ್ಚಳ ಮಾಡುವುದು, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕ ಹೆಚ್ಚಳ ಮಾಡುವುದರ ಮೂಲಕ ಆದಾಯದ ಕೊರತೆ ತುಂಬಿಕೊಳ್ಳಲು ಮುಂದಾಗುತ್ತದೆ.

ಸಾಲದೆಂಬಂತೆ, ಮೋದಿ ಸರ್ಕಾರವು ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಮೇಲಿನ ಅಬಕಾರಿ ಸುಂಕವನ್ನು ಎಷ್ಟು ಹೆಚ್ಚಿಸಿದೆ ಎಂದರೆ, ಇದರಿಂದ ಅದರ ಆದಾಯವು 2014–15 ರಲ್ಲಿ ಸುಮಾರು ರೂ. 99,000 ಕೋಟಿಗಳಿಂದ 2020–21 ರಲ್ಲಿ ರೂ. 3.73 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ. ಏಳು ವರ್ಷಗಳ ಹಿಂದಿನ ಆದಾಯಕ್ಕಿಂತ ಸುಮಾರು ಶೇ. 277 ಹೆಚ್ಚಳ! ಪರಿಣಾಮವಾಗಿ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ವಿಪರೀತವಾಗಿ ಏರಿಕೆಯಾಗಿದೆ. ಸರಕಾರ ನೀಡುತ್ತಿದ್ದ ಸಬ್ಸಿಡಿಯನ್ನು 2019ರಲ್ಲಿ ನಿಲ್ಲಿಸಿದ್ದರೂ ಅಡುಗೆ ಅನಿಲ ಬೆಲೆ ಎರಡೂವರೆ ಪಟ್ಟು ಏರಿಕೆಯಾಗಿದೆ.

ಕಾರ್ಪೊರೇಟ್ ತೆರಿಗೆ ಕಡಿತಕ್ಕೂ ಮುನ್ನ ಅಂದರೆ, 2018–19 ರಲ್ಲಿ ಸರ್ಕಾರದ ಒಟ್ಟು ಆದಾಯದಲ್ಲಿನ ಕಾರ್ಪೊರೇಟ್ ತೆರಿಗೆಯ ಪಾಲು ಶೇ. 21 ರಷ್ಟಿತ್ತು. ಅದು 2022–23 ರಲ್ಲಿ ಶೇ. 15 ಕ್ಕೆ ಕುಸಿದಿದೆ. 2018–19 ರಲ್ಲಿ ಕೊರತೆ ತುಂಬಿಕೊಳ್ಳಲು ಒಟ್ಟು ಆದಾಯದ ಶೇ. 20 ರಷ್ಟನ್ನು ಸಾಲ ಮಾಡುವ ಮೂಲಕ ತುಂಬಿಕೊಂಡಿದ್ದರೆ, 2022–23 ರಲ್ಲಿ ಸಾಲದ ಪ್ರಮಾಣ ಶೇ. 35.



9 ವರ್ಷಗಳ ಮೋದಿ ಆಡಳಿತದಲ್ಲಿ

ಉದ್ಯಮಿಗಳ ಸಂಪತ್ತು ವೃದ್ಧಿಗಾಗಿ ಕಾರ್ಪೊರೇಟ್ ತೆರಿಗೆ ಕಡಿತ

ಶೇ. 30 ರಷ್ಟಿದ್ದ ಕಾರ್ಪೊರೇಟ್ ತೆರಿಗೆಯನ್ನು ಶೇ. 22ಕ್ಕೆ ಕಡಿತ ಮಾಡುವ ಮೂಲಕ ಮೋದಿ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಆದಾಯದಲ್ಲಿ ಅಂದಾಜು 4 ಲಕ್ಷ ಕೋಟಿ ರೂ. ಕಳೆದುಕೊಂಡಿದೆ. ಇದರರ್ಥ, ಇಷ್ಟು ದೊಡ್ಡ ಮೊತ್ತದ ಸಂಪತ್ತನ್ನು ಉದ್ಯಮಿಗಳ ಸಂಪತ್ತಿನ ವೃದ್ಧಿಗೆ ಸರ್ಕಾರ ಕೊಡುಗೆ ನೀಡಿದೆ. ಮತ್ತೊಂದೆಡೆ, ತನ್ನ ಬಜೆಟ್ ಕೊರತೆ ತುಂಬಿಕೊಳ್ಳಲು ಜನಸಾಮಾನ್ಯರು ಬಳಕೆಮಾಡುವ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ಹೆಚ್ಚಳ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುವ ಅನುದಾನ ಕಡಿತ, ಸಾರ್ವಜನಿಕ ಉದ್ಯಮಗಳಿಂದ ತನ್ನ ಪಾಲಿನ ಮಾರಾಟ, ಮತ್ತಷ್ಟು ಮಗದಷ್ಟು ಸಾಲ, ಸಾಲ, ಸಾಲ...

ಮೋದಿ–9 ವರ್ಷಗಳು–ಭಾಗ–22

ಹೂಡಿಕೆಗಳು ನಿಧಾನಗೊಂಡಿರುವುದೇಕೆ?

ದೇಶದಲ್ಲಿ ಹೂಡಿಕೆಗಳು ನಿಧಾನಗೊಂಡಿರುವುದು ಕಾರ್ಪೊರೇಟ್ ತೆರಿಗೆ ದರಗಳ ಕಾರಣದಿಂದಲ್ಲ, ಉತ್ಪನ್ನಗಳಿಗೆ ಬೇಡಿಕೆಯ ಕೊರತೆಯಿಂದಾಗಿ ಹೊಸ ಉದ್ಯಮಗಳ ಸ್ಥಾಪನೆಯಾಗುತ್ತಿಲ್ಲ. ಇರುವ ಕೈಗಾರಿಕೆಗಳೂ ಅಭಿವೃದ್ಧಿ ಹೊಂದುತ್ತಿಲ್ಲ. ಕಾರ್ಪೊರೇಟ್ ತೆರಿಗೆ ದರವನ್ನು ದೊಡ್ಡ ಪ್ರಮಾಣದಲ್ಲಿ ಕಡಿತಗೊಳಿಸಿದ ಮಾತ್ರಕ್ಕೆ ಹೂಡಿಕೆದಾರರು ಮತ್ತಷ್ಟು ಹೂಡಿಕೆ ಮಾಡುವುದಿಲ್ಲ. ಇಷ್ಟು ಪ್ರಮಾಣದ ತೆರಿಗೆ ಕಡಿತ ಮಾಡದಿದ್ದರೆ, ಭಾರತ ಸರ್ಕಾರವು ಸುಮಾರು 4 ಲಕ್ಷ ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಹೊಂದಿರುತ್ತಿತ್ತು. ಈ ಹಣದಿಂದ ಬಡವರಿಗೆ ಪರಿಹಾರ ನೀಡಲು, ಹೊಸ ಮೂಲಸೌಕರ್ಯಗಳನ್ನು ಸೃಷ್ಟಿಸಲು ಸರ್ಕಾರವು ಹೂಡಿಕೆ ಮಾಡಿದ್ದರೆ, ಅದು ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುತ್ತಿತ್ತು, ಇದರಿಂದ ಕುಟುಂಬದ ಆದಾಯದಲ್ಲಿ ಹೆಚ್ಚಳವಾಗಿ, ಜನರ ಖರೀದಿ ಶಕ್ತಿ ಹೆಚ್ಚುತ್ತಿತ್ತು. ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿ, ಉತ್ಪಾದಕತೆ ಹೆಚ್ಚಾಗುವ ಮೂಲಕ ಮತ್ತಷ್ಟು ಉದ್ಯೋಗಗಳ ಸೃಷ್ಟಿಯಾಗುತ್ತಿತ್ತು. ಒಟ್ಟಾರೆಯಾಗಿ ದೇಶದ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತಿತ್ತು. ಆದರೆ, ಮೋದಿ ಸರ್ಕಾರಕ್ಕೆ ಜನಸಾಮಾನ್ಯರ ಹಿತಕ್ಕಿಂತ ದೊಡ್ಡ ಉದ್ಯಮಿಗಳ ಸಂಪತ್ತಿನ ವೃದ್ಧಿ ಮಾಡುವುದರ ಬಗ್ಗೆಯೇ ಹೆಚ್ಚಿನ ಆಸಕ್ತಿ.

ಶ್ರೀಮಂತರಿಗೆ ರಿಯಾಯತಿ ನೀಡಿ, ಜನಸಾಮಾನ್ಯರನ್ನು ಹಿಂಡುವ ದೂರದೃಷ್ಟಿಯಿಲ್ಲದ, ಅನ್ಯಾಯದ ಇಂತಹ ಆರ್ಥಿಕ ನೀತಿಯು ದೇಶವನ್ನು ಸಂಕಷ್ಟದೆಡೆಗೆ ತಳ್ಳುತ್ತದೆ. ಹಣವನ್ನು ಉಳಿಸುವ ಸಲುವಾಗಿ, ಆಹಾರ ಧಾನ್ಯ ವಿತರಣೆ ಅಥವಾ ಅಡುಗೆ ಅನಿಲ ಸಬ್ಸಿಡಿಗೆ ಅಗತ್ಯವಿರುವ ನಿರ್ಣಾಯಕ ವೆಚ್ಚವನ್ನು ಮೊಟಕುಗೊಳಿಸಲಾಗಿದೆ. ಸರ್ಕಾರಿ ಗೋದಾಮುಗಳಲ್ಲಿ

ಪುಟ 15 ಕ್ಕೆ

ಮೂರನೇ ಅಧಿಕಾರಾವಧಿ ಖಾತ್ರಿಪಡಿಸಲು ಎಷ್ಟೊಂದು ಕಸರತ್ತುಗಳು!

ಇದು ಅಮೃತ ಕಾಲ

‘ಸಂಕಲ್ಪ ಯಾತ್ರೆ’, ‘ರಥ ಪ್ರಭಾರಿ’ಗಳು, ‘ಸೆಲ್ಫಿ ಪಾಯಿಂಟು’ಗಳು, ‘ಸೆಲ್ಫಿ ಬೂತ್’ಗಳು–‘ಮನದ ಭೀತಿ’ಯ ಅಭಿವ್ಯಕ್ತಿಗಳು?

ಕೇಂದ್ರ ಸರಕಾರ ದೇಶಾದ್ಯಂತ ನವಂಬರ್ 20ರಿಂದ ಜನವರಿ 25, 2024ರ ವರೆಗೆ ‘ವಿಕಸಿತ್ ಭಾರತ್ ಸಂಕಲ್ಪ ಯಾತ್ರಾ’ ಎಂಬ ರೋಡ್ ಶೋ ಮಾಡಲು ನಿರ್ಧರಿಸಿದೆಯಂತೆ. ಇದನ್ನು ಕುರಿತಂತೆ ಅಕ್ಟೋಬರ್ 17ರಂದು ಒಂದು ಸುತ್ತೋಲೆ ಹೊರಡಿಸಿ ದೇಶದ ಎಲ್ಲ 765 ಜಿಲ್ಲೆಗಳಲ್ಲಿ ಜಂಟಿ ಕಾರ್ಯದರ್ಶಿ/ನಿರ್ದೇಶಕರು/ ಉಪ ಕಾರ್ಯದರ್ಶಿ ಹುದ್ದೆಯ ಅಧಿಕಾರಿಗಳನ್ನು “ಜಿಲ್ಲಾ ರಥ ಪ್ರಭಾರಿ”ಗಳನ್ನಾಗಿ ನೇಮಿಸಬೇಕು ಎಂದು ಆದೇಶ ಹೊರಡಿಸಲಾಗಿದೆಯಂತೆ. ಈ ‘ಯಾತ್ರೆ’ ಮತ್ತು ‘ರಥ’ಗಳು, ಅಮೃತ ಮಹೋತ್ಸವಕ್ಕಾಗಿ ಅಲ್ಲ, ‘ಕಳೆದ ಒಂಭತ್ತು ವರ್ಷಗಳ ಸಾಧನೆಗಳ ಆಚರಣೆ ಮತ್ತು ಪ್ರದರ್ಶನ’ಕ್ಕೆ ಮಾತ್ರ ಎಂದು ವರದಿಯಾಗಿದೆ.

ಇದಕ್ಕೆ ಎರಡು–ಮೂರು ವಾರಗಳ ಮೊದಲು ರಕ್ಷಣಾ ಸಚಿವಾಲಯ ಇದೇ ಉದ್ದೇಶಕ್ಕಾಗಿ ದೇಶಾದ್ಯಂತ ತನ್ನ ವ್ಯಾಪ್ತಿಗೆ ಬರುವ ಸ್ಥಳಗಳಲ್ಲಿ 822 ‘ಸೆಲ್ಫಿ ಪಾಯಿಂಟ್’ಗಳನ್ನು ನಿರ್ಮಿಸಲು ಮತ್ತು ಮತ್ತು ರೈಲ್ವೇ ಸಚಿವಾಲಯ ರೈಲ್ವೆ ನಿಲ್ದಾಣಗಳಲ್ಲಿ 3–ಡಿ ‘ಸೆಲ್ಫಿ ಬೂತ್’ಗಳನ್ನು ನಿರ್ಮಿಸಲು ನಿರ್ಧಾರ ಕೈಗೊಂಡಿದ್ದವು ಎಂದೂ ವರದಿಯಾಗಿದೆ.

ಗಮನಾರ್ಹ ಸಂಗತಿಯೆಂದರೆ ಕೊವಿಡ್–19 ಸರ್ಟಿಫಿಕೆಟ್‌ಗಳಲ್ಲಿ ಮತ್ತು ಜಿ–20 ಪ್ರಚಾರದಲ್ಲಿ ಇದ್ದಂತೆ ಈ ಬೂತ್‌ಗಳಲ್ಲಿ, ಪಾಯಿಂಟ್‌ಗಳಲ್ಲಿ ರಾರಾಜಿಸುವುದು ಪ್ರಧಾನಿ ಬಿಂಬಗಳೇ ಎಂದು ಒಬ್ಬ ವಿಶ್ಲೇಷಕರು ಟಿಪ್ಪಣಿ ಮಾಡಿದ್ದಾರೆ.

ರೈಲಂಗಣದಲ್ಲಿ ‘ಪ್ರಧಾನಿಯೊಂದಿಗೆ ಸೆಲ್ಫಿ’ ಬೂತುಗಳು

ರೈಲ್ವೆ ಮಂಡಳಿಯ ಮಾಹಿತಿ ಮತ್ತು ಪ್ರಚಾರ ನಿರ್ದೇಶಕರು ಈ ಕುರಿತು ಸಪ್ಟಂಬರ್ 27ರಂದು ರೈಲ್ವೆಯ ಎಲ್ಲ 19 ವಲಯ ಜನರಲ್ ಮ್ಯಾನೇಜರುಗಳಿಗೆ ಹೊರಡಿಸಿದ ನಿರ್ದೇಶನದಲ್ಲಿ ಗರಿಷ್ಟ ಸಂಖ್ಯೆಯಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ಈ ಕೆಲಸವನ್ನು ಅತ್ಯಂತ ತುರ್ತಿನಿಂದ ಕೈಗೊಳ್ಳಬೇಕು ಎಂದು ಹೇಳಿರುವುದಾಗಿ ವರದಿಯಾಗಿದೆ.

ಈ ‘ಸೆಲ್ಫಿ ಬೂತ್’ಗಳು ಹೇಗಿರಬೇಕು ಎಂಬುದರ ಡಿಸೈನ್ ವಿವರಗಳನ್ನೂ ರೈಲ್ವೆ ಮಂಡಳಿಯೇ ಕೊಟ್ಟಿದ್ದು, ಅವು ನೀರಿನ ಸಂಪರ್ಕ, ಗ್ರಾಮೀಣ ವಿದ್ಯುದೀಕರಣ, ಅಡುಗೆ ಅನಿಲ ಸಂಪರ್ಕ, ‘ಮೇಕ್ಇನ್ ಇಂಡಿಯ’ ಕೊವಿಡ್–19 ಲಸಿಕೆಗಳು, ಜತೆಗೆ ಇಸ್ರೋದಿಂದ ವಿದೇಶಿ ಉಪಗ್ರಹಗಳ ಉಡಾವಣೆ ಮುಂತಾದ ಮೋದಿ ಸರಕಾರದ ‘ಸಾಧನೆ’ಗಳನ್ನು ಬಿಂಬಿಸುವಂತಿರಬೇಕು ಎಂದು ವಿಧಿಸಲಾಗಿದೆ. ಈಗಾಗಲೇ ಈ ದಿಕ್ಕಿನಲ್ಲಿ ಎಲ್ಲ ರೈಲ್ವೆ ವಲಯಗಳಲ್ಲಿ ಕೆಲಸ ಆರಂಭವಾಗಿದೆ ಎಂದೂ ಹೇಳಲಾಗಿದೆ.

ರೈಲ್ವೆ ನಿಲ್ದಾಣಗಳ ಒಳಾಂಗಣಗಳಲ್ಲಿ, ಪ್ಲಾಟ್‌ಫಾರ್ಮ್‌ಗಳಲ್ಲಿ ಇವನ್ನು ನಿರ್ಮಿಸಲಾಗುತ್ತಿದ್ದು, ‘ನಯಾ ಭಾರತ್– ನ್ಯೂ ಇಂಡಿಯ’ ಎಂಬ ಫಲಕಗಳು ಮತ್ತು ಪ್ರಧಾನಿಗಳ ಕಟೌಟ್‌ಗಳೊಂದಿಗೆ ಜನಗಳು ಅವುಗಳೊಂದಿಗೆ ‘ಸೆಲ್ಫಿ’ ತೆಗೆದುಕೊಳ್ಳಲು ಅನುವಾಗುವಂತೆ ಇರಬೇಕು ಎಂದು ಇದರ ಡಿಸೈನ್ ವಿಧಿಸಿದೆ. ಈ ಸೆಲ್ಫಿ ಬೂತ್‌ಗಳನ್ನು ಬಾಳಿಕೆ ಬರುವ 3 ಆಯಾಮಗಳ ಬಹು ಬಾಳಿಕೆಯ ಫೈಬರ್ ಕಲಾಕೃತಿಗಳಿಂದ ಫೈಬರ್, ಮಣ್ಣು, ಎನ್‌ಐಎಸ್ ಪೈಪ್, ಕಬ್ಬಿಣದ ತಂತಿಗಳಿಂದ ಗಟ್ಟಿಗೊಳಿಸಿದ ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದವುಗಳಿಂದ ಮಾಡಬೇಕು ಎಂದು ರೈಲ್ವೆ ಮಂತ್ರಾಲಯದ ಆದೇಶದಲ್ಲಿ ತಿಳಿಸಲಾಗಿದೆಯಂತೆ.

ರಕ್ಷಣಾ ಇಲಾಖೆಯಲ್ಲೂ ಸೆಲ್ಫಿ ಪಾಯಿಂಟುಗಳು

ಇದಕ್ಕೂ ಸ್ವಲ್ಪ ಮೊದಲು, ಅಂದರೆ ಸಪ್ಟಂಬರ್ 14ರಂದು ರಕ್ಷಣಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಆ ಇಲಾಖೆಯ ಪರಾಮರ್ಶೆ ಸಭೆ ರಕ್ಷಣಾ ಮಂತ್ರಾಲಯದ ವಿವಿಧ ಕಚೇರಿಗಳು, ಸ್ಮಾರಕಗಳು, ಸಾರ್ವಜನಿಕ ತಾಣಗಳಲ್ಲಿ ತಮ್ಮ ಇಲಾಖೆಯ ವಿವಿಧ ವಿಭಾಗಗಳಲ್ಲಿ, ಸಂಘಟನೆಗಳಲ್ಲಿ, ಸೇವೆಗಳು, ರಕ್ಷಣಾ ಉದ್ದಿಮೆಯ ಘಟಕಗಳು, ಗಡಿ ರಸ್ತೆ ಸಂಘಟನೆ(ಬಿಆರ್‌ಒ)ಗಳು, ಕರಾವಳಿ ರಕ್ಷಣಾ ಪಡೆಗಳು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ(ಡಿಆರ್‌ಡಿಒ), ಸೈನಿಕ ಶಾಲೆಗಳು, ಎನ್‌ಸಿಸಿ ಮುಂತಾದೆಡೆ ಒಟ್ಟು 822 ಸ್ಥಳಗಳಲ್ಲಿ ರಕ್ಷಣಾ ಮಂತ್ರಾಲಯ ಕಳೆದ 9 ವರ್ಷಗಳಲ್ಲಿ ಮಾಡಿದ ಕೆಲಸಗಳನ್ನು ಬಿಂಬಿಸಲು ‘ಸೆಲ್ಫಿ ಪಾಯಿಂಟ್’ಗಳನ್ನು ನಿರ್ಮಿಸಲು ನಿರ್ಧರಿಸಿತು. ಇಲ್ಲಿಯೂ ಪ್ರಧಾನಿಗಳ ಒಂದು ಚಿತ್ರವಿದ್ದೇ ಇರುತ್ತದೆ, ಈ ಪಾಯಿಂಟುಗಳನ್ನು ಜನಗಳು ತಾವೂ ಈ ಸಾಧನೆಗಳ ಭಾಗ ಎನ್ನುವ ಭಾವನೆ ಬರುವಂತೆ ನಿರ್ಮಿಸಬೇಕು ಎಂದೂ ನಿರ್ಧರಿಸಲಾಗಿದೆಯಂತೆ. ಯುದ್ಧ ಸ್ಮಾರಕಗಳು, ರಕ್ಷಣಾ ಮ್ಯೂಸಿಯಂಗಳು, ರೈಲ್ವೆ ಮತ್ತು ಮೆಟ್ರೊ ನಿಲ್ದಾಣಗಳು, ಬಸ್ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಮಾಲ್‌ಗಳು, ಮಾರುಕಟ್ಟೆ ಸ್ಥಳಗಳು, ಶಾಲೆಗಳು, ಕಾಲೇಜುಗಳು, ಉತ್ಸವದ ಸ್ಥಳಗಳು, ಪ್ರವಾಸೀ ತಾಣಗಳು ಮುಂತಾದೆಡೆಗಳಲ್ಲಿ ಇವನ್ನು ಸ್ಥಾಪಿಸಲಾಗುವುದಂತೆ.

ಈ 822 ಸೆಲ್ಫಿ ಪಾಯಿಂಟುಗಳ ನಿರ್ಮಾಣದ ಕೋಟಾಗಳನ್ನೂ ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ರಕ್ಷಣಾ ಪಡೆಗಳ ಮುಖ್ಯಸ್ಥರ ನೇತೃತ್ವದ ಮಿಲಿಟರಿ ವ್ಯವಹಾರಗಳ ಇಲಾಖೆ 300, ಇವುಗಳಲ್ಲಿ ಭೂಸೇನೆ 100, ನೌಕಾಸೇನೆ ಮತ್ತು ವೈಮಾನಿಕ ಸೇನೆ ತಲಾ 75, ಮಿಲಿಟರಿ ಇಂಜಿನಿಯರಿಂಗ್ ಸರ್ವಿಸಸ್ ನವರು 50, ರಕ್ಷಣಾ ಕಾರ್ಯದರ್ಶಿಗಳ ನೇತೃತ್ವದ ರಕ್ಷಣಾ ಇಲಾಖೆಯ ಅಡಿಯಲ್ಲಿರುವ ವಿವಿಧ ಸಂಸ್ಥೆ–ಸಂಘಟನೆಗಳು 352, ರಕ್ಷಣಾ ಉತ್ಪಾದನಾ ವಿಭಾಗದ ಜಂಟಿ ಕಾರ್ಯಶಿಗಳ ನೇತೃತ್ವದಲ್ಲಿ ತಲಾ 20ರಂತೆ ಒಟ್ಟು 100, ಡಿಆರ್‌ಡಿಒ 50 ಮತ್ತು ಮಾಜಿ ಸೈನಿಕರ ಕಲ್ಯಾಣ ವಿಭಾಗ 20 ಸೆಲ್ಫಿ ಪಾಯಿಂಟುಗಳನ್ನು ನಿರ್ಮಿಸಬೇಕೆಂದು ತಿಳಿಸಲಾಗಿದೆ.

ಈ ಸೆಲ್ಫಿ ಪಾಯಿಂಟುಗಳನ್ನು ಹೇಗೆ ನಿರ್ಮಿಸಬೇಕು, ಯಾವ–ಯಾವ ವಿಷಯದ ಮೇಲೆ ನಿರ್ಮಿಸಬೇಕು ಇತ್ಯಾದಿಗಳ ಬಗ್ಗೆ ವಿವರವಾದ ನಿರ್ದೇಶನಗಳನ್ನು ಕೊಡಲಾಗಿದ್ದು ಈ ಕೆಲಸವನ್ನು ತಕ್ಷಣ ಆರಂಭಿಸಿ ‘ಕೈಗೊಂಡ ಕ್ರಮ’ಗಳ ವರದಿಗಳನ್ನು ಕಳಿಸಬೇಕು, ಇವೆಲ್ಲದಕ್ಕೆ ಒಂದು ಪ್ರತ್ಯೇಕ ಆಪ್, ಎಕ್ಸ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಇ–ಮೇಲ್, ವಾಟ್ಸ್–ಆಪ್ ಇತ್ಯಾದಿ ಸಾಮಾಜಿಕ ಮಾಧ್ಯಮ ವ್ಯವಸ್ಥೆಯನ್ನು ರೂಪಿಸಬೇಕು ಎಂದೂ ಪರಾಮರ್ಶೆ ಸಭೆಯಲ್ಲಿ ಸೂಚಿಸಲಾಗಿತ್ತು.

ವ್ಯಾಪಕ ಟೀಕೆಗಳು

ಇವೆಲ್ಲವೂ ಮುಂದಿನ ಎಪ್ರಿಲ್–ಮೇ 2024ರ ಸಾರ್ವತ್ರಿಕ ಚುನಾವಣೆಗಳಿಗೆ ಸರಕಾರೀ ವೆಚ್ಚದಲ್ಲಿ ಆಳುವ ಪಕ್ಷದ ಸಿದ್ಧತೆ ಎಂದು ಈ ಬಗ್ಗೆ ವ್ಯಾಪಕ ಟೀಕೆಗಳು ಬಂದಿವೆ. ಹಲವು ಹಿರಿಯ ನಿವೃತ್ತ ಸೇನಾಧಿಕಾರಿಗಳು ಇವು ಸರಕಾರೀ ಡಿಕ್ರಿಗಳ ಮೂಲಕ ಸಶಸ್ತ್ರ ಪಡೆಗಳನ್ನು ರಾಜಕೀಯಕರಣಗೊಳಿಸುವ ಪ್ರಯತ್ನಗಳು ಎಂದು ಬಲವಾಗಿ ಖಂಡಿಸಿದ್ದಾರೆ. ಇನ್ನೂ ಕಳವಳದ ಸಂಗತಿಯೆಂದರೆ, ಇಂತಹ ಕಸರತ್ತುಗಳಿಗೆ ಸೇನಾಪಡೆಗಳ ಉನ್ನತ ಅಧಿಕಾರಿಗಳ ಸಮ್ಮತಿಯೂ ಇರುವುದು. ಅವರು ತಮ್ಮ ರಾಜಕೀಯ ಬಾಸ್‌ಗಳನ್ನು ಸುಪ್ರೀತಗೊಳಿಸಲು ಇವನ್ನೆಲ್ಲ ಮಾಡುತ್ತಿರುವಂತೆ ಕಾಣುತ್ತದೆ ಎಂದು ಒಬ್ಬ ಉನ್ನತ ಹುದ್ದೆಯಲ್ಲಿ ನಿವೃತ್ತ ರಾದ ಸೇನಾಧಿಕಾರಿ ಖೇದ ಪಟ್ಟಿದ್ದಾರೆ.

ಸರಕಾರ ಮುಂಬರುವ ಚುನಾವಣೆಗಳಲ್ಲಿ ತನ್ನ ರಾಜಕೀಯ ಉದ್ದೇಶ ಸಾಧನೆಗಾಗಿ ಸೇನಾಪಡೆಗಳನ್ನು ದುರುಪಯೋಗಪಡಿಸಿಕೊಳ್ಳಲು



ಹೊರಟಿದೆ ಎಂದು ಇನ್ನೊಬ್ಬ ಸೇನಾಧಿಕಾರಿ ಬೇಸರ ವ್ಯಕ್ತಪಡಿಸಿದ್ದಾರೆ.

ಅಕ್ಟೋಬರ್ 17ರಂದು ಕೇಂದ್ರ ಸರಕಾರ ಹೊರಡಿಸಿದ ಸುತ್ತೋಲೆ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ಕೇಂದ್ರ ಸರಕಾರದ ಕಾರ್ಯದರ್ಶಿಯ ಉನ್ನತ ಹುದ್ದೆಯಿಂದ ನಿವೃತ್ತರಾಗಿರುವ ಹಿರಿಯ ಐಎಎಸ್ ಅಧಿಕಾರಿ ಇಎಎಸ್ ಶರ್ಮ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಏಕೆಂದರೆ ಈ ವೇಳಗೆ 5 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳಿಗಾಗಿ ನೀತಿ ಸಂಹಿತೆ ಜಾರಿಗೆ ಬಂದಿತ್ತು.

ರಕ್ಷಣಾ ಇಲಾಖೆ ಕೂಡ ತನ್ನ ಅಧಿಕಾರಿಗಳನ್ನು ‘ರಥ ಪ್ರಭಾರಿ’ಗಳಾಗಿ ನೇಮಕ ಮಾಡಬೇಕಾಗಿದ್ದು “ಎನ್‌ಡಿಎ ಸರಕಾರದ ಸಾಧನೆಗಳ ಪ್ರದರ್ಶನಕ್ಕೆ ರಕ್ಷಣಾ ಪಡೆಗಳ ಅಧಿಕಾರಿಗಳ ತಪ್ಪು ನಿಯೋಜನೆ ಗಂಭೀರ ಕಳವಳದ ಸಂಗತಿ. ದೀರ್ಘಕಾಲದಲ್ಲಿ ಇದು ಸೂಕ್ತವೆನಿಸದು” ಎಂದು ಅವರು ಹೇಳಿದ್ದಾರೆ.

ಇನ್ನೊಬ್ಬ ನಿವೃತ್ತ ಐಎಎಸ್ ಅಧಿಕಾರಿ ಎಂ ಜಿ ದೇವಸಹಾಯಂ ಕೂಡ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

“ಇದು ಅಭೂತಪೂರ್ವ ಕ್ರಮ. ನನ್ನ ಇಡೀ ನಾಗರಿಕ ಸೇವೆಯ ಅವಧಿಯಲ್ಲಿ ಇಂತಹದೊಂದನ್ನು ಕಂಡಿಲ್ಲ. ಇದು ನಾಗರಿಕ ಮತ್ತು ರಕ್ಷಣಾ ಸೇವೆಗಳ ರಾಜಕೀಯಕರಣ ಎಂದು ಬಗೆಯಲ್ಪಡುತ್ತದೆ. ಸರಕಾರದ ಕೆಲಸವನ್ನು ಪ್ರಚಾರ ಮಾಡಲು ಪ್ರತ್ಯೇಕ ಪ್ರಚಾರ ವಿಭಾಗಗಳೇ ಇವೆ. ಮುಂಬರುವ ರಾಜ್ಯ ಚುನಾವಣೆಗಳು ಮತ್ತು ನಂತರ 2024ರ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ನಾಗರಿಕ ಸೇವೆ ಮತ್ತು ರಕ್ಷಣಾ ಸಿಬ್ಬಂದಿಯನ್ನು ವಿಶೇಷ ಪ್ರಚಾರಗಳಿಗೆ ಬಳಸುವುದು ಸರಿಯಲ್ಲ” ಎಂದು ಮಾಜಿ ಸಂಪುಟ ಕಾರ್ಯದರ್ಶಿ ಬಿ.ಕೆ. ಚತುರ್ವೇದಿ ಹೇಳಿದ್ದಾರೆ.

ಒಂದೆಡೆಯಲ್ಲಿ ಎನ್‌ಎಸ್‌ಎಸ್‌ಒ, ಎನ್‌ಎಫ್‌ಎಚ್‌ಎಸ್ ನಂತಹ ಸಂಘಟನೆಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳಿಂದಾಗಿ ಅವುಗಳ ಮುಖ್ಯಸ್ಥರುಗಳು ರಾಜೀನಾಮೆ ಕೊಡುವಂತೆ ಮಾಡುತ್ತಿದ್ದರೆ, ಇನ್ನೊಂದೆಡೆಯಲ್ಲಿ ಸರಕಾರದ ಕೆಲಸಗಳ ಪ್ರಚಾರಕ್ಕೆ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತಿದೆ ಎಂದು ಮಾಜಿ ಯೋಜನಾ ಆಯೋಗದ ಸದಸ್ಯ ಎನ್‌ಸಿ. ಸಕ್ಸೇನಾ ಟಿಪ್ಪಣಿ ಮಾಡಿದ್ದಾರೆ.

ಒಟ್ಟಿನಲ್ಲಿ, ಕರ್ನಾಟಕದ ಮತದಾರರ ‘ಕೃಪೆ’ಯಿಂದ ‘ಮನದ ಮಾತಿ’ನ ಬದಲು ‘ಮನದ ಭೀತಿ’ ವ್ಯಕ್ತಗೊಳ್ಳುತ್ತಿದೆಯೇ?



ಎನ್‌ಸಿಇಆರ್‌ಟಿ ಯ ‘ಚಂದ್ರಯಾನ’ ಕುರಿತ ಪ್ರಕಟಣೆಯಲ್ಲೂ .....

‘ವಿಕಸಿತ್ ಭಾರತ್ ಸಂಕಲ್ಪ ಯಾತ್ರಾ’ ಕುರಿತ ಸುತ್ತೋಲೆಯನ್ನು ಪ್ರಕಟಿಸಿದ ದಿನವೇ, ಕೇಂದ್ರ ಶಿಕ್ಷಣ ಮಂತ್ರಿ ನವದೆಹಲಿಯಲ್ಲಿ ಚಂದ್ರಯಾನ–3 ಕುರಿತಂತೆ ಎನ್‌ಸಿಇಆರ್‌ಟಿ ಶಾಲಾ ಮಕ್ಕಳಿಗೆಂದು ಸಿದ್ಧಪಡಿಸಿದ 17 ಪುಟಗಳ ಒಂದಿ ಕಿರು ಪ್ರಕಟಣೆಯನ್ನು ಬಿಡುಗಡೆ ಮಾಡಿದರು. ಇಸ್ರೋದ ಅಧ್ಯಕ್ಷರೂ ಈ ಸಮಾರಂಭದಲ್ಲಿ ಹಾಜರಿದ್ದರು. ಆದರೂ ಈ ಪ್ರಕಟಣೆಯಲ್ಲೂ ಇಸ್ರೋಗಿಂತ ಹೆಚ್ಚಾಗಿ ಪ್ರಧಾನಿಗಳ ಗುಣಗಾನವೇ ಇದೆ ಎಂದು ವರದಿಯಾಗಿದೆ (ದಿ ಹಿಂದು, ಅ.25).


ಚಂದ್ರಯಾನದ ಯಶಸ್ಸಿನ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲೆಂದು ಪ್ರಕಟಿಸಿರುವ ಈ ಕಿರುಹೊತ್ತಿಗೆಯಲ್ಲಿ ವೇದಗಳ, ಪ್ರಾಚೀನ ವೈಮಾನಿಕ ಶಾಸ್ತ್ರ ಇತ್ಯಾದಿಗಳ ಕುರಿತ ಪ್ರಧಾನಿಗಳ ಉದ್ಧರಣೆಗಳೂ ಸೇರಿದಂತೆ ವಿಜ್ಞಾನ ಮತ್ತು ಪುರಾಣದ ಕಲಸುಮೇಲೋಗರವೇ ಹೆಚ್ಚು ಎಂದು ಹೇಳಲಾಗಿದೆ.

“ಈ ವೈಜ್ಞಾನಿಕ ಸಾಧನೆ ಈಗಷ್ಟೇ ನಡೆದಿದೆಯೇ?” ಎಂಬ ಪ್ರಧಾನಿಗಳ ಪ್ರಶ್ನೆಗೆ ಉತ್ತರವಾಗಿ ಇಸ್ರೋದ ಸುಮಾರು ಆರು ದಶಕಗಳ ಕೆಲಸ–ಕಾರ್ಯಗಳ ಒಂದು ನೋಟವನ್ನು ಕೊಡುವ ಬದಲು ನಮ್ಮ ಪ್ರಾಚೀನರಿಗೆ ಎಲ್ಲವೂ ಗೊತ್ತಿತ್ತು ಎಂಬ ಮನೋಭಾವವೇ ತುಂಬಿರುವ ಈ ಪ್ರಕಟಣೆಯ ಉದ್ದೇಶ ಶಾಲಾಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಬದಲು ‘ಕೇಸರಿ ಪಡೆಯ ಸಿದ್ಧಾಂತ’ವನ್ನು ತುರುಕುವುದೇ ಮುಖ್ಯವಾಗಿರುವಂತೆ ಕಾಣುತ್ತದೆ ಎಂದು ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು ಟೀಕಿಸಿದ್ದಾರೆ.

ಅಲ್ಲದೆ ಈ ಪ್ರಕಟಣೆಯಲ್ಲಿ ‘ಇಂಡಿಯಾ’ ಎಂದು ಬಳಸಬೇಕಾದ ಪ್ರತಿಯೊಂದು ಕಡೆಯೂ ‘ಭಾರತ್’ ಎಂದು ಬಳಸಲಾಗಿದೆ ಎಂದು ಕಂಡು ಬಂದಿದೆ. ಇದಾದ ನಂತರ ಇನ್ನು ಮುಂದೆ ಪಠ್ಯಪುಸ್ತಕಗಳಲ್ಲಿ ‘ಇಂಡಿಯಾ’ ಬದಲು ‘ಭಾರತ್’ ಎಂದೇ ಬಳಸಬೇಕು ಎಂದು ಎನ್‌ಸಿಇಆರ್‌ಟಿ ಶಿಫಾರಸು ಮಾಡಿದೆ ಎಂಬ ಸುದ್ದಿಯೂ ಪ್ರಕಟವಾಗಿದೆ.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್



ಕಾಂ. ವಿ.ಎಸ್. ಅಚ್ಯುತಾನಂದನ್ ರವರಿಗೆ ನೂರು ವರ್ಷ

ಈ ಅಕ್ಟೋಬರ್ 2, ಕೇರಳದಲ್ಲಿ ಜನಪರ ಹೋರಾಟಗಳ ಒಂದು ಸಂಕೇತವಾಗಿರುವ ಧೀಮಂತ ಕಮ್ಯುನಿಸ್ಟ್ ವಿ.ಎಸ್. ಅಚ್ಯುತಾನಂದನ್ ರವರ 100ನೇ ಜನ್ಮದಿನ. ಅಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರಲ್ಲದೆ ಕೇರಳದ ಸಾಮಾಜಿಕ-ರಾಜಕೀಯ ವಲಯದ ಎಲ್ಲರೂ ಎಡ-ಬಲ ಎಂಬ ವ್ಯತ್ಯಾಸವಿಲ್ಲದೆ ಅವರಿಗೆ ಶುಭಾಶಯಗಳನ್ನು ಕೋರಿದರು.

ವಿ.ಎಸ್. ಅಚ್ಯುತಾನಂದನ್ 1964 ರಲ್ಲಿ ಸಿಪಿಐ ರಾಷ್ಟ್ರೀಯ ಮಂಡಳಿಯಿಂದ ಹೊರನಡೆದು ಸಿಪಿಐ(ಎಂ) ರಚಿಸಿದ 32 ನಾಯಕರಲ್ಲಿ ಒಬ್ಬರು. ಆಗ ಅವರೊಂದಿಗೆ ಇದ್ದ ತಮಿಳುನಾಡಿನ ಹಿರಿಯ ಕಮ್ಯುನಿಸ್ಟ್ ಮುಖಂಡ ಎನ್ ಶಂಕರಯ್ಯ, ಕಮ್ಯುನಿಸ್ಟ್ ಆಂದೋಲನಕ್ಕೆ ಅವರ ಕೊಡುಗೆಗಳು ಸದಾ ಸ್ಫೂರ್ತಿಯ ಸೆಲೆ ಎನ್ನುತ್ತ ಅವರಿಗೆ ಉತ್ತಮ ಆರೋಗ್ಯ ಮತ್ತು ಸಂತೋಷದ ಶುಭಾಶಯ ಕೋರಿದರು.

ಸದ್ಯ ದೀರ್ಘ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ಅಚ್ಯುತಾನಂದನ್ ರವರನ್ನು ಅವರ ಮನೆಯಲ್ಲಿ ಭೇಟಿ ಮಾಡಿದ ಪಿಣರಾಯಿ ವಿಜಯನ್ ಐಕ್ಯ ಕೇರಳದ ರಚನೆಯಲ್ಲಿ ವಿ.ಎಸ್. ರಂತವರ ಕಾಣಿಕೆಗಳಿಗೆ ಸರಿಸಾಟಿ ಬೇರೆ ಇಲ್ಲ ಎಂದರು. ರಾಜಪ್ರಭುತ್ವ, ಊಳಿಗಮಾನ್ಯ ಪದ್ಧತಿ ಹಾಗೂ ವಸಾಹತುಶಾಹಿ ಶೋಷಣೆಯ ವಿರುದ್ಧ ಅವರ ಹೋರಾಟಗಳು ಕೇರಳದ ರಚನೆಯಾಗುವುದಕ್ಕಿಂತ ಮುಂಚೆಯೇ ಪ್ರಾರಂಭವಾಗಿದ್ದವು; ಮುಖ್ಯಮಂತ್ರಿಯಾಗಿಯೂ ಪ್ರತಿಪಕ್ಷದ ಮುಖಂಡರಾಗಿಯೂ ಅವರ ಪಾತ್ರ ಸ್ಮರಣೀಯ ಎಂದು ಅವರು ಹೇಳಿದರು.

ಸೀತಾರಾಂ ಯೆಚೂರಿ ಅವರಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತ, ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತವಾದ ಸಮಾಜಕ್ಕಾಗಿ ಜನರ ಹೋರಾಟಗಳಿಗೆ ನೇತೃತ್ವದ ಒಂದು ಶತಮಾನದ ಅವರ ಬದುಕು ಸಮಾಜವಾದಕ್ಕೆ ಅವರ ಬದ್ಧತೆಯನ್ನು ಸೂಚಿಸುತ್ತದೆ ಎಂದರು..

ವಿ.ಎಸ್. ರವರ ಎಂಟು ದಶಕಗಳ ಸುದೀರ್ಘ ರಾಜಕೀಯ ಜೀವನ ಕೇರಳದ ಇತಿಹಾಸದಲ್ಲಿ ನಿರ್ಣಾಯಕವಾಗಿರುವ ಕಾಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್ ಒತ್ತಿ ಹೇಳಿದರು.

ಈ ಸಂದರ್ಭದಲ್ಲಿ ಚಿಂತಾನ ಪ್ರಕಾಶನ ಪ್ರಕಟಿಸಿರುವ ವಿ.ಎಸ್. ಅಚ್ಯುತಾನಂದನ್ ಅವರ ಜೀವನ ಚರಿತ್ರೆ "ಹೋರಾಟಗಳ 100 ವರ್ಷಗಳು" ಪುಸ್ತಕವನ್ನು ಪಿಣರಾಯಿ ವಿಜಯನ್ ಸಮಾರಂಭವೊಂದರಲ್ಲಿ ಲೋಕಾರ್ಪಣೆ ಮಾಡಿದರು. ಕೆ.ವಿ.ಸುಧಾಕರನ್ ಇದನ್ನು ರಚಿಸಿದ್ದಾರೆ.



ದೈತ್ಯ ಕಾರ್ಪೊರೇಟ್‌ಗಳೊಂದಿಗೆ ಸಹಯೋಗ ಒಪ್ಪಂದಗಳು ಹಿಂಬಾಗಿಲಿನಿಂದ ಕರಾಳ ಕೃಷಿ ಕಾಯ್ದೆಗಳನ್ನು ತರುವ ಹುನ್ನಾರ: ಬೇಯರ್ ನೊಂದಿಗೆ ಐಸಿಎಆರ್ ನ ಎಂ.ಒ.ಯು. ರದ್ದು ಮಾಡಲು ಎಐಕೆಎಸ್ ಆಗ್ರಹ

ದೊಡ್ಡ ಉದ್ಯಮಿಗಳ ಲಾಭದ ದುರಾಸೆಗೆ ಅನುಕೂಲ ಕಲ್ಪಿಸಿಕೊಡುವ, ಅದಕ್ಕಾಗಿ ರೈತರ ಲೂಟಿ ಮತ್ತು ಶೋಷಣೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಮೋದಿ ಆಡಳಿತದ ಚಾಳಿ ಮತ್ತೊಮ್ಮೆ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಬೇಯರ್ ನಡುವೆ ಇತ್ತೀಚೆಗೆ ಸಹಿ ಹಾಕಲಾದ ತಿಳುವಳಿಕೆ ಪತ್ರದಲ್ಲಿ (ಎಂಒಯು) ಸ್ಪಷ್ಟವಾಗಿ ಕಂಡು ಬಂದಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.

ಬೇಯರ್ ಒಂದು ದೊಡ್ಡ ಬಹುರಾಷ್ಟ್ರೀಯ ಕೃಷಿ ವ್ಯಾಪಾರದ ಕಂಪನಿ. ಕೃಷಿಯಲ್ಲಿನ ದೇಶದ ಅತ್ಯುನ್ನತ ಸಾರ್ವಜನಿಕ ವಲಯದ ಸಂಶೋಧನಾ ಸಂಸ್ಥೆಯಾದ ಐಸಿಎಆರ್ ಈ ಎಂಒಯು ಮತ್ತು ಅದರಿಂದಾಗಿ ಏರ್ಪಡುವ ಸಾಂಸ್ಥಿಕ ಪಾಲುದಾರಿಕೆಯು "ಸಣ್ಣ ಹಿಡುವಳಿದಾರ ರೈತರನ್ನು ಸಬಲೀಕರಣಗೊಳಿಸುವ" ಶ್ರದ್ಧಾಪೂರ್ವಕ ಪ್ರಯತ್ನ ಎಂಬ ಹುಸಿ ಕಥನವನ್ನು ರಚಿಸುತ್ತಿದೆ. ಕುತೂಹಲದ ಸಂಗತಿಯೆಂದರೆ ,ಈ ಮೂಲಕ ಐಸಿಎಆರ್ ಕಾರ್ಪೊರೇಟ್ ದೈತ್ಯರೊಂದಿಗೆ ಸಹಯೋಗ ಮಾಡುವ ಮೂಲಕ ಸಣ್ಣ ರೈತರನ್ನು ಸಬಲೀಕರಣಗೊಳಿಸಲಾಗುತ್ತದೆ ಎಂದು ಜೂನ್ 2023 ರಲ್ಲಿ ಇ-ಕಾಮರ್ಸ್ ದೈತ್ಯ ಅಮೆಜಾನ್ ಕಿಸಾನ್‌ನೊಂದಿಗೆ ಎಂಒಯು ಮಾಡಿಕೊಂಡಾಗ ತಾನೇ ಹೇಳಿದ್ದನ್ನು ತಾನೇ ನಕಲು ಮಾಡಿದಂತಾಗಿದೆ ಎಂದು ಎಐಕೆಎಸ್ ಹೇಳಿದೆ. ಆ ಎಂಒಯು "ಅತ್ಯುತ್ತಮ ಇಳುವರಿ ಮತ್ತು ಆದಾಯಕ್ಕಾಗಿ ವಿವಿಧ ಬೆಳೆಗಳ ವೈಜ್ಞಾನಿಕ ಕೃಷಿಯ ಕುರಿತು ರೈತರಿಗೆ ಮಾರ್ಗದರ್ಶನ ನೀಡಲು" ಎಂದು ಹೇಳಲಾಗಿತ್ತು.

ಬೇಯರ್‌ನೊಂದಿಗಿನ ಸಹಯೋಗದ ಒಪ್ಪಂದವು "ಬೆಳೆಗಳು, ಪ್ರಭೇದಗಳು, ಬೆಳೆ ರಕ್ಷಣೆ, ಕಳೆ ಮತ್ತು ಯಾಂತ್ರೀಕರಣಕ್ಕಾಗಿ ಸಂಪನ್ಮೂಲ-ಸಮರ್ಥ, ಹವಾಮಾನ-ಸ್ಥಿತಿಸ್ಥಾಪಕ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದು. ಈ ಸಹಯೋಗವು ವ್ಯವಸ್ಥೆಯ ವಿಧಾನದಲ್ಲಿ ರೈತರಿಗೆ ಗುಣಮಟ್ಟದ ಕೃಷಿ ಲಾಗುವಾಡುಗಳು ಮತ್ತು ಸಲಹಾ ಸೇವೆಗಳನ್ನು ಒದಗಿಸುವ ಮೂಲಕ ಕೃಷಿ ಸುಸ್ಥಿರತೆ ಕಾರ್ಯಕ್ರಮದ ಪ್ರಯತ್ನಗಳಲ್ಲಿ ಒಟ್ಟಾಗಿ ಕೆಲಸ ಮಾಡಲು ಗಮನ ಕೇಂದ್ರೀಕರಿಸುತ್ತದೆ" ಎನ್ನಲಾಗಿದೆ.

ದಾಳಿಂಬೆ ಕೃಷಿ ಮತ್ತು "ಡ್ರೋನ್ ಆಧಾರಿತ ಆಲೂಗಡ್ಡೆ ಬೆಳೆ ನಿರ್ವಹಣೆ ತಂತ್ರಜ್ಞಾನಗಳ ಅಭಿವೃದ್ಧಿ" ಕುರಿತು ಐಸಿಎಆರ್ ಮತ್ತು ಬೇಯರ್ ನಡುವೆ ಇದೇ ರೀತಿಯ ಸಂಶೋಧನಾ ಸಹಯೋಗದ ಎಂಒಯುಗಳು ಇದಕ್ಕೂ ಮುನ್ನ ನಡೆದವು.

ಈ ಎಂಒಯುಗಳ ಪಠವನ್ನು ಮತ್ತು ಲಭ್ಯವಿರುವ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವನ್ನು ಐಸಿಎಆರ್ ಬಗ್ಗೆ ಸಂಚಿತಗೊಂಡಿರುವ ಸಾರ್ವಜನಿಕ ವಿಶ್ವಾಸಾರ್ಹತೆ, ಅದರ ವಿಶಾಲ ಜಾಲ ಮತ್ತು ಸಂಪನ್ಮೂಲಗಳನ್ನು ಕುಶಲತೆಯಿಂದ ಬಳಸಿಕೊಂಡು ಕೃಷಿ ಅರ್ಥವ್ಯವಸ್ಥೆಯಲ್ಲಿ ಆಳವಾದ ನುಗ್ಗಲಿಕ್ಕಾಗಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿದು ಬರುತ್ತದೆ. ಇದು ಕಾರ್ಪೊರೇಟ್-ಪರವಾದ ಕರಾಳ ಕೃಷಿ ಕಾನೂನುಗಳ ಮೂಲಕ ಉಂಟುಮಾಡಬೇಕೆಂದಿದ್ದ ಪರಿಣಾಮಗಳನ್ನು ಹಿಂಬಾಗಿಲ ಮೂಲಕ ತಂದು ಕಾರ್ಪೊರೇಟ್ ಲಾಭಗಳನ್ನು ಗರಿಷ್ಠಗೊಳಿಸುವ ಒಂದು ಚಾಣಾಕ್ಷ ಪ್ರಯತ್ನವಾಗಿರುವುದೂ ಕಾಣಬರುತ್ತದೆ ಎಂದು ಎಐಕೆಎಸ್ ಹೇಳಿದೆ.

ಪ್ರಧಾನಿ ಮೋದಿ ಒಂದೆಡೆಯಲ್ಲಿ ತಮ್ಮ 'ದಷ್ಟ-ಪುಷ್ಟ' ರಾಷ್ಟ್ರೀಯವಾದಕ್ಕೆ ಪುರಾವೆಯಾಗಿ "ಆತ್ಮ ನಿರ್ಭರ ಭಾರತ್" ಅನ್ನು ಮೆರೆಸಬಯಸುತ್ತಿದ್ದರೆ, ಮತ್ತೊಂದೆಡೆಯಲ್ಲಿ ಅವರು ಸಾರ್ವಜನಿಕ ಕೃಷಿ ಸಂಶೋಧನೆಗೆ ಹಣವನ್ನು ತೀವ್ರವಾಗಿ ಕಡಿತ ಮಾಡುವ ಮೂಲಕ ಐಸಿಎಆರ್ ಮತ್ತು ರೈತರ 'ಆತ್ಮನಿರ್ಭರತೆ'(ಸ್ವಾವಲಂಬನೆ)ಯನ್ನು ನಾಶಪಡಿಸುತ್ತಿದ್ದಾರೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಉದಾಹರಣೆಗೆ, 2020-21 ರ ಹಣಕಾಸು ವರ್ಷದಲ್ಲಿ, ಕೇಂದ್ರ ಸರ್ಕಾರವು ಐಸಿಎಆರ್ ಗೆ ಕೇವಲ 7,762 ಕೋಟಿ ರೂ. ನೀಡಿದೆ. ಈ ಮೋದಿ ವರ್ಷಗಳಲ್ಲಿ "ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ" ಎಂಬ ನವ ಉದಾರವಾದಿ ಮಂತ್ರಕ್ಕೆ ಅನುಗುಣವಾಗಿ ಸಾಮಾನ್ಯ ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಕೃಷಿ ವಲಯಕ್ಕೆ ನಿಧಿ ಹಂಚಿಕೆ ಕಡಿಮೆಯಾಗುತ್ತ ಬಂದಿರುವುದು ಕಾಣಬರುತ್ತದೆ. ಸರಕಾರದಿಂದ ಹಣ ನೀಡಿಕೆಯು ಅಸಮರ್ಪಕ ವಾಗಿರುವುದರಿಂದಾಗಿ ಐಸಿಎಆರ್ ಕಾರ್ಯನಿರ್ವಹಣೆಯ ಕತ್ತು ಹಿಸುಕಲಾಗುತ್ತಿದೆ ಎಂಬುದು ಸ್ಪಷ್ಟವಾಗಿದೆ.

ಈ ಗಂಭೀರ ಕೊರತೆಯನ್ನು ಪರಿಹರಿಸುವ ಬದಲು, ಮೋದಿ ಸರ್ಕಾರವು ಕ್ಯಾನ್ಸರ್ ಮತ್ತು ಇತರ ಕಾಯಿಲೆಗಳಿಗೆ ಕಾರಣವಾಗುವ ವಿಷಕಾರಿ ರಾಸಾಯನಿಕಗಳನ್ನು ಉತ್ತೇಜಿಸುವಲ್ಲಿ ಕುಖ್ಯಾತವಾಗಿರುವ ಮತ್ತು ಹಲವಾರು ಕಾನೂನು ದಾವೆಗಳನ್ನು ಎದುರಿಸುತ್ತಿರುವ ಬೇಯರ್‌ನೊಂದಿಗೆ ಸಹಕರಿಸಲು ನಿರ್ಧರಿಸಿದೆ. ಬೇಯರ್ ನ ವ್ಯವಹಾರಗಳು ಪ್ರಮುಖವಾಗಿ ವಿಷಕಾರಿ, ರೋಗಕಾರಕ ಕೃಷಿರಾಸಾಯನಿಕಗಳ ಮಾರಾಟಕ್ಕೆ ಸಂಬಂಧಪಟ್ಟವುಗಳು. ಮೊನ್ಸಾಂಟೊವನ್ನು ಸ್ವಾಧೀನಪಡಿಸಿಕೊಳ್ಳುವುದರೊಂದಿಗೆ, ಇದು ಜಾಗತಿಕ ಬೀಜ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿದೆ. ಐಸಿಎಆರ್ ಜೊತೆಗಿನ ಸಹಯೋಗವು ಅದಕ್ಕೆ ಮಾನ್ಯತೆಯನ್ನು ಪಡೆಯಲು ಮತ್ತು ಲಾಭ ಗಳಿಸಲು ದೊಡ್ಡ ಮಾರುಕಟ್ಟೆಯನ್ನು ತೆರೆಯಲು ಪ್ರಚಂಡ ಅವಕಾಶಗಳನ್ನು ನೀಡುತ್ತದೆ ಎಂದು ಎಐಕೆಎಸ್ ವಿಶ್ಲೇಷಿಸಿದೆ.

ಎಲ್ಲಾ ಕಾರ್ಪೊರೇಟ್ ದೈತ್ಯರೊಂದಿಗೆ ಐಸಿಎಆರ್ ಸಹಿ ಮಾಡಿದ ಎಂಒಯುಗಳನ್ನು ಕೇಂದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಬೇಕು ಮತ್ತು ಕಾರ್ಪೊರೇಟ್‌ಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಾರ್ವಜನಿಕ ಸಂಸ್ಥೆಗಳನ್ನು ಬಳಸುವುದನ್ನು ತಡೆಯಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಪಡಿಸಿದೆ. ಇದಕ್ಕೆ ಬದಲಾಗಿ, ಇಂದು ಭಾರತೀಯ ಕೃಷಿ ಎದುರಿಸುತ್ತಿರುವ ಗಂಭೀರ ಸವಾಲುಗಳನ್ನು ಎದುರಿಸಲು ಕೃಷಿ ಸಂಶೋಧನೆಗೆ ಸಾರ್ವಜನಿಕ ಹಣ ನೀಡಿಕೆಯನ್ನು ಹೆಚ್ಚಿಸಬೇಕು. ರೈತರು, ವಿಜ್ಞಾನಿಗಳ ಸಮುದಾಯ ಮತ್ತು ಸಾರ್ವಜನಿಕ ಬುದ್ಧಿಜೀವಿಗಳು ಎತ್ತಿರುವ ಎಲ್ಲಾ ಕಾಳಜಿಗಳನ್ನು ಕೇಂದ್ರ ಸರ್ಕಾರವು ಪರಿಹರಿಸಬೇಕು ಎಂದಿರುವ ಎಐಕೆಎಸ್ ಕೃಷಿಯ ಕಾರ್ಪೊರೇಟೀಕರಣದ ಎಲ್ಲಾ ಪ್ರಯತ್ನಗಳನ್ನು ಪಟ್ಟು ಹಿಡಿದು ವಿರೋಧಿಸಲಾಗುವುದು ಎಂದು ಎಚ್ಚರಿಸಿದೆ.

ಸಲಿಂಗ ವಿವಾಹಗಳನ್ನು............ ಪುಟ 10 ರಿಂದ

ಸಂಬಂಧದಲ್ಲಿರುವ ಲಿಂಗಾತೀತ /ಲಿಂಗ ಪರಿವರ್ತಿತ ವ್ಯಕ್ತಿಗಳು (ಟ್ರಾನ್ಸ್ ಜೆಂಡರ್ ಪರ್ಸನ್ಸ್) ಅಸ್ತಿತ್ವದಲ್ಲಿರುವ ಕಾನೂನುಗಳ ಅಡಿಯಲ್ಲಿ ಮದುವೆಯಾಗಲು ಸ್ವಾತಂತ್ರ್ಯ ಮತ್ತು ಹಕ್ಕನ್ನು ಹೊಂದಿದ್ದಾರೆ ಎಂದು ತೀರ್ಪು ಗುರುತಿಸಿತು. ಇದರರ್ಥ ಲಿಂಗಾತೀತ ಗಂಡಸು (ಟ್ರಾನ್ಸ್ ಮನ್)ಒಬ್ಬ ಲಿಂಗಾತೀತ ಮಹಿಳೆಯನ್ನು (ಟ್ರಾನ್ಸ್ ವುಮನ್) ಮದುವೆಯಾಗಬಹುದು; ಹುಟ್ಟುಮಹಿಳೆ (ಸಿಸ್-ವುಮನ್) ಲಿಂಗಾತೀತ ಅಥವ ಲಿಂಗ ಪರಿವರ್ತಿತ ಪುರುಷನನ್ನು ಮದುವೆಯಾಗಬಹುದು ಮತ್ತು ಹುಟ್ಟು-ಪುರುಷ ಲಿಂಗಾತೀತ ಅಥವ ಲಿಂಗ ಪರಿವರ್ತಿತ ಮಹಿಳೆಯನ್ನು (ಟ್ರಾನ್ಸ್ ವುಮನ್) ಮದುವೆಯಾಗಬಹುದು.

ನ್ಯಾಯಮೂರ್ತಿ ಚಂದ್ರಚೂಡ್ ಅವರ ಅಲ್ಪಮತದ ತೀರ್ಪು ಅರ್ಜಿದಾರರಿಗೆ ನೀಡಿದ ಒಂದು ಒಳ್ಳೆಯ ಪರಿಹಾರವೆಂದರೆ ದತ್ತು ನಿಯಮಗಳ 5(3) ನಿಯಮವು ಜೆಜೆ (ಅಪ್ರಾಪ್ತ ವಯಸ್ಕರಿಗೆ ಸಂಬಂಧಪಟ್ಟ ನ್ಯಾಯ)ಕಾಯಿದೆ ಮತ್ತು ಸಂವಿಧಾನದ ಕಲಮು 14 ಮತ್ತು 15 ರಲ್ಲಿ ಅಡಿಯಲ್ಲಿ ಕಾನೂನುಬದ್ಧವಲ್ಲ ಎನ್ನುತ್ತ ಅವಿವಾಹಿತ ದಂಪತಿಗಳು (ವಿಲಕ್ಷಣ ದಂಪತಿಗಳು ಸೇರಿದಂತೆ) ಅರ್ಜಿದಾರರಿಗೆ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಹಕ್ಕನ್ನು ನೀಡಿರುವುದು. ಅಲ್ಪಮತದ ತೀರ್ಪು ನಿಯಮ 5(3)ರ ಅಡಿಯಲ್ಲಿನ 'ವೈವಾಹಿಕ' ಪದವನ್ನು ಹೊರತು ಪಡಿಸಿದೆ ಮತ್ತು ಮತ್ತು ಕ್ವೀರ್ ಜೋಡಿಗಳನ್ನು ಸೇರಿದಂತೆ ವಿವಾಹಿತ ಮತ್ತು ಅವಿವಾಹಿತ ಜೋಡಿಗಳೂ ಎಂದು ಅರ್ಥ ಸೂಚಿಸಿದೆ. ಮುಖ್ಯ ನ್ಯಾಯಮೂರ್ತಿಗಳು ಮತ್ತು ನ್ಯಾಯಮೂರ್ತಿ ಕೌಲ್ ಅವರ ಅಲ್ಪಮತದ ತೀರ್ಪು ಕೂಡ 2022 ರ CARA (ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ) ಸುತ್ತೋಲೆಯು ಸಹ-ಜೀವನ(ಲಿವ್-ಇನ್) ಸಂಬಂಧದಲ್ಲಿರುವ ದಂಪತಿಗಳನ್ನು ದತ್ತು ಪಡೆಯಲು ಅನರ್ಹಗೊಳಿಸಿರುವುದು ಸಂವಿಧಾನದ ಕಲಮು 15 ರ ಉಲ್ಲಂಘನೆಯಾಗಿದೆ ಎಂದಿದೆ. ಆದರೆ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಈ ಹಕ್ಕನ್ನು ಸಹ ಬಹುಮತದ ತೀರ್ಪು ನಿರಾಕರಿಸಿದೆ.

ಈ ತೀರ್ಪು ಕೇವಲ ನಿರಾಶಾದಾಯಕವಾಗಿದೆಯಷ್ಟೇ ಅಲ್ಲ, ಆದರೆ ಐಊಃಖಿಕಿ+ ಸಮುದಾಯದ ಸಹಾಯಕ್ಕೆ ಬರಲು ಮತ್ತು ದೇಶದ ಸಮಾನ ನಾಗರಿಕರಾಗಿ ಅವರಿಗೆ ದೊರಕಬೇಕಾದ ಹಕ್ಕುಗಳನ್ನು ನೀಡುವ ಅವಕಾಶವನ್ನು ನ್ಯಾಯಾಲಯ ತಪ್ಪಿಸಿಕೊಂಡಿದೆ ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸರ್ಕಾರವು ರಚಿಸುವ ಸಮಿತಿಯು ನಮ್ಮ ದೇಶದಲ್ಲಿ ಭಿನ್ನಲಿಂಗೀಯ ದಂಪತಿಗಳು ಅನುಭವಿಸುವ ಎಲ್ಲಾ ಹಕ್ಕುಗಳನ್ನು LGBTQ+ಸಮುದಾಯಕ್ಕೆ ನೀಡಬೇಕು ಎಂದು ಆಗ್ರಹಿಸಿದೆ.



ಗಾಜಾ ಬಾಂಬ್ ದಾಳಿ ಮೂರು ವಾರಗಳನ್ನು ದಾಟುತ್ತಿದೆ. ಗಾಜಾ ಗಡಿಯಲ್ಲಿ ಇಸ್ರೇಲ್ ಪಡೆ ಪೂರ್ಣ ಭೂಯುದ್ಧ ಕ್ಕೆ ಸಜ್ಜಾಗಿ ನಿಂತಿದೆ. ಈ ಸಂದರ್ಭದಲ್ಲಿ ಗಾಜಾ ಕುರಿತು ಇನ್ನಷ್ಟು ಪ್ರಶ್ನೆಗಳು ಎದ್ದಿವೆ – ಗಾಜಾದಲ್ಲಿ ಈಗ ಏನಾಗುತ್ತಿದೆ? ವಿಶ್ವಸಂಸ್ಥೆ ಮತ್ತು ಅಂತರ್ರಾಷ್ಟ್ರೀಯ ಪ್ರತಿಕ್ರಿಯೆ ಏನು? ಗಾಜಾ ಯುದ್ಧ ಇಡೀ ಪ್ರದೇಶಕ್ಕೆ ವ್ಯಾಪಿಸುವ ಅಪಾಯ ಇದೆಯಾ?, ಗಾಜಾ ಭೂ ಯುದ್ಧವನ್ನು ಇಸ್ರೇಲ್ ಗೆಲ್ಲಬಹುದಾ? ಇದಕ್ಕೆ ಉತ್ತರ ಹುಡುಕುವ ಪ್ರಯತ್ನದಲ್ಲಿ ಬರುವ ಇನ್ನಷ್ಟು ದೊಡ್ಡ ಪ್ರಶ್ನೆ –ಗಾಜಾದಲ್ಲಿ ಯುದ್ಧ ಅಪರಾಧಗಳ ಸರಣಿ ನಡೆಯುತ್ತಿದೆಯೇ, ಮುಂದುವರೆಯಲಿದೆಯೇ?

ಗಾಜಾದಲ್ಲಿ ಯುದ್ಧ ಅಪರಾಧಗಳ ಸರಣಿ ನಡೆಯುತ್ತಿದೆಯೇ?

ಗಾಜಾದಲ್ಲಿ ಈಗ ಏನಾಗುತ್ತಿದೆ?

ಗಾಜಾದ ಮೇಲೆ ಇಸ್ರೇಲ್ ನಿರಂತರ ಬಾಂಬ್ ದಾಳಿ ಮುಂದುವರೆದಿದೆ. ಅಕ್ಟೋಬರ್ 26 ರ ಹೊತ್ತಿಗೆ ಗಾಜಾದಲ್ಲಿ ಬಾಂಬ್ ದಾಳಿಯಲ್ಲಿ ಸತ್ತವರ ಸಂಖ್ಯೆ 7000 ದಾಟಿದೆ. ಇವರಲ್ಲಿ ಸುಮಾರು ಅರ್ಧದಷ್ಟು ಮಕ್ಕಳು. ಸುಮಾರು ಶೇ.80 ಹೆಂಗಸರು ಮತ್ತು ಮಕ್ಕಳು. ಗಾಯಗೊಂಡವರ ಸಂಖ್ಯೆ 20,000 ದಾಟಿದೆ. 12 ಸಾವಿರ ಟನ್ ಬಾಂಬುಗಳನ್ನು ಹಾಕಲಾಗಿದೆ. ಇದು ವಿನಾಶದ ಮಟ್ಟಿಗೆ ಹಿರೋಷಿಮಾ ದ ಮೇಲೆ ಹಾಕಲಾದ ಬಾಂಬುಗಳಿಗೆ ಸಮಾನವೆನ್ನಲಾಗಿದೆ. ನಿಷೇಧಿತ ಪಾಸ್ಫರ್ ಬಾಂಬುಗಳನ್ನು ಹಾಕಲಾಗಿದೆ. ಅರ್ಧದಷ್ಟು ಮನೆಗಳು ಪೂರ್ಣವಾಗಿ ನಾಶವಾಗಿವೆ ಇಲ್ಲವೆ ಬಿರುಕು ಬಿಟ್ಟು ವಾಸಯೋಗ್ಯವಿಲ್ಲ. ಆಸ್ಪತ್ರೆಗಳಲ್ಲಿ ಮೂರನೇ ಒಂದು ಭಾಗದಷ್ಟು ನಾಶವಾಗಿವೆ ಅಥವಾ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ. 24 ಪತ್ರಕರ್ತರು ಬಾಂಬ್ ದಾಳಿಗಳಲ್ಲಿ ಸತ್ತಿದ್ದಾರೆ. ಅಲ್ ಜಜೀರಾ ಬ್ಯುರೊ ಮುಖ್ಯಸ್ಥರು ಇಡೀ ಕುಟುಂಬ ಬಾಂಬ್ ದಾಳಿಯಲ್ಲಿ ಸತ್ತಿದ್ದಾರೆ.

ಸುಮಾರು 10 ಲಕ್ಷ ಜನ ನಿರಾಶ್ರಿತರಾಗಿದ್ದಾರೆ. ಇವರಲ್ಲಿ 6 ಲಕ್ಷಕ್ಕೂ ಹೆಚ್ಚು ಜನ 150 ವಿಶ್ವಸಂಸ್ಥೆ ನಡೆಸುವ ಕ್ಯಾಂಪುಗಳಲ್ಲಿ ವಾಸಿಸುತ್ತಿದ್ದಾರೆ. ದಕ್ಷಿಣದ ಭಾಗಗಳಿಗೆ ವಲಸೆ ಹೋಗುತ್ತಿರುವವರ ಮೇಲೂ ಬಾಂಬ್ ದಾಳಿಗಳಾಗಿವೆ. ಗಾಜಾದ ಮೇಲೆ ಇಸ್ರೇಲ್ ದಿಗ್ಬಂಧನ ಮುಂದುವರೆದಿದ್ದು ನೀರು. ವಿದ್ಯುತ್, ತೈಲ ಇಂಧನ, ಆಹಾರ, ಔಷಧಿ ಸಾಮಗ್ರಿಗಳನ್ನು ಬಿಡುತ್ತಿಲ್ಲ. ಕೇವಲ ಈಜಿಪ್ಟಿನ ಮೂಲಕ 20 ಟ್ರಕ್ ಪರಹಾರ ಸಾಮಗ್ರಿಗಳನ್ನು ಬಿಡಲಾಗಿದೆ. ನೀರು. ತೈಲ ಇಂಧನ, ಆಹಾರ, ಔಷಧಿ ಸಾಮಗ್ರಿ ಗಳ 1–2 ದಿನಗಳಿಗೆ ಸಾಕಾಗುವಷ್ಟು ದಾಸ್ತಾನು ಮಾತ್ರ ಇದ್ದು 'ಭೀಕರ ಮಾನವೀಯ ದುರಂತ ಕಾದಿದೆ' ಎಂದು ವಿಶ್ವಸಂಸ್ಥೆ ಹೇಳಿದೆ. ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದ ಇಬ್ಬರು ಅಮೆರಿಕನ್ನರು ಮತ್ತು ಇಬ್ಬರು ಇಸ್ರೇಲಿ ಹಿರಿಯ ನಾಗರಿಕರನ್ನು ಹಮಾಸ್ ಬಿಡುಗಡೆ ಮಾಡಿದೆ. ಒತ್ತೆಯಾಳುಗಳಾಗಿ ವಶಕ್ಕೆ ತೆಗೆದುಕೊಂಡು ಗಾಜಾಗೆ ಒಯ್ಯುವಾಗ ಸಾಕಷ್ಟು ಕಷ್ಟವಾದರೂ, ಗಾಜಾ ಪ್ರದೇಶ ಮುಟ್ಟಿದ ಮೇಲೆ ಹಮಾಸ್ ತಮ್ಮನ್ನು ಚೆನ್ನಾಗಿ ನೋಡಿಕೊಂಡರು ಎಂಬ ಹೇಳಿಕೆ ಹಮಾಸ್ 'ಭಯೋತ್ಪಾದಕ ದೆವ್ವಗಳು' ಎಂದು ಬಿರುಸಿನ ಪ್ರಚಾರ ನಡೆಸಿದ್ದ ಇಸ್ರೇಲಿ ಸರಕಾರಕ್ಕೆ ನುಂಗಲಾರದ ತುತ್ತಾಗಿದೆ.

ವಿಶ್ವಸಂಸ್ಥೆ ಮತ್ತು ಅಂತರ್ರಾಷ್ಟ್ರೀಯ ಪ್ರತಿಕ್ರಿಯೆ ಏನು?

ವಿಶ್ವಸಂಸ್ಥೆ ಭದ್ರತಾ ಸಮಿತಿ ತುರ್ತು ಸಭೆ ನಡೆಸಿದೆ. ಕದನ ವಿರಾಮಕ್ಕೆ ಕರೆ ಕೊಡುವ ಬ್ರೆಜಿಲ್ ಮಂಡಿಸಿದ ನಿರ್ಣಯವನ್ನು 15 ಸದಸ್ಯ ದೇಶಗಳಲ್ಲಿ ಯು.ಎಸ್ ಮಾತ್ರ ವಿರೋಧಿಸಿತು. ತನ್ನ ವಿಟೋ ಬಳಸಿ ನಿರ್ಣಯವನ್ನು ತಡೆ ಹಿಡಿಯಿತು. ಆ ಮೇಲೆ ಯುದ್ಧದಲ್ಲಿ ಕೆಲವು "'ಮಾನವೀಯ ನಿಲುಗಡೆ" ಗಳಿಗೆ ಕರೆ ಕೊಡುವ ಯು.ಎಸ್ ನಿರ್ಣಯವನ್ನು ರಶ್ಯ ಮತ್ತು ಚೀನಾ ತಮ್ಮ ವಿಟೋ ಬಳಸಿ ವಿರೋಧಿಸಿದವು. ಕದನ ವಿರಾಮಕ್ಕೆ ಕರೆ ಕೊಡದ ನಿರ್ಣಯಕ್ಕೆ ಅರ್ಥವಿಲ್ಲವೆಂದು ಅವು ಹೇಳಿವೆ. ಯು.ಎಸ್ ಅಧ್ಯಕ್ಷ ಮತ್ತು ವಿದೇಶಾಂಗ ಕಾರ್ಯದರ್ಶಿ ಗಳು, ಯು.ಕೆ ಮತ್ತು ಫ್ರಾನ್ಸ್ ನ ಪ್ರಧಾನಿಗಳು ಇಸ್ರೇಲಿಗೆ ಧಾವಿಸಿದ್ದು ತಾವು 'ಇಸ್ರೇಲಿನ ಜತೆ ನಿಲ್ಲುವುದಾಗಿಯೂ, ಅದಕ್ಕೆ ಸ್ವ–ರಕ್ಷಣೆಯಲ್ಲಿ ಗಾಜಾ ಮೇಲೆ ದಾಳಿಯ ಹಕ್ಕು ಇರುವುದಾಗಿಯೂ, ಆದರೆ ಅದು ಯುದ್ಧದ ನಿಯಮಗಳನ್ನು ಪಾಲಿಸಬೇಕೆಂದೂ ಹೇಳಿದ್ದಾರೆ. ಆದರೆ ಇಸ್ರೇಲಿನ ಜತೆ ನಿಲ್ಲುವ ಕುರಿತು ಯುರೋ ಕೂಟದಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿದೆ. ಪಶ್ಚಿಮ ಏಶ್ಯಾದ ನೆರೆಯ ದೇಶಗಳಲ್ಲಿಯೂ, ಯುರೋಪ್ ಯು.ಎಸ್ ಗಳಲ್ಲಿಯೂ ಭಾರೀ ಪ್ರದರ್ಶನಗಳು ನಡೆದಿದ್ದು ನಾಗರಿಕರ ನರಮೇಧ ಮತ್ತು ಇಸ್ರೇಲಿನ ಯುದ್ಧ ಅಪರಾಧಗಳನ್ನು ಖಂಡಿಸಿವೆ. ಇಸ್ರೇಲಿನ ಒಳಗೂ "ನಾಗರಿಕ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಆದ್ಯತೆ ಕೊಡಬೇಕು. ಅದಕ್ಕೆ ಅಡ್ಡಿಯಾಗುವ ಯಾವುದೇ ಕಾರ್ಯಾಚರಣೆ ಮಾಡಬಾರದು' ಎಂದೂ, ಹಮಾಸ್ ದಾಳಿಗೆ ತಕ್ಕ ಪರಿಸ್ಥಿತಿ ನಿರ್ಮಿಸಿದ ಮತ್ತು ಭದ್ರತಾ ವೈಫಲ್ಯಕ್ಕಾಗಿ ನೆತನ್ಯಾಹು ರಾಜೀನಾಮೆ ಕೊಡಬೇಕೆಂದೂ ಇಸ್ರೇಲಿನ ಗಮನಾರ್ಹ ಜನವಿಭಾಗ ಪ್ರದರ್ಶನಗಳನ್ನು ನಡೆಸುತ್ತಿದೆ.

ವಸಂತರಾಜ ಎನ್.ಕೆ.

ವಿಶ್ವಸಂಸ್ಥೆ ಕಾರ್ಯದರ್ಶಿ ಗುಟೆರೆಸ್ ಅವರು ಭದ್ರತಾ ಸಮಿತಿ ಉದ್ದೇಶಿಸಿ ಮಾತನಾಡುತ್ತಾ ಇಸ್ರೇಲ್ ಬಾಂಬ್ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. "ಗಾಜಾ ಜನರ ಸಮಸ್ಯೆ ಅಕ್ಟೋಬರ್ 7 ದಾಳಿಯಿಂದ ಆರಂಭವಾಗಿಲ್ಲ", "ಹಮಾಸ್ ದಾಳಿಗಳು ನಿರ್ವಾತದಲ್ಲಿ ಸಂಭವಿಸಿಲ್ಲ. ಪ್ಯಾಲೆಸ್ತೀನಿಯರನ್ನು 56 ವರ್ಷಗಳ ಉಸಿರು ಕಟ್ಟಿಸುವ ಅತಿಕ್ರಮಣಕ್ಕೆ ಗುರಿ ಮಾಡಲಾಗಿದೆ. ವಲಸೆಗಾರರು ಅವರ ಭೂಮಿಯನ್ನು ನುಂಗುತ್ತಾ ಹೋಗುವುದನ್ನು, ವ್ಯಾಪಕ ಹಿಂಸಾಚಾರದಿಂದ ಅವರನ್ನು ನಿರಾಶ್ರಿತರಾಗಿ ಮಾಡುವುದನ್ನು, ಅವರ ಜೀವನೋಪಾಯವನ್ನು ಮತ್ತು ಮನೆಗಳನ್ನು ನಾಶ ಮಾಡುವುದನ್ನು ಪ್ಯಾಲೆಸ್ತೀನಿಯರು ಅನುಭವಿಸಿದ್ದಾರೆ. ಈ ದುರ್ದಸೆಗೆ ರಾಜಕೀಯ ಪರಿಹಾರದ ಅವರ ಆಸೆ ಕಂದಿ ಹೋಗುತ್ತಿದೆ" ಎಂದು ಅವರು ಹೇಳಿದ್ದು ಇಸ್ರೇಲ್ ಸರಕಾರವನ್ನು ಕೆರಳಿಸಿದ್ದು, ಅವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ!

ಗಾಜಾ ಯುದ್ಧ ಇಡೀ ಪ್ರದೇಶಕ್ಕೆ ವ್ಯಾಪಿಸುವ ಅಪಾಯ ಇದೆಯಾ?

ಈಗಾಗಲೇ ಇಸ್ರೇಲ್ ತನ್ನ ಉತ್ತರ ಗಡಿಯಲ್ಲಿರುವ ದಕ್ಷಿಣ ಲೆಬನಾನ್ ನಲ್ಲಿರುವ ಹೆಜಬೊಲ್ಲಾ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಲೆಬನಾನ್ ಜತೆಗಿರುವ ಉತ್ತರ ಗಡಿ ಪ್ರದೇಶದಿಂದ ನಾಗರಿಕರನ್ನು ಖಾಲಿ ಮಾಡಿಸಿದೆ. ಸಿರಿಯಾದ ಎರಡು ವಿಮಾನ ನಿಲ್ದಾಣಗಳ ರನ್ ವೇ ಮೇಲೆ ದಾಳಿ ಮಾಡಿ ಅದನ್ನು ಬಳಸದಂತೆ ಮಾಡಿದೆ. ಸಿರಿಯಾದ ಮೂಲಕ ಹೆಜಬೊಲ್ಲಾ ಮತ್ತು ಹಮಾಸ್ ಗೆ ಶಸ್ತ್ರಾಸ್ತ್ರಗಳ ಪೂರೈಕೆ ತಡೆಗಟ್ಟಲು ಈ ದಾಳಿ ಎನ್ನಲಾಗಿದೆ. ಇಸ್ರೇಲ್ ಬೆದರಿಕೆ ಹಾಕುತ್ತಿರುವಂತೆ ಗಾಜಾದೊಳಗೆ ನುಗ್ಗಿ ಭೂಯುದ್ಧ ಆರಂಭಿಸಿದರೆ ಈ ಅಪಾಯ ನಿಜವಾಗಬಹುದು. ಗಾಜಾದೊಳಗೆ ನುಗ್ಗಿ ಭೂಯುದ್ಧ ಆರಂಭಿಸಿದರೆ ಅದಕ್ಕೆ ತಕ್ಕ ಉತ್ತರ ಕೊಡುವುದಾಗಿ ಲೆಬನಾನ್ ನಲ್ಲಿ ನೆಲೆ ಮತ್ತು ಸಾಕಷ್ಟು ಕ್ಷಿಪಣಿ ಹೊಂದಿರುವ ಹೆಜಬೊಲ್ಲಾ ಹೇಳಿದೆ. ಆ ಸಾಧ್ಯತೆ ದಟ್ಟವಾಗಿದೆ. ಇದು ನಿಜವಾದರೆ ಸಿರಿಯಾ ಸಹ ಇಸ್ರೇಲ್ ಮೇಲೆ ದಾಳಿ ನಡೆಸಬಹುದು. ಪಶ್ಚಿಮ ದಂಡೆಯ ಪ್ಯಾಲೆಸ್ಟೈನ್ ಪ್ರದೇಶಗಳಲ್ಲೂ ಇಸ್ರೇಲಿ ಸೈನ್ಯ ದಮನದಲ್ಲಿ ತೊಡಗಿದ್ದು ನಾಗರಿಕರ ಜತೆ ಸಂಘರ್ಷ ನಡೆಯುತ್ತಿದೆ. ಈಗಾಗಲೇ ಇಸ್ರೇಲಿ ಪಡೆಯ ಗೋಲಿಬಾರಿನಲ್ಲಿ 100 ಪ್ಯಾಲೆಸ್ತಿನಿಯರು ಸತ್ತಿದ್ದಾರೆ. ಅಲ್ಲೂ ಆಕ್ರೋಶ ಮಡುಗಟ್ಟಿದ್ದು ದಂಗೆ ಆರಂಭವಾಗಬಹುದು.

ಯು.ಎಸ್ ಈಗಾಗಲೇ ತನ್ನ ಎರಡು ದೈತ್ಯ ಯುದ್ಧ ನೌಕೆಗಳನ್ನು ಆಯಕಟ್ಟಿನ ಪ್ರದೇಶದಲ್ಲಿ ನಿಲ್ಲಿಸಿದೆ. ಯೆಮೆನ್ ನಿಂದ ಹಮಾಸ್ ಬೆಂಬಲಿಸುವ ಹೌತಿ ಗೆರಿಲ್ಲಾಗಳು ಹಾರಿಸಿದ್ದರೆನ್ನಲಾದ ಕ್ಷಿಪಣಿಗಳನ್ನು ಈ ಯುದ್ಧ ನೌಕೆಗಳಲ್ಲಿರುವ ಕ್ಷಿಪಣಿ–ವಿರೋಧಿ ಕ್ಷಿಪಣಿಗಳಿಂದ ತಡೆಯುವ ಮೂಲಕ ಸಣ್ಣ ರೀತಿಯಲ್ಲಿ ಯು.ಎಸ್ ಸಹ ಸಕ್ರಿಯ ಸಂಘರ್ಷ ಪ್ರವೇಶಿಸಿದೆ. ಇರಾಕ್ ಮತ್ತಿತರ ಅರಬ್ ದೇಶಗಳಲ್ಲಿರುವ ಯು.ಎಸ್ ಪಡೆಗಳ ಮೇಲೆ ದಾಳಿ ನಡೆಯದಂತೆ ತಡೆಯಲು ಎರಡು ಯುದ್ಧ ನೌಕೆಗಳನ್ನು ಕಳಿಸಿದೆ ಎಂದು ಯು.ಎಸ್ ಹೇಳಿದೆ. ಆದರೆ ಗಾಜಾದಲ್ಲಿ ಪೂರ್ಣ ಪ್ರಮಾಣದ ಭೂಯುದ್ಧ ಆರಂಭವಾಧರೆ ಹಮಾಸ್, ಹೆಜಬೊಲ್ಲಾ ರಕ್ಷಣೆಗೆ ಇರಾನ್ ಸಹ ಯುದ್ಧ ಪ್ರವೇಶಿಸಬಹುದು ಎಂಬ ಆತಂಕವಿದೆ. ಇರಾನ್ ಗೆ ಯುದ್ಧ ಪ್ರವೇಶಿಸದಂತೆ ಇದು ಎಚ್ಚರಿಕೆ ಎನ್ನಲಾಗಿದೆ.

ಹೀಗೆ ಯುದ್ಧ ವ್ಯಾಪಕವಾಗುವುದಕ್ಕೆ ಇಸ್ರೇಲ್ ಗಾಜಾದಲ್ಲಿ ಪೂರ್ಣ ಪ್ರಮಾಣದ ಯುದ್ಧದಲ್ಲಿ ತೊಡಗುತ್ತಾ ಎಂಬುದು ಮುಖ್ಯ ಪ್ರಶ್ನೆಯಾಗುತ್ತದೆ. ಈ ನಿರ್ಣಯವನ್ನು ಇಸ್ರೇಲ್ ಒಂಟಿಯಾಗಿ ತೆಗೆದುಕೊಳ್ಳುವುದಿಲ್ಲ. ಯು.ಎಸ್ ಮಾತ್ರವಲ್ಲ ಯು.ಕೆ., ಫ್ರಾನ್ಸ್ ಬೆಂಬಲವಿಲ್ಲದೆ ಇಸ್ರೇಲ್ ಈ ದುಸ್ಸಾಹಸಕ್ಕೆ ಕೈ ಹಾಕುವುದಿಲ್ಲ. ಹಾಗಾಗಿಯೇ ಈ ದೇಶದ ನಾಯಕರು ಇಸ್ರೇಲಿಗೆ ಧಾವಿಸಿದ್ದಾರೆ. ಈ ಯುದ್ಧವನ್ನು ವ್ಯಾಪಕಗೊಳಿಸುವುದು ತಮ್ಮ ಭೂರಾಜಕೀಯ ಭೂ–ವ್ಯೂಹಾತ್ಮಕ ದೃಷ್ಟಿಯಿಂದ ಬೇಕಾ ಮತ್ತು ಲಾಭವಾಗುತ್ತಾ ಎಂಬುದು ಮುಖ್ಯವಾಗುತ್ತದೆ.

ಇಸ್ರೇಲ್ 'ಅಬ್ರಹಾಂ ಒಪ್ಪಂದಗಳ'ನ್ನು ವಿಸ್ತರಿಸುತ್ತಾ ಎಲ್ಲ ನೆರೆಯ ಅರಬ್ ದೇಶಗಳ ಜತೆ "ಶಾಂತಿ ಮತ್ತು ಸುಭದ್ರ ಸಹ ಅಸ್ತಿತ್ವ"ದ ಸ್ಥಿತಿ ಸಾಧಿಸಿದೆ. ಹಾಗಾಗಿ ಪ್ಯಾಲೆಸ್ತೀನಿಯರ ಹಕ್ಕುಗಳ ಬಗ್ಗೆ ಕೇರ್ ಮಾಡಬೇಕಾಗಿಲ್ಲ. ಅವರ ಬೆಂಬಲಕ್ಕೆ ಯಾರೂ ಬರುವುದಿಲ್ಲ. ಹಾಗಾಗಿ ಗಾಜಾ ಮತ್ತು ಪಶ್ಚಿಮ ದಂಡೆ ಪ್ರದೇಶವನ್ನು ಇಡಿಯಾಗಿ ಅತಿಕ್ರಮಣ ನಡೆಸಿ ಇಸ್ರೇಲಿಗೆ ಸೇರಿಸಿಕೊಳ್ಳಬಹುದು. ಹಮಾಸ್ ದಾಳಿ ಈ ನಿಟ್ಟಿನಲ್ಲಿ "ಉತ್ತಮ ಅವಕಾಶ" ಎಂದು ಇಸ್ರೇಲ್ ಆಳುವವರ ಲೆಕ್ಕಾಚಾರ ಹಾಗಾಗಿ ಅದು ಯು.ಎಸ್ ಮೇಲೆ ಒತ್ತಡ ಹಾಕಿ ಭೂ ಯುದ್ಧ ಆರಂಭಿಸಲು ತುದಿಗಾಲಲ್ಲಿ ನಿಂತಿದೆ.

ಇರಾನ್ ಮತ್ತು ಸೌದಿ ಅರೇಬಿಯ, ➚





ಮೃಣಾಲ್ ಸೆನ್ ಅವರ ಕೆಲವು ಆಪ್ತ ನೆನಪುಗಳು..... ಪುಟ 16 ರಿಂದ

ಆ ಸಾಕ್ಷಚಿತ್ರದಲ್ಲಿ ಅಕಿರಾ ಕುರೋಸಾವಾರ ಬಗ್ಗೆ ಒಂದು ಫೋಟೋ ಮಾತ್ರ ತೋರಿಸಿ ಮುಗಿಸಲಾಗಿತ್ತು. ಇದೊಂದು ಘೋರ ಅನ್ಯಾಯ. ಮೃಣಾಲ್ ಸೇನ್ರು ಮಾಡಿದ್ದು ಇದೇ ತರಹದ ಅನ್ಯಾಯ ಆಗಿತ್ತಲ್ಲವೇ?

'ಶಲ್ ಐ ಬೈಟ್ ಯುವರ್ ಹ್ಯಾಂಡ್'?'

ಗಂಭೀರ ಚಿತ್ರ ನಿರ್ದೇಶಕರು ಬಾಹ್ಯ ಜಗತ್ತಿನಲ್ಲೂ ಗಂಭೀರವಾಗಿರ ಬೇಕೆಂಬ ಅಲಿಖಿತ ತೀರ್ಮಾನಕ್ಕೆ ಮೃಣಾಲ್ ಸೆನ್ರು ಒಂದು ಅಪವಾದ. ಒಂದು ಸಾಕ್ಷ ಚಿತ್ರಕ್ಕಾಗಿ ಅವರ ಸಂದರ್ಶನಕ್ಕೆ ಹೋಗಿದ್ದೆ. 'ದಾದಾ, ಐ ವಾಂಟ್ ಎ ಬೈಟ್' ಎಂದಾಗ ತಕ್ಷಣ ನನ್ನ ಕೈ ಹಿಡಿದೆಳೆದು 'ಟೆಲ್ ಮಿ, ಶಲ್ ಐ ಬೈಟ್ ಯುವರ್ ಹ್ಯಾಂಡ್?' ಅಂದು ಹಾಸ್ಯ ಮಾಡಿದರು. ಹದಿವಯಸ್ಸಿನ ಹುಡುಗರು ಮಾಡುವ ಈ ರೀತಿಯ ಪನ್ ಗಳನ್ನು ಮೃಣಾಲ್ ಸೆನ್ರು ಆಗಾಗ ಮಾಡುತ್ತಿದ್ದರೆನ್ನುವುದನ್ನು ಗಮನಿಸಿದರೆ ಲಘು ವಿನೋದ ಅವರ ಜಾಯಮಾನಕ್ಕೆ ಒಗ್ಗಿ ಹೋಗಿತ್ತು ಎನ್ನುವುದು ತಿಳಿಯುತ್ತದೆ. ದೂರದರ್ಶನದ ರಾಷ್ಟ್ರೀಯ ಪ್ರಸಾರದಲ್ಲಿ ಆಯ್ದ ಕೆಲವು ಚಿತ್ರಗಳು ಕ್ಲಾಸಿಕ್ಸ್ ಸರಣಿಯಲ್ಲಿ ಬಿತ್ತರವಾಗುತ್ತಿತ್ತು. ಆಯ್ಕೆಯ ಮಾನದಂಡ ಆ ಚಿತ್ರಗಳ ಗುಣ ಮಟ್ಟ ಅಲ್ಲ. ಅವು 25 ವರ್ಷಗಳಿಗಿಂತ ಹಳೆಯದಾಗಿರಬೇಕು ಎನ್ನುವುದು. ಆ ಮಾನದಂಡದಿಂದ ನಾನು 7 ಕ್ಲಾಸಿಕ್ ಚಿತ್ರಗಳನ್ನು ಮಾಡಿದ್ದೇನೆ ಎಂದು ಎಲ್ಲರೆದುರು ಹೇಳಿಕೊಳ್ಳುವುದರ ಮೂಲಕ ಆ ಕ್ಲಾಸಿಕ್ ಮಾನದಂಡವನ್ನೇ ಗೇಲಿ ಮಾಡುತ್ತಿದ್ದರು.

"Girish, I have come." ಇನ್ನೆಲ್ಲಿ?

ಕಲ್ಕತ್ತಾ ಚಲನ ಚಿತ್ರೋತ್ಸವದ ಜೊತೆಜೊತೆಗೇ, ಅದರ ವಿಸ್ತೃತ ಭಾಗವಾಗಿ ಸಿನೆ ಸೆಂಟ್ರಲ್ ಚಿತ್ರೋತ್ಸವವೂ ನಡೆಯುತ್ತಿತ್ತು. ನಾನು ಪ್ರತಿ ಬಾರಿ ಚಿತ್ರ ಮಾಡಿದಾಗಲೂ ಉದ್ಘಾಟನಾ ಚಿತ್ರವಾಗಿ ಸಿನೆ ಸೆಂಟ್ರಲ್ ನನ್ನ ಚಿತ್ರಗಳನ್ನೇ ಆಯ್ಕೆ ಮಾಡಿಮಾಡಿಕೊಳ್ಳುತ್ತಿತ್ತು. ಆ ಎಲ್ಲಾ ಪ್ರದರ್ಶನಕ್ಕೂ ತಪ್ಪದೇ ಹಾಜರಾಗುತ್ತಿದ್ದವರಲ್ಲಿ ಮೃಣಾಲ್ ಸೇನ್ ಪ್ರಮುಖರು. 2012ರಲ್ಲಿ 'ಕೂರ್ಮಾವತಾರ' ಚಿತ್ರ ಪ್ರದರ್ಶನಕ್ಕೂ ಬಂದಿದ್ದರು. ಚಿತ್ರದ ಅವಧಿ 2 ಗಂಟೆ 10 ನಿಮಿಷ ಎಂದು ಗೊತ್ತಾಗುತ್ತಲೇ ಸ್ವಲ್ಪ ಅಸಹನೆಯಿಂದಲೇ 'ಅಷ್ಟು ದೀರ್ಘ ಚಿತ್ರ ಯಾಕೆ ಮಾಡುತ್ತೀಯ?' ಎಂದು ಗದರಿದರು. ಅದಕ್ಕೆ ನಾನು ಲಘು ಹಾಸ್ಯದಲ್ಲಿ 'ಏನು ಮಾಡಲಿ ದಾದಾ, ಕೂರ್ಮ (ಆಮೆ) ಮಂದಗತಿಯಲ್ಲಿ ನಡೆಯುತ್ತದೆ' ಎಂದೆ. ಸೇನ್ ಅವರು ಆ ಮಾತಿಗೆ ನಕ್ಕು 'ನನಗೆ 90 ಆಗುತ್ತಾ ಬಂತು. ಆರೋಗ್ಯವೂ ಚೆನ್ನಾಗಿಲ್ಲ. 10 ನಿಮಿಷ ನೋಡಿ ಹೊರಟು ಹೋಗುತ್ತೇನೆ. ತಪ್ಪು ತಿಳಿಯಬೇಡ.' ಎಂದರು. ಇಬ್ಬರು ಸಹಾಯಕರನ್ನು ಊರುಗೋಲಾಗಿಟ್ಟುಕೊಂಡು ಅವರು ಚಿತ್ರ ವೀಕ್ಷಣೆಗೆ ಬಂದದ್ದೇ ವಿಶೇಷ. 10 ನಿಮಿಷ ಕಳೆಯುತ್ತಿದ್ದಂತೆಯೇ, ನಾನು ಚಿತ್ರಮಂದಿರದ ಮುಖ್ಯದ್ವಾರದಲ್ಲಿ ಹೊರ ಹೋಗಲಿರುವ ಮೃಣಾಲ್ ಸೇನ್ರಿಗೆ ವಂದನೆ ಹೇಳಲು ಕಾಯುತ್ತಿದ್ದೆ. ಆದರೆ ಅವರು ಪೂರ್ಣ ಚಿತ್ರ ನೋಡಿಯೇ ಹೊರಬಂದದ್ದು.

ಚಿತ್ರ ಮುಗಿಯುತ್ತಿದ್ದಂತೆಯೇ ಹೊರಬಂದ ಕಲ್ಕತ್ತಾ ಚಿತ್ರ ರಸಿಕರು ನನ್ನನ್ನು ಸುತ್ತುವರೆದು ಚಿತ್ರದ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಿದ್ದಾಗ, ಸಹಾಯಕರ ಸಹಾಯದಿಂದ ನಡೆದು ಬಂದ ಮೃಣಾಲ್ ಸೇನ್, "Girish, I have come." ಎಂದು ಹೇಳಿ ಎಂದಿನಂತೆ ಹೆಗಲ ಮೇಲೆ ಕೈ ಹಾಕಿ ಬರಸೆಳೆದು ಅಪ್ಪಿಕೊಂಡರು.

ನನ್ನ ಮುಂದಿನ ಚಿತ್ರ ತಯಾರಾಗಿ, ಅದು ಕಲ್ಕತ್ತಾದಲ್ಲಿ ಪ್ರದರ್ಶನಗೊಂಡಾಗ "Girish, I have come." ಎಂದು ತಮ್ಮ ಬ್ಯಾರಿಟೋನ್ ಕಂಠದಲ್ಲಿ ಘೋಷಿಸುತ್ತಾ ನಡೆದು ಬರುವ ಶಾಶ್ವತ ಬಂಡಾಯಗಾರ ಮೃಣಾಲ್ ಸೇನ್ ಇರುವುದಿಲ್ಲ ಎಂದು ನೆನಪಾದಾಗ ಮನಸ್ಸು ಮುದುಡುತ್ತದೆ.

(ಬೆಂಗಳೂರಿನ ಸತ್ಯಜಿತ್ ರಾಯ್ ಚಿತ್ರಸಮಾಜ ಆಯೋಜಿಸಿದ್ದ "ಮೃಣಾಲ್ ಸೇನ್ ನೆನಪು" ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ವಿಸ್ತೃತ ಕನ್ನಡ ರೂಪ.)

ಶೇ. 8 ರಷ್ಟು ಕಾರ್ಪೊರೇಟ್ ತೆರಿಗೆ ಕಡಿತ.... ಪುಟ 11 ರಿಂದ

ದಾಖಲೆಯ ಮಟ್ಟದಲ್ಲಿ ಧಾನ್ಯಗಳ ದಾಸ್ತಾನುಗಳು ತುಂಬಿವೆಯಾದರೂ, ಕೇವಲ ಹಣವನ್ನು ಉಳಿಸುವ ಸಲುವಾಗಿ, ಅದನ್ನು ವಿತರಿಸಲು ಸರ್ಕಾರಕ್ಕೆ ಇಷ್ಟವಿಲ್ಲ.

ಶ್ರೀಮಂತರಿಗೆ ಯಾವುದೇ ರಿಯಾಯಿತಿಗಳು ಆರ್ಥಿಕತೆಯನ್ನು ಉತ್ತೇಜಿಸುವುದಿಲ್ಲ. ಏಕೆಂದರೆ ಖರೀದಿ ಸಾಮರ್ಥ್ಯ ಹೆಚ್ಚಿಸಲು ಜನರ ಕೈಗೆ ಹಣ ಬೇಕೇ ವಿನಃ, ಶ್ರೀಮಂತರ ಕೈಗೆ ಮತ್ತಷ್ಟು ಹಣ ಕೊಡುವುದಲ್ಲ. ಸರ್ಕಾರವು ವಿಶೇಷವಾಗಿ, ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ಹಣವನ್ನು ಖರ್ಚು ಮಾಡುವ ಮೂಲಕ ಮತ್ತು ಶ್ರೀಮಂತರ ಮೇಲೆ ತೆರಿಗೆಯನ್ನು ಹೆಚ್ಚಿಸುವ ಮೂಲಕ ಮಾತ್ರ ಇದನ್ನು ಮಾಡಬಹುದು. ಆದರೆ ಮೋದಿ ಸರ್ಕಾರವು ಕುರುಡಾಗಿ ವಿರುದ್ಧ ದಿಕ್ಕಿನಲ್ಲಿ ಮುಂದುವರಿಯುತ್ತದೆ–ಭಾರತದ ಜನರಿಗೆ ಅಪಾರ ಮತ್ತು ನಿರಂತರ ನೋವನ್ನು ಉಂಟುಮಾಡುತ್ತದೆ.

(ಅ)ಮೃತ ಕಾಲ!

ಅಮೃತ ಕಾಲದ ಭಾರತದಲ್ಲಿ
'ಅ' ಮಾಯವಾಗಿ ಎಲ್ಲವೂ
ಅಯೋಮಯವಾಗುತಿದೆ ...

ಜನತಂತ್ರದ ಜನನಿಯಲಿ
ಪ್ರಜೆಗಳ ನುಡಿಯೆಂಬುದು
ಬರಿಯ ಮಿಥ್ಯೆ
ಪ್ರಭುಗಳೆಸಗುವ ಇಡಿಯ ರಾಡಿಯೇ
ಇಲ್ಲಿ ತಥ್ಯ

ಅಭಿವ್ಯಕ್ತಿ ಸ್ವಾತಂತ್ರ್ಯಕೆ
ಸನಿಹವಾಗಿಹುದಿಲ್ಲಿ
'ಮೃತ' ಕಾಲ

ಮಾಧ್ಯಮ ಸ್ವಾತಂತ್ರ್ಯಕೆ
ಎರಗಿಹುದಿಲ್ಲಿ
'ಮೃತ ಕಾಲ'

ಅನ್ನದಾತರ ಪರ
ದನಿಗೊದಗಿಹುದಿಲ್ಲಿ
'ಮೃತ ಕಾಲ'
ದುಡಿವ ಜನರ ದಲಿತರ
ದನಿಗೂ ಒದಗಿಹುದಿಲ್ಲಿ
'ಮೃತ ಕಾಲ'

ಬೇಟೆಗಳ ಬೇಟೆಯಾಡುವವರಿಗಿಲ್ಲ
ಕಾನೂನುಕಟ್ಟಳೆಯ ಕಟಕಟೆ
ರಾಷ್ಟ್ರ ಧರ್ಮ ಸಂವಿಧಾನಕೇ
ಒದಗಿಹುದಿಲ್ಲಿ
'ಅವನತ ಕಾಲ'

ಪ್ರಧಾನ ಸೇವಕನೆಂಬ
ಆತ್ಮರತಿಯ ವಿವಶಗುರುವಿಂದ
ನಲುಗಿಹುದು ಜನತಂತ್ರ
ಇದುವೇ ಸತ್ಯ...

ಅನೃತಾಧಿಪತಿಯ
ಬಳಗಕ್ಕಷ್ಟೇ ಇದು
ಅಮೃತಕಾಲ
ಉಳಿದೆಲ್ಲರಿಗೂ ಆಗುತಿದೆ
'ಮೃತ ಕಾಲ'

ಹಕ್ಕಿಗೆ ಕಾಳೆಸೆವ, ಬೋನಿಂದ ಚಿರತೆ ಬಿಡುವ
ಐವತ್ತಾರಿಂಚು ಎದೆಯ ಮಹಾನುಭಾವನ
ಕ್ಲಿಕ್ಕಿಸುವುದಷ್ಟೇ ದೇಶ ಪ್ರೇಮ
ಜನರೆದೆಯ ಸಂಕಟದ
ಬಿಕ್ಕಳಿಕೆಯ ಬಿತ್ತರಿಸಿದರೆ
ಅದು ಮಹಾ ದೇಶ ದ್ರೋಹ

ಇಂಡಿಯಾಕೆ ಇಡಿ ಇಡಿಯಾಗಿ
ಬೇಡಿ ತೊಡಿಸುವವರ ಇದಿರಿಸಿ
ನಿರಾಶಾಭಾವದ ಕಾರ್ಮೋಡ ಸರಿಸಿ
ಭಾರತದ ಪೂರ್ತ ಜೀವಸೆಲೆ
ಉಕ್ಕಿಸಲು ಬೇಕಿದೆ
ಜನಸಂಘರ್ಷದ
ಸಂಜೀವನಿ

–ವಿಶ್ವ

ಯು.ಎ.ಇ ಮತ್ತಿತರ ಅರಬ್ ದೇಶಗಳ ನಡುವೆ ಚೀನಾ ಮಧ್ಯಸ್ಥಿಕೆಯಲ್ಲಿ ನಡೆದ ಶಾಂತಿ ಒಪ್ಪಂದ, ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ಇರಾನ್ ಪ್ರಭಾವ, ಚೀನಾ ಜತೆಗೆ ಎಲ್ಲ ದೇಶಗಳ ಹೆಚ್ಚುತ್ತಿರುವ ಆಳ ದೂರಗಾಮಿ ಆರ್ಥಿಕ ಸಂಬಂಧ, ಯೆಮೆನ್ ಶಾಂತಿ ಒಪ್ಪಂದ ಇವೆಲ್ಲ ಬೆಳವಣಿಗೆಗಳಿಂದ ಯು.ಎಸ್ ಪ್ರಭಾವ ಈ ಪ್ರದೇಶದಲ್ಲಿ ಕುಂದಿದೆ. ಹಾಗಾಗಿ ಮತ್ತೆ ಈ ಪ್ರದೇಶದಲ್ಲಿ ತನ್ನ ಅಧಿಪತ್ಯ ಸಾಧಿಸಲು ಇತ್ತೀಚೆಗೆ ಇಂಡಿಯಾ – ಯುರೋಪ್ ಆರ್ಥಿಕ ಕಾರಿಡಾರ್ ಯೋಜನೆ ಹರಿಯ ಬಿಟ್ಟಿತ್ತು. ಈ ಹಿನ್ನೆಲೆಯಲ್ಲಿ ಯು.ಎಸ್ ತನ್ನ ವಿಶ್ವಾಸದ ಬಂಟ ಇಸ್ರೇಲಿನ ಕೈಬಿಡುವಂತಿಲ್ಲ. ಅದು ತನ್ನ ಹಿತಾಸಕ್ತಿಯಲ್ಲಿ ಸಹ ಇದೆ ಎಂದು ಕೊಂಡಿದೆ.

ಅರಬ್ ದೇಶಗಳ ಜತೆಗಿನ ಇಸ್ರೇಲಿನ ಅಬ್ರಹಾಂ ಒಪ್ಪಂದವನ್ನು ಮೊಳಕೆಯಲ್ಲೇ ಚಿವುಟಬೇಕು, ಅರಬ್ ದೇಶಗಳು ಕಾರಿಡಾರ್ ಯೋಜನೆಯಿಂದ ಹೊರ ಬಂದು ಯು.ಎಸ್ ನ್ನು ಸಹ ವಿರೋಧಿಸುವಂತೆ ಮಾಡಬೇಕು. ಇಸ್ರೇಲಿನ ಪ್ರಭುತ್ವದ ವಿರುದ್ಧ ಎಲ್ಲರನ್ನು ತಿರುಗಿಸಿ ಅದು ಕುಸಿಯುವಂತೆ ಅಥವಾ ಕನಿಷ್ಠ ಎರಡು–ದೇಶ ಪರಿಹಾರ ಸರಿಯಾಗಿ ಜಾರಿ ಮಾಡಲು ಒತ್ತಡ ಹೇರಬೇಕು. ಇದು ಹಮಾಸ್ ಈ ದಾಳಿಯನ್ನು ಆರಂಭಿಸಿದ್ದರ ಉದ್ದೇಶವೆಂದು ಯು.ಎಸ್ ಅಂದಾಜು. ಹಾಗೆ ಅಧ್ಯಕ್ಷ ಬಿಡೆನ್ ಹೇಳಿದ್ದಾರೆ ಕೂಡಾ. ಸಂಘರ್ಷ ವ್ಯಾಪಕವಾದರೆ ಮತ್ತೆ ಇಸ್ರೇಲ್ ಒಂಟಿಯಾಗಿ, ದುರ್ಬಲವಾಗಿ ತನ್ನ ಹಿತಾಸಕ್ತಿಗೆ ಧಕ್ಕೆಯಾಗಬಹುದೆಂಬ ಆತಂಕವೂ ಅದಕ್ಕಿದೆ.

ಯು.ಕೆ. ಫ್ರಾನ್ಸ್ ಮತ್ತಿತರ ಯುರೋ ದೇಶಗಳ ಪ್ರಭಾವ ಇಲ್ಲೂ ಉತ್ತರ ಆಫ್ರಿಕಾದಲ್ಲೂ ಕುಂದಿದ್ದು ಅವು ಮತ್ತೆ ತಮ್ಮ ಪ್ರಭಾವ ಸ್ಥಾಪಿಸಲು ಉತ್ಸುಕವಾಗಿವೆ. ಆದರೆ ಸಂಘರ್ಷ ವ್ಯಾಪಕವಾದರೆ ತೈಲ ಬೆಲೆ, ಪೂರೈಕೆ ಮೇಲೆ ತೀವ್ರ ಪರಿಣಾಮಗಳಾಗಬಹುದು. ಈಗಾಗಲೇ ಉಕ್ರೇನ್ ಯುದ್ಧದ ಪರಿಣಾಮಗಳಿಂದ ಬಾಧೆಗೊಳಗಾಗಿರುವ ಜನ ದಂಗೆಯೇಳಬಹುದು. ಸಂಘರ್ಷ ವ್ಯಾಪಕವಾದರೆ ಚೀನಾ, ರಶ್ಯಾಗಳೂ ಸುಮ್ಮನೆ ಕೂರಲಿಕ್ಕಿಲ್ಲ ಎಂಬ ಆತಂಕವೂ ಇದೆ.

ಹೀಗಾಗಿ ಯು.ಎಸ್ ಸದ್ಯಕ್ಕೆ ಇಸ್ರೇಲಿನ ಗಾಜಾ ಭೂ ಯುದ್ಧ ವನ್ನು ತಡೆ ಹಿಡಿದಿದೆ. ಆದರೆ ಅದರಿಂದ ಯುದ್ಧ ವ್ಯಾಪಕವಾದರೆ ಅದನ್ನು ಎದುರಿಸಲು ಅದು ಅಗತ್ಯ ತಯಾರಿ ನಡೆಸುತ್ತಿದೆ. ಗಾಜಾ ಭೂ ಯುದ್ಧ ಮಾಡುವುದಾದರೆ ಅದರ ವ್ಯೂಹ–ತಂತ್ರ, ವ್ಯಾಪ್ತಿ ಏನಿರಬೇಕು ಎಂಬ ವಿವಿಧ ಆಯ್ಕೆಗಳನ್ನು ಪರಿಶೀಲಿಸುತ್ತಿದೆ.

ಗಾಜಾ ಭೂ ಯುದ್ಧವನ್ನು ಇಸ್ರೇಲ್ ಗೆಲ್ಲಬಹುದಾ?

ಗಾಜಾ ಭೂ ಯುದ್ಧ ನಡೆದರೆ ಅದು ನಗರ ಪ್ರದೇಶಗಳಲ್ಲಿ ನಗರ ಗೆರಿಲ್ಲಾ ಕದನದಲ್ಲಿ ನುರಿತ ಮತ್ತು ದೀರ್ಘ ಟನೆಲ್ ಜಾಲದಲ್ಲಿ ನೆಲೆ ಯಿರುವ ಹಮಾಸ್ ನ್ನು ಎದುರಿಸಬೇಕಾಗುತ್ತದೆ. ಭಾರೀ ನಾಗರಿಕ ಸಾವು ನೋವು ಆಗುತ್ತದೆ. 50 ಮೀಟರ್ ಗಿಂತಲೂ ಆಳದಲ್ಲಿರುವ ಟನೆಲ್ ಗಳನ್ನು ಬಾಂಬ್ ದಾಳಿಗಳಿಂದಲೇ ನಾಶ ಮಾಡಬಹುದೆ? ಅದರೊಳಗೆ ಪಡೆಗಳನ್ನು ನುಗ್ಗಿಸಬಹುದೆ? ಆ ಇಡೀ ಪ್ರದೇಶದಲ್ಲಿ ನೆರೆ ಬರುವಂತೆ ಮಾಡಬಹುದೆ ಎಂಬ ವಿವಿಧ ತಂತ್ರಗಳನ್ನು ಯು.ಎಸ್ ಮಿಲಿಟರಿ ಪರಿಣತರು ಪರಿಶೀಲಿಸುತ್ತಿದ್ದಾರೆ. ಅವರು ಇಸ್ರೇಲಿ ಮಿಲಿಟರಿ ಪರಿಣತರ ಜತೆ ಈ ಬಗ್ಗೆ ಸಂವಾದ ನಡೆಸುತ್ತಿದ್ದಾರೆ. ಐಸಿಸ್ ವಶದಲ್ಲಿ ಹೋಗಿದ್ದ ಇರಾಕ್ ನ ಮಾಸುಲ್ ಮತ್ತು ರಕ್ಕಾ ದಲ್ಲಿ ಐಸಿಸ್ ಪಡೆಗಳಿಂದ ವಾಪಸು ಪಡೆದ ಮಿಲಿಟರಿ ಕಾರ್ಯಾಚರಣೆ ನಡೆಸಿದ್ದ ಜನರಲ್ ಆಗಲೇ ಇಸ್ರೇಲಿನಲ್ಲಿದ್ದಾನೆ. ಹಾಗಾಗಿ ಮಾಸುಲ್–ರಕ್ಕಾ ಮಾದರಿ ಅನುಸರಿಸಬಹುದೇ ಎಂಬ ಚಿಂತನೆ ನಡೆದಿದೆ.

ಆದರೆ ಮಾಸುಲ್–ರಕ್ಕಾ ಮತ್ತು ಗಾಜಾ ನಡುವೆ ಮುಖ್ಯ ವ್ಯತ್ಯಾಸಗಳೂ ಇದ್ದು ಇದು ಅದಕ್ಕಿಂತಲೂ ಹೆಚ್ಚು ತೀವ್ರ ಸವಾಲಿನವು. ಮಾಸುಲ್–ರಕ್ಕಾ ದಲ್ಲಿ ಭಾರೀ ಬಾಂಬ್ ದಾಳಿ ಆರಂಭಿಸುತ್ತಿದ್ದಂತೆ ನಾಗರಿಕರು ಮತ್ತು ಐಸಿಸ್ ಪಡೆ ಆ ಪ್ರದೇಶ ಬಿಟ್ಟು ಗ್ರಾಮೀಣ ಪ್ರದೇಶಗಳಿಗೆ ಹೋಗಿದ್ದರು. ಹಾಗಾಗಿ ಯು.ಎಸ್ ಪಡೆಗಳ ಕೆಲಸ ಸುಲಭವಾಗಿತ್ತು. ಅಲ್ಲದೆ ಹಾಮಾಸ್ ಗೂ ಐಸಿಸ್ ಗೂ ಬಹಳ ವ್ಯತ್ಯಾಸಗಳಿವೆ. ಐಸಿಸ್ ನಲ್ಲಿ ಜನರ ವಿಶ್ವಾಸ ಮತ್ತು ಹಿಡಿತ ಬಹಳ ಕಡಿಮೆಯಿತ್ತು. ಐಸಿಸ್ ಪಡೆಗಳಲ್ಲಿ ಸುಸಜ್ಜಿತ ಪಡೆಗಳ ಜತೆ ದೀರ್ಘ ಹೋರಾಟದ ಛಲವೂ ಇರಲಿಲ್ಲ. ಹಮಾಸ್ ಗಾಜಾ ಜನತೆಯ ವಿಶ್ವಾಸವನ್ನೂ ಮತ್ತು ಅವರ ಮೇಲೆ ಹಿಡಿತವನ್ನೂ ಹೊಂದಿದೆ. ಸ್ಥಳದ ಆಳವಾದ ಅರಿವು ಮತ್ತು ದೀರ್ಘ ಹೋರಾಟದ ಛಲವನ್ನೂ ಹೊಂದಿದೆ. ಗಾಜಾದಿಂದ ಓಡಿ ಹೋಗಲು ಅವಕಾಶವೇ ಇಲ್ಲವಾದ್ದರಿಂದ ಪ್ರತಿರೋಧ ತೀವ್ರ ಮತ್ತು ದೀರ್ಘವಾಗಿರಬಹುದು. ಅದರ ಟನೆಲ್ ಜಾಲವನ್ನು ಬೇಧಿಸುವುದೂ ಸುಲಭವಾಗಲಿಕ್ಕಿಲ್ಲ.

ಹಾಗಾಗಿ ಇಸ್ರೇಲ್–ಯು.ಎಸ್.–ಇಸ್ರೇಲ್ ಪಡೆಗಳು ಒಂದೊಮ್ಮೆ ಈ ದುಸ್ಸಾಹಸಕ್ಕೆ ಇಳಿದರೆ ಭಾರಿ ನಾಗರಿಕ ಸಾವು–ನೋವು ಆಗುವುದು, ಹೋರಾಟ ದೀರ್ಘವಾಗಿರುವುದೂ ಖಂಡಿತ. ಮಾಸುಲ್–ರಕ್ಕಾ ಜನಸಂಖ್ಯೆ 16 ಲಕ್ಷವಿದ್ದು ಓಡಿ ಹೋಗಲು ಅವಕಾಶವಿದ್ದರೂ 10 ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದರು. ಆದರೂ ಉಕ್ರೇನಿನಲ್ಲಿ ಯು.ಎಸ್ (ಪ್ರಾಕ್ಸಿಯಾದರೂ) ದುಸ್ಸಾಹಸ ನೋಡಿದರೆ ಇಲ್ಲೂ ಅದು ಮರುಕಳಿಸಲಿಕ್ಕಿಲ್ಲ ಎನ್ನುವಂತಿಲ್ಲ. ಇಂತಹ ನಿರ್ಧಾರ ಮಾಡಿದರೆ ಇಸ್ರೇಲ್ ಪಡೆಗಳು ಸರಣಿ ಯುದ್ಧ ಅಪರಾಧಗಳಿಗೆ ಸಹ ತಯಾರಿ ನಡೆಸಬೇಕು. ಆದರೆ ಫಲಿತಾಂಶ ಮಾಸುಲ್–ರಕ್ಕಾ ಮಾದರಿಯಲ್ಲಿರುತ್ತದೆ ಎಂದು ಹೇಳುವಂತಿಲ್ಲ. ಆದರೆ ಅಂತರ್ರಾಷ್ಟ್ರೀಯ ಪ್ರತಿಕ್ರಿಯೆ ಇದನ್ನು ಆಗಗೊಡಲಿಕ್ಕಿಲ್ಲ. ಈ ಯುದ್ಧ ವ್ಯಾಪಕವಾದರೆ ಇಸ್ರೇಲಿ ನಾಗರಿಕರ ಸಾವು–ನೋವೂ ಹೆಚ್ಚಿರುವ ಎಲ್ಲ ಸಾಧ್ಯತೆಗಳಿವೆ. ಆಗ ಇಸ್ರೇಲಿನೊಳಗೂ ಯುದ್ಧಕ್ಕೆ ಈಗಿನ ಬೆಂಬಲ ಉಳಿಸಿಕೊಳ್ಳುವುದು ಕಷ್ಟವಾಗಬಹುದು.

NEW No. MAG(3)/NPP/205/2021-2022
JANASHAKTHI KANNADA VARA PATRIKE October 30-November 5, 2023 Price: Rs. 10/- Date of Publication: 27 October 2023 RNI No. KARKAN /2006/17926 Posted on 28-10-2023
Posted at BG PSO, BG - 560026 **Posted at Periodical Rate -** Rs. 2

ಶಾಶ್ವತ ಪ್ರಯೋಗಶೀಲ ಮೃಣಾಲ್ ಸೆನ್
ಮೃಣಾಲ್ ಸೆನ್ ಅವರ ಕೆಲವು ಆಪ್ತ ನೆನಪುಗಳು



ಮೃಣಾಲ್ ಸೆನ್ ವಿಶ್ವಮನ್ನಣೆ ಪಡೆದ ಭಾರತದ ಹೊಸ ಅಲೆಯ ಸಿನೆಮಾ ದ ಪ್ರವರ್ತಕ ತ್ರಿಮೂರ್ತಿಗಳಲ್ಲಿ (ಸತ್ಯಜಿತ್ ರೇ, ರಿತ್ವಿಕ್ ಘಟಕ್ ಇನ್ನಿಬ್ಬರು) ಒಬ್ಬರು. ಈ ವರ್ಷ ಅವರ ಹುಟ್ಟಿನ ಶತಮಾನೋತ್ಸವ. ಆ ಸಂದರ್ಭದಲ್ಲಿ ಮೃಣಾಲ್ ಸೆನ್ ಕುರಿತು ಭಾರತದ ಸಮಕಾಲೀನ ಸಿನೆಮಾದ ದಿಗ್ಗಜರಲ್ಲಿ ಒಬ್ಬರಾದ ಮತ್ತು ಮೃಣಾಲ್ ಸೆನ್ ಅವರ ಜತೆ ಒಡನಾಟವಿದ್ದ ಗಿರೀಶ್ ಕಾಸರವಳ್ಳಿ ಅವರ ದೀರ್ಘ ಲೇಖನ. ಮೃಣಾಲ್ ಸೆನ್ ಅವರ ಸಿನೆಮಾಯಾನದ ಹಿಂದಿನ ಪ್ರೇರಣೆ, ಅದರ ಮೂರು ಹಂತಗಳ ಮತ್ತು ಕೆಲವು ಗಮನಾರ್ಹ ಸಿನಿಮಾಗಳ ಸ್ಥೂಲ ವಿಶ್ಲೇಷಣಾತ್ಮಕ ಪರಿಚಯ, ಕೆಲವು ಘಟನೆಗಳ ಮೂಲಕ ಅವರ ವ್ಯಕ್ತಿ ಚಿತ್ರಣ, ಅವರ ಜತೆಗಿನ ಒಡನಾಟದ ನೆನಪುಗಳ ಮೆಲುಕು – ಇವೆಲ್ಲವುಗಳನ್ನು ಒಳಗೊಂಡ ಈ ಸಮಗ್ರ ಲೇಖನವನ್ನು ನಾಲ್ಕು ಭಾಗಗಳಲ್ಲಿ ಪ್ರಕಟಿಸಲಾಗುತ್ತಿದೆ. ಭಾಗ–1 ರಲ್ಲಿ ಹೊಸ ಅಲೆಯ ತ್ರಿಮೂರ್ತಿಗಳ ವಿಭಿನ್ನತೆ, ವಿಶಿಷ್ಟತೆಗಳ ಅನಾವರಣ, ಮೃಣಾಲ್ ಸಿನೆಮಾಯಾನದ ಹಿಂದಿನ ಪ್ರೇರಣೆ, ಶಾಶ್ವತ ಪ್ರಯೋಗಶೀಲತೆ, ಮೊದಲ ಹಂತ ಮತ್ತು ಭುವನ್ ಶೋಂ ಸ್ಥೂಲ ವಿಶ್ಲೇಷಣಾತ್ಮಕ ಪರಿಚಯವಿದೆ. ಭಾಗ–2 ರಲ್ಲಿ ಅವರ ಸಿನೆಮಾಯಾನದ 'ಸಾಮಾಜಿಕ ಪರಿವರ್ತನೆ'ಯ ಎರಡನೆಯ ಹಂತದ ಮತ್ತು ಮೂರನೆಯ ಹಂತವಾದ 'critical insider' ಹಂತಕ್ಕೆ ಸ್ಥಿತ್ಯಂತರದ ನಿರೂಪಣೆ ಇದೆ. ಭಾಗ–3 ರಲ್ಲಿ ಮಧ್ಯಮ ವರ್ಗದ ಆತ್ಮಾವಲೋಕನದ ಮೂರನೆಯ ಹಂತದ ಚಿತ್ರಗಳ ವಿಶ್ಲೇಷಣೆ ಮತ್ತು ಅವರ ಧೋರಣೆ ನಿರೂಪಿಸುವ ಕೆಲವು ಗಮನಾರ್ಹ ಘಟನೆಗಳ ಉಲ್ಲೇಖವಿದೆ. ಈ ಭಾಗ–4ರಲ್ಲಿ ಮೃಣಾಲ್ ಸೆನ್ ಅವರ ಜತೆಗಿನ ಕೆಲವು ಆಪ್ತ ನೆನಪುಗಳ ಮೆಲುಕು ಹಾಕುತ್ತಾರೆ.



ಭಾಗ 4

ಗಿರೀಶ್ ಕಾಸರವಳ್ಳಿ

ನಾನು ಅವರ ಚಿತ್ರಗಳನ್ನು ಮೆಚ್ಚುವಷ್ಟೇ, ಅವರನ್ನು ವ್ಯಕ್ತಿಯಾಗಿಯೂ ಮೆಚ್ಚುತ್ತಿದ್ದೆ. ಇದು ನನ್ನೊಬ್ಬನ ಅನ್ನಿಸಿಕೆಯಲ್ಲ. ಅವರನ್ನು ಹತ್ತಿರದಿಂದ ಬಲ್ಲ ಅನೇಕರು ಒಪ್ಪುವ ಮಾತು. ನೇರ ನಡೆ, ಸ್ಪಷ್ಟ ಮಾತುಗಳು, ನಿರ್ಭಿಡೆಯಿಂದ ತನ್ನ ಅನ್ನಿಸಿಕೆಯನ್ನು ಹೇಳುವ ಪರಿ, ಸಿನಿಮಾ ಗ್ಲಾಮರ್ ಲೋಕಕ್ಕೆ ಅಪವಾದವಾಗುವಂತಹ ಮಧ್ಯಮ ವರ್ಗದ ಜೀವನ ಕ್ರಮ ಇವು ಪೂರಕ ಅಂಶಗಳು. ಸದಾ ಬಿಳಿಯ ಜುಬ್ಬಾ, ಪೈಜಾಮ, ಕೈಲ್ಲೊಂದು ಸಿಗಾರ್ ಪೈಪು, ಇಂಗ್ಲೀಷ್ ಸಂಭಾಷಣೆಯಲ್ಲೂ ಕಾಣುವ ಬಂಗಾಳೀ ಛಾಪು. ಅಷ್ಟೇ ವಿಶಿಷ್ಟವಾದದ್ದು ಯಾವ ಭಾರತೀಯ ಸಿನಿಮಾ ನಿರ್ದೇಶಕನಲ್ಲೂ ಕಾಣ ಸಿಗದ ತನ್ನ ಚಿತ್ರಗಳನ್ನೇ ವ್ಯಾಖ್ಯಾನಿಸಿಕೊಂಡು ಅವುಗಳ ಬಗ್ಗೆ ಲಘುವಾಗಿ ಮಾತನಾಡುವ ಪ್ರವೃತ್ತಿ. ತಮ್ಮ ಮೊದಲ ಚಿತ್ರ "ರಾತ್ ಬೋರ್" (1956 ಬಂಗಾಲಿ) ಚಿತ್ರವು ಕೆಟ್ಟ ಚಿತ್ರಗಳಲ್ಲೇ ಅತ್ಯಂತ ಕೆಟ್ಟ ಚಿತ್ರ ಎಂದು ಯಾವುದೇ ಮುಜುಗರವಿಲ್ಲದೇ ಕೆಲವು ಸಂದರ್ಶನಗಳಲ್ಲಿ ಹೇಳಿಕೊಂಡಿದ್ದುಂಟು. ಹಾಗೆಯೇ ತನ್ನ ಅನೇಕ ಚಿತ್ರಗಳು ಕಮರ್ಷಿಯಲ್ ಫ್ಲಾಪ್ ಎಂಬುದನ್ನೂ ಅಷ್ಟೇ ನೇರವಾಗಿ ಹೇಳಿಕೊಳ್ಳುತ್ತಿದ್ದರು. ಅವರ ಚಿತ್ರಗಳ ಬಗ್ಗೆ ನಿರ್ಭಿಡೆಯಿಂದ ಅಭಿಪ್ರಾಯಗಳನ್ನು ಹೇಳಿದಾಗಲೂ ಸಿಟ್ಟಾಗದಿದ್ದ ಕೆಲವೇ ಕೆಲವು ಚಿತ್ರೋದ್ಯಮದ ವ್ಯಕ್ತಿಗಳಲ್ಲಿ ಅವರೊಬ್ಬರು.

ಮೊದಲ ಭೇಟಿ

ಮೃಣಾಲ್ ಸೇನ್ ರನ್ನು ನಾನು ಮೊದಲ ಬಾರಿಗೆ ಮುಖಾಮುಖಿಯಾದದ್ದು ಒಂದು ಅಹಿತಕರ ಸಂಬಂಧಕ್ಕೆ ನಾಂದಿಯಾಗಿರಬೇಕಿತ್ತು. ಹಾಗಾಗದೇ ಅದು ಸ್ನೇಹಕ್ಕೆ ತಿರುಗಿದ್ದು ಮೃಣಾಲ್ ಸೇನರ ಸಮಚಿತ್ತ ಮನೋಭಾವಕ್ಕೆ ನಿದರ್ಶನ.

ಅವರ ಖ್ಯಾತ ಚಿತ್ರ 'ಭುವನ್ ಷೋಂ'ಗೆ ದೆಹಲಿಯ ಅಂತಾರಾಷ್ಟೀಯ ಚಲನ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದಾಗ ನಾನಿನ್ನೂ ಮಣಿಪಾಲದ ಫಾರ್ಮಸಿ ಕಾಲೇಜಿನಲ್ಲಿ ಬಿ. ಫಾರ್ಮಸಿ ಓದುತ್ತಿದ್ದೆ. ಅದನ್ನು ನೋಡಲು ತವಕಿಸುತ್ತಿದ್ದರೂ ನಮ್ಮೂರಿನ ಚಿತ್ರ ಮಂದಿರಗಳಲ್ಲಿ ಅದು ಪ್ರದರ್ಶನಕ್ಕೆ ಬರಲಿಲ್ಲ. ಮುಂದೆ ಹೈದರಾಬಾದಿನಲ್ಲಿ Indian Drug and Pharmaceutical Company ಯಲ್ಲಿ ತರಬೇತಿಗೆ ಹೋದಾಗ ಆ ಚಿತ್ರವನ್ನು ನೋಡುವ ಅವಕಾಶ ದೊರೆತಿತ್ತು. ನಂತರ ಪುಣೆಯ ಫಿಲ್ಮ್ ಮತ್ತು ಟಿವಿ ಇನ್ ಸ್ಟಿಟ್ಯೂಟ್ಗೆ ಸೇರಲು ಬಯಸಿ ಸಂದರ್ಶನಕ್ಕೆ ಹೋದಾಗ ಅಲ್ಲಿದ್ದ ನಾಲ್ವರು ಸಂದರ್ಶಕರಲ್ಲಿ ಮೃಣಾಲ್ ಸೇನರೂ ಒಬ್ಬರು. 'ಭುವನ್ ಷೋಂ' ಚಿತ್ರವನ್ನು ನೋಡಿದ್ದೇನೆ ಎಂದು ಹೇಳಿದ್ದೇ, ಆ ಚಿತ್ರದ ಬಗ್ಗೆ ನನ್ನ ಅಭಿಪ್ರಾಯ ಕೇಳಿದರು. ನಾನು ವಯೋ ಸಹಜ ದಾರ್ಷ್ಟ್ಯದಿಂದ 'ಅದೊಂದು ಕೆಟ್ಟ ಚಿತ್ರ. ತುಂಬಾ ಗಿಮಿಕಿಯಾಗಿದೆ. ಪಾತ್ರ ಚಿತ್ರಣದಲ್ಲಿ ಸಂಯಮವಿಲ್ಲ. ಹಾಸ್ಯ ಒರಟೊರಟಾಗಿದೆ' ಎಂದೆ. (ಈ ಅಭಿಪ್ರಾಯಕ್ಕೆ ಈಗಲೂ ಬದ್ಧನಾಗಿದ್ದೇನೆ.) ಪ್ರವೇಶ ಕೇಳಿ ಬಂದ ಅಭ್ಯರ್ಥಿಯ ಈ ಕಟು ಟೀಕೆ ಅವರಿಗೆ ಸಿಟ್ಟು ತರಿಸಬೇಕಿತ್ತು. ಆದರೆ ಅವರು ನಕ್ಕು ಸುಮ್ಮನಾಗಿದ್ದು ನೋಡಿದಾಗ ಈ ಮನುಷ್ಯ ಎಲ್ಲರಂತಲ್ಲ ಎನಿಸಿತು.

'ಘಟಶ್ರಾದ್ಧ'ದ ಕುರಿತು 'ಮತ್ಸರ'

ಎರಡನೇಯ ಬಾರಿ ಅವರನ್ನು ಭೇಟಿಯಾದದ್ದು 1978ರಲ್ಲಿ. 'ಘಟಶ್ರಾದ್ಧ' ಚಿತ್ರ ಆಗಷ್ಟೇ ಪೂರ್ಣಗೊಂಡಿತ್ತಾದರೂ ಬಿಡುಗಡೆಯಾಗಿರಲಿಲ್ಲ. ಅದೇ ವೇಳೆಗೆ 'ಸುಚಿತ್ರಾ' ಚಿತ್ರ ಸಮಾಜದವರು ಆಯೋಜಿಸಿದ್ದ 'ನಾಸ್ಟಾಲ್ಜಿಯಾ' ಚಿತ್ರೋತ್ಸವದ ಉದ್ಘಾಟನೆಗೆಂದು ಮೃಣಾಲ್ ಸೇನರು ಆಗಮಿಸಿದ್ದರು. ಆ ವೇಳೆಗಾಗಲೇ 'ಘಟಶ್ರಾದ್ಧ' ನೋಡಿದ್ದ ಕುಮಾರ್ ಸಹಾನಿಯವರು 'ಅದೊಂದು ಅಪೂರ್ವ ಚಿತ್ರ' ಎಂದು ಹೇಳಿದ್ದರಂತೆ. ತೋರಿಸು ಎಂದರು. ಸಮಾರಂಭ ಮುಗಿಸಿಕೊಂಡು ಚಿತ್ರ ನೋಡಲು ಚಾಮುಂಡೇಶ್ವರಿ ಸ್ಟೂಡಿಯೋಗೆ ಅವರು ಬಂದದ್ದು ರಾತ್ರೆ 11 ಗಂಟೆಗೆ. ಸ್ವಲ್ಪ ಹೊತ್ತು ನೋಡಿ ಹೋಗಬಹುದೆಂದು ನಾನು ಭಾವಿಸಿದರೆ, ಪೂರ್ತಿ ಸಿನಿಮಾ ನೋಡಿದರು. ನಂತರ ಸ್ಟೂಡಿಯೋ ಆವರಣದಲ್ಲಿದ್ದ ಮರದ ಕಟ್ಟೆಯ ಬಳಿ ಕುಳಿತು ಬೆಳಗ್ಗಿನ ಜಾವ 3:30ರವರೆಗೂ ಚಿತ್ರವನ್ನು ಎಳೆಎಳೆಯಾಗಿ ವಿಶ್ಲೇಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಬೆನ್ನು ತಟ್ಟಿದರು. ಅದಾಗಿ ಎರಡು ವಾರದೊಳಗೇ Illustrated Weekly ಯಲ್ಲಿ ಈ ಚಿತ್ರದ ಬಗ್ಗೆ ದೀರ್ಘ ಲೇಖನ ಬರೆದು 'ಇಂತಹ ಚಿತ್ರ ತಾನು ಮಾಡಲಿಲ್ಲವಲ್ಲ ಎಂದು ಮತ್ಸರ ಬರುತ್ತದೆ' – ಎಂದಿದ್ದರು. (ಪ್ರಕಾಶ್ ಝಾ ರ 'ದಾಮುಲ್' ನೋಡಿದ ನಂತರವೂ ಇಂತಹದ್ದೇ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು.) ಇದು ಅವರ ಪ್ರಾಮಾಣಿಕ ಅಭಿಪ್ರಾಯವಾಗಿತ್ತೇ ಗೊತ್ತಿಲ್ಲ. ಆದರೆ ಸದಾ ಯುವಕರನ್ನು ಉತ್ತೇಜಿಸುತ್ತಿದ್ದ ಮೃಣಾಲ್ ಸೆನ್ ರ ಈ ತರಹದ ಅತೀ ಉದಾರ ಹೊಗಳಿಕೆಯು ತರುಣ ಚಿತ್ರ ನಿರ್ದೇಶಕರಲ್ಲಿ ಚೈತನ್ಯ ತುಂಬುತ್ತದೆ ಎಂಬ ಕಾರಣದಿಂದ ಹೇಳಿಕೆ ಕೊಟ್ಟಿರಬಹುದು ಎಂದು ಈಗಲೂ ನನಗನ್ನಿಸುತ್ತದೆ.

'ಘಟಶ್ರಾದ್ಧ' ಚಿತ್ರದ ಲೆನ್ಸಿಂಗ್, ಟ್ರಾನ್ಸಿಷನ್ಸ್ ಮೊದಲಾದ ತಾಂತ್ರಿಕ ಅಂಶಗಳ ಬಗ್ಗೆ ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದ ಅವರು ಒಂದು ದೃಶ್ಯ ವಿವರ ಬಗ್ಗೆ ದೀರ್ಘವಾಗಿ ಚರ್ಚೆ ನಡೆಸಿದರು. ಗರ್ಭಪಾತದ ನಂತರ ಚಿಕ್ಕ ಹುಡುಗ ನಾಣಿಯೊಂದಿಗೆ ಯಮುನಕ್ಕ ಮನೆಗೆ ವಾಪಾಸ್ಸಾಗುತ್ತಿರುವಾಗ, ಶಾಸ್ತ್ರಿ, ಗಣೇಶ ಬಂದು ನಾಣಿಯನ್ನು ಎತ್ತಿಕೊಂಡೊಯ್ಯುತ್ತಾರೆ. ತನಗೆ ಬಹಿಷ್ಕಾರ ಹಾಕಲಾಗುವುದು ಎಂದು ತಿಳಿದ ಯಮುನಕ್ಕ ಗಟ್ಟಿಯಾಗಿ ರೋಧಿಸುತ್ತಾ ಕುಸಿದು ಕುಳಿತುಕೊಳ್ಳುತ್ತಾಳೆ. ಮುಂದಿನ ದೃಶ್ಯದಲ್ಲಿ ಯಮುನಕ್ಕ ತಂದೆ ಅವಳಿಗೆ 'ಘಟಶ್ರಾದ್ಧ' ಕ್ರಿಯೆಯನ್ನು ವಿಧ್ಯುಕ್ತವಾಗಿ ಮಾಡುತ್ತಿರುವಾಗಲೂ ಅವಳ ಅಳು ಕೇಳಿಸುತ್ತಿರುವಂತೆ ಸಂಕಲನ ಮಾಡಿದ್ದೆವು. ಈ ಓವರ್ ಲಾಪಿಂಗ್ (overlapping) ನ್ನು ಬಹಳ ಮೆಚ್ಚಿ, ಅವರು ಅದು ಎಷ್ಟೊಂದು ಧ್ವನಿಗಳನ್ನು ಪಡೆಯುತ್ತದೆ ಎನ್ನುವುದರ ಬಗ್ಗೆ, ಅದರ ಅರ್ಥ ಬಾಹುಳ್ಯದ ಬಗ್ಗೆ ದೀರ್ಘವಾಗಿ ಆ ದಿನ ಮಾತನಾಡಿದ್ದರು.

1981ರಲ್ಲಿ ತೆರೆ ಕಂಡ ಅವರ ನಿರ್ದೇಶನದ 'ಏಕ್ ದಿನ್ ಪ್ರತಿ ದಿನ್' ಚಿತ್ರದಲ್ಲಿ ಒಂದು ದೃಶ್ಯವಿದೆ. ಕೆಲಸಕ್ಕೆ ಹೋದ ಮಗಳು ರಾತ್ರಿಯಾದರೂ ಬಾರದಿದ್ದಾಗ ಚಾಳ್ನ ಉಳಿದ ಮನೆಯವರು ಕೆಟ್ಟ ಕುತೂಹಲದಿಂದ ಈ ಘಟನಾವಳಿಗಳನ್ನು ಅವಲೋಕಿಸುತ್ತಿರುತ್ತಾರೆ. ಸರಿ ರಾತ್ರಿಯಲ್ಲಿ ಮಗಳು ವಾಪಸ್ಸಾದಾಗ ತನ್ನ ಮಾನ ಕಳೆದಳೆಂದು ತಾಯಿ ಬೈದಾಗ ಮಗಳು ಗಟ್ಟಿದನಿಯಲ್ಲಿ ರೋದಿಸುತ್ತಾಳೆ. ರಾತ್ರಿ ಹೊತ್ತು ಝಗಮಗಿಸುವ ಕಲ್ಕತ್ತಾ ನಗರದ ಮೇಲೆ ಆ ಅಳುವನ್ನ ಓವರ್ ಲ್ಯಾಪ್ ಮಾಡಲಾಗಿದೆ. ಈ ತಂತ್ರಕ್ಕೆ 'ಘಟಶ್ರಾದ್ಧ' ಕಾರಣವಾಗಿದ್ದಿರ ಬಹುದೇ ಎಂಬ ಆಲೋಚನೆ ನನ್ನನ್ನು ಪುಳಕಿತನನ್ನಾಗಿಸುತ್ತಿದೆ.

ಕನ್ನಡ ಚಿತ್ರರಂಗಕ್ಕೆ ಅನ್ಯಾಯವಾಯಿತಲ್ಲ?

ಚಲನಚಿತ್ರಕ್ಕೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಸಂಸ್ಥೆಯೊಂದು ಎಲ್ಲ ದೇಶಗಳ ಚಿತ್ರರಂಗದ ಬಗ್ಗೆ ಸಾಕ್ಷಚಿತ್ರಗಳನ್ನು ಮಾಡಲು ಆಯಾ ದೇಶದ ಖ್ಯಾತ ನಿರ್ದೇಶಕರಿಗೆ ಆ ಜವಾಬ್ದಾರಿ ವಹಿಸಿತ್ತು. ಭಾರತೀಯ ಚಿತ್ರರಂಗದ ಬಗ್ಗೆ ಸಾಕ್ಷಚಿತ್ರ ಮಾಡುವ ಜವಾಬ್ದಾರಿಯನ್ನು ಮೃಣಾಲ್ ಸೇನ್ರಿಗೆ ಒಪ್ಪಿಸಲಾಯಿತು. ಆದರೆ ಆ ಚಿತ್ರದಲ್ಲಿ ಕನ್ನಡ ಚಿತ್ರರಂಗದ ಬಗ್ಗೆ ಒಂದಿನಿತೂ ಸೊಲ್ಲೇ ಇರಲಿಲ್ಲ. ಕನ್ನಡದಲ್ಲಿ ತಯಾರಾದ ಕಲಾತ್ಮಕ ಚಿತ್ರಗಳ ಬಗ್ಗೆ ಸದಾ ಉಮೇದಿನಿಂದ ಮಾತನಾಡುತ್ತಿದ್ದ ಮೃಣಾಲ್ ಸೇನರು ಈ ಚಿತ್ರರಂಗವನ್ನು ಕಡೆಗಣಿಸಿದ್ದೇಕೆ ಎಂದು ಈಗಲೂ ಅರ್ಥವಾಗುತ್ತಿಲ್ಲ.

ಜಪಾನ್ ಚಿತ್ರರಂಗದ ಬಗ್ಗೆ ಚಿತ್ರ ನಿರ್ಮಿಸಿದ್ದು ಖ್ಯಾತ ಚಿತ್ರ ನಿರ್ದೇಶಕ ನಾಗೀಸಾ ಓಷಿಮಾ. ಆದರೆ **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**